ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ

ಸಂಪುಟ 21 ಸಂಚಿಕೆ 19 ಮೇ 4-10, 1998 ರೂ. 2.00

ಅಧ್ಯಕ್ಷೀಯ ಮಾದರಿಯ ಪ್ರತಿಪಾದನೆ: ಒಂದು ಬಿಜೆಪಿ ಸಂಚು

ಸಂವಿಧಾನ ವಿಮರ್ಶೆಯ ಹೆಸರಲ್ಲಿ ಕೇಂದ್ರ ಗೃಹಮಂತ್ರಿಗಳು ಮುಂದಿಟ್ಟಿರುವ ಪ್ರಸ್ತಾವಗಳು ಭಾರತೀಯ ಸಂವಿಧಾನವನ್ನು ಮುಳುಗಿಸಿಬಿಡುವ ಬಿಜೆಪಿಯ ದುಷ್ಟ ಆಶಯಗಳ ಪ್ರತೀಕ ಎಂದು ಸಿಪಿಐ(ಎಂ) ಪೊಲಿಟ್‌ಬ್ಯೂರೋ ಬಲವಾಗಿ ಖಂಡಿಸಿದೆ. ಎಲ್ಲಾ ಪ್ರಭುತ್ವವಾದಿ ರಾಜಕೀಯ ಪಕ್ಷಗಳು ಹಾಗೂ ಸಾರ್ವಜನಿಕ ಅಭಿಪ್ರಾಯ ಇದರ ವಿರುದ್ಧ ದೃಢವಾಗಿ ಎದ್ದು ನಿಂತು ಈ ದುಷ್ಟ ತಂತ್ರಗಳನ್ನು ವಿಫಲಗೊಳಿಸಬೇಕು ಎಂದು ಸಿಪಿಐ(ಎಂ) ಪೊಲಿಟ್‌ಬ್ಯೂರೋ ಮನವಿ ಮಾಡಿದೆ.

'ಸಂವಿಧಾನವನ್ನು ವಿಮರ್ಶಿಸುವ ಅಗತ್ಯ' ಎಂಬ ವಿಷಯದ ಬಗ್ಗೆ ಪಾಟ್ನಾದಲ್ಲಿ ಭಾಷಣ ಮಾಡುತ್ತಾ ಕೇಂದ್ರ ಗೃಹಮಂತ್ರಿ ಹಾಗೂ ಬಿಜೆಪಿ ಅಧ್ಯಕ್ಷ ಎಲ್.ಕೆ. ಅಡ್ವಾಣಿಯವರು ಮಾಡಿದ ಹಲವು ಟಿಪ್ಪಣಿಗಳು ಸಂವಿಧಾನದ ಮೂಲಭೂತ ಲಕ್ಷಣಗಳನ್ನು ಕುರಿತಂತೆ ಬಿಜೆಪಿಯ ದುಷ್ಟ ತಂತ್ರಗಳನ್ನು ಬಯಲಿಗೆಳೆದಿವೆ ಎಂದು ಪೊಲಿಟ್‌ಬ್ಯೂರೋ ಅಭಿಪ್ರಾಯ ಪಟ್ಟಿದೆ.

ಸಂವಿಧಾನದ ವಿಮರ್ಶೆಯ ಪ್ರಕ್ರಿಯೆಯನ್ನು ಆರಂಭಿಸಲಿಕ್ಕೆ ಸಂಸತ್ತಿನೊಳಗೆ ಮತ್ತು ಹೊರಗೆ ವ್ಯಾಪಕ ಸಮಾಲೋಚನೆಗಳು ಹಾಗೂ ಚರ್ಚೆಗಳ ಅವಶ್ಯಕತೆಯಿರುವಾಗ ಅಡ್ವಾಣಿಯವರು ಇಂತಹ ವಿಮರ್ಶೆಯ ಅಗತ್ಯವಿದೆಯೆಂದು ವಿವರಿಸುವ ನೆವದಲ್ಲಿ ಬಿಜೆಪಿಯ 'ಅಜೆಂಡಾ' ದಲ್ಲಿರುವ ಬದಲಾವಣೆಗಳ ಸ್ವರೂಪದ ಬಗ್ಗೆ ಹಲವು ನಿರ್ದಿಷ್ಟ ಅಭಿಪ್ರಾಯಗಳನ್ನು ಮುಂದಿಟ್ಟಿದ್ದಾರೆ. ಈ ಮೂಲಕ ಅವರು ಈಗಾಗಲೇ ಅದರ ಕಾರ್ಯವ್ಯಾಪ್ತಿಯ ವಿವರಣೆ ನೀಡಿದ್ದಾರೆ. ಅವರು ಮಾಡಿರುವ ಒಂದು ಇಂತಹ ಟಿಪ್ಪಣಿ ಈಗಿರುವ ಸಂಸದೀಯ ಸ್ವರೂಪವನ್ನು ಬದಲಿಸಿ ಅಧ್ಯಕ್ಷ ಮಾದರಿಯನ್ನು ತರಬೇಕು ಎಂದು ಒತ್ತಿ ಹೇಳಿರುವುದು. **ಈಗಿರುವ ಸಂವಿಧಾನದ ಮೂಲಭೂತ ಸ್ವರೂಪವನ್ನು ಬದಲಿಸುವುದಿಲ್ಲ ಎಂದು ಅವರು ಸಾರಿರುವ ಹಿನ್ನಲೆಯಲ್ಲಿ ಬಿಜೆಪಿಯ ದೃಷ್ಟಿಯಲ್ಲಿ ಸಂಸದೀಯ ಸ್ವರೂಪ ಭಾರತದ ಸಂವಿಧಾನದ ಮೂಲಭೂತ ಲಕ್ಷಣ ಅಲ್ಲ ಎಂದು ಅರ್ಥವೇ** ಎಂದು ಸಿಪಿಐ(ಎಂ) ತೀಕ್ಷ್ಣವಾಗಿ ಪ್ರಶ್ನಿಸಿದೆ.

ಅಧ್ಯಕ್ಷೀಯ ಮಾದರಿ ಏಕೆ ಬೇಡ?

ಸಿಪಿಐ(ಎಂ) ಈ ಅಧ್ಯಕ್ಷ ಮಾದರಿಯ ಮಾತನ್ನು ಸತತವಾಗಿ ವಿರೋಧಿಸಿಕೊಂಡು ಬಂದಿದೆ. ಇದಕ್ಕೆ ಹಲವು ಕಾರಣಗಳಿದ್ದು ಅವುಗಳಲ್ಲಿ ಎರಡು ಬಹಳ ಮುಖ್ಯ ಕಾರಣಗಳು ಹೀಗಿವೆ. ಒಂದು, ಈ ವ್ಯವಸ್ಥೆಯಲ್ಲಿ ಚುನಾಯಿತ ಪ್ರತಿನಿಧಿಗಳ ಪಾತ್ರವನ್ನು ಸಂಪೂರ್ಣ ಕುಂಠಿತಗೊಳಿಸಿ ವಾಸ್ತವವಾಗಿ ಅಧಿಕಾರಗಳೆಲ್ಲಾ ಒಬ್ಬ ವ್ಯಕ್ತಿಯ ಕೈಯಲ್ಲಿ ಕೇಂದ್ರೀಕೃತವಾಗುತ್ತವೆ. ಇದು ಪ್ರಜಾಸತ್ತಾತ್ಮಕ ಭಾವನೆಗೆ ತದ್ವಿರುದ್ಧವಾದದ್ದು. ಎರಡನೆಯದಾಗಿ, ಭಾರತದಂತಹ ಅಸಂಖ್ಯ ದೇಶಿ ಮತ್ತು ಜನಾಂಗೀಯ ಗುಂಪುಗಳಿಂದ, ಕೂಡಿದ ಹಲವು ಭಾಷೆಗಳ, ಸಂಸ್ಕೃತಿಗಳ ಹಾಗೂ ಪರಂಪರೆಗಳ ವಿಶಾಲ ದೇಶದಲ್ಲಿ ಇಂತಹ ಅಧ್ಯಕ್ಷ ಮಾದರಿ ಸರಕಾರ ವ್ಯವಸ್ಥೆ ವೈವಿಧ್ಯತೆಯಲ್ಲಿ ಏಕತೆಯೆಂಬ ನೀತಿಯ ಆಧಾರದಲ್ಲಿ ಏರ್ಪಟ್ಟಿರುವ ರಾಷ್ಟ್ರೀಯ ಐಕ್ಯತೆಗೆ ಗಂಭೀರ ಹಾನಿಯುಂಟು ಮಾಡುತ್ತದೆ.

ಕಳೆದ ಕೆಲವು ವರ್ಷಗಳಲ್ಲಿ ರಾಜಕೀಯ ಕಷ್ಟಗಳು ತಲೆತೋರಿದಾಗಲೆಲ್ಲಾ ಕೆಲವು ನೀತಿಬಾಹಿರ ರಾಜಕಾರಣಿಗಳು ಭಾರತದಲ್ಲಿ ಅಧ್ಯಕ್ಷೀಯ ಮಾದರಿಯನ್ನು ತರುವ ಪ್ರಸ್ತಾಪ ಮುಂದಿಡುತ್ತಾ ಬಂದಿದ್ದಾರೆ - ಆದರೆ ರಾಜಕೀಯ ಪಕ್ಷಗಳು ಮತ್ತು ಪ್ರಜಾಪ್ರಭುತ್ವವಾದಿ ಸಾರ್ವಜನಿಕಾಭಿಪ್ರಾಯ ಇಂತಹ ದುಷ್ಟ ಪ್ರಯತ್ನಗಳನ್ನು ದೃಢವಾಗಿ ಧಿಕ್ಕರಿಸಿದೆ ಎಂದು ಪೊಲಿಟ್‌ಬ್ಯೂರೋ ಈ ಸಂದರ್ಭದಲ್ಲಿ ನೆನಪಿಸಿದೆ.

ತುರ್ತುಪರಿಸ್ಥಿತಿ ಮತ್ತು ಸಂವಿಧಾನ ವಿಮರ್ಶೆ

ಕೆಲವು ದಿನಗಳ ಹಿಂದೆ ಬಿಜೆಪಿ ನೇತೃತ್ವದ ಸರಕಾರ ಹೊಸದಾಗಿ ನೇಮಿಸಿದ ಅಟಾರ್ನಿ ಜನರಲ್ ಸೋಲೀ ಸೋರಬ್‌ಜೀ ಕೂಡಾ ಇಂತಹ 'ಸಂವಿಧಾನ ವಿಮರ್ಶಾ ಸಮಿತಿ' ಇನ್ನೂ ನೇಮಕಗೊಂಡಿರದಿದ್ದರೂ ತಾನು ಆಗಲೇ ಅದರ ಸದಸ್ಯನೋ ಎಂಬಂತೆ ಮಾತನಾಡುತ್ತಾ ಈ ವಿಮರ್ಶೆಯ ಜಪದ ಹಿಂದಿರುವ ಬಿಜೆಪಿ ಸರಕಾರದ ನಿಜ ಉದ್ದೇಶಗಳ ಸಂಕೇತ ನೀಡಿದ್ದರು.

ಇಲ್ಲಿ ಗಮನಿಸಬೇಕಾದ ಸಂಗತಿಯೆಂದರೆ ಈ ವ್ಯಕ್ತಿ ಜನವರಿ 1977 ರಲ್ಲಿ ತುರ್ತುಪರಿಸ್ಥಿತಿಯ ಕರಾಳ ಕೃತ್ಯಗಳು ತಾರಕಕ್ಕೇರಿದ್ದಾಗ, ಅದಕ್ಕೆ ಜನಗಳ ಪ್ರತಿರೋಧವೂ ಉತ್ತುಂಗಕ್ಕೇರಿದ್ದಾಗ ಆಗಿನ ಪ್ರಧಾನ ಮಂತ್ರಿ ಇಂದಿರಾಗಾಂಧಿಯವರ ಬಗ್ಗೆ ಭಾರೀ ಮೆಚ್ಚುಗೆ ವ್ಯಕ್ತಪಡಿಸಿದ್ದರು, ಸರ್ವಾಧಿಕಾರಶಾಹಿ ವರ್ತನೆಯನ್ನು ಕಾನೂನುಬದ್ಧಗೊಳಿಸುವ ಸಂವಿಧಾನದ ತಿದ್ದುಪಡಿಗಳನ್ನು ಬಹಿರಂಗವಾಗಿ ಸಮರ್ಥಿಸಿದ್ದರು. ಇದು ಈ ವ್ಯಕ್ತಿಯ ಬಗ್ಗೆ ಮಾತ್ರವಲ್ಲ, ಬಿಜೆಪಿ ತರಬಯಸುವ ಸಂವಿಧಾನ ಮಾರ್ಪಾಡಿನ ಬಗ್ಗೆಯೂ ಬಹಳಷ್ಟು ಹೇಳುತ್ತದೆ. ಅಂದರೆ ತುರ್ತುಪರಿಸ್ಥಿತಿಯ ಹಿಂದಿದ್ದ ಸರ್ವಾಧಿಕಾರಿಶಾಹಿ ಮನೋಭಾವವೆ ಈಗಿನ 'ಸಂವಿಧಾನ ವಿಮರ್ಶೆ' ಯ ಹಿಂದೆಯೂ ಇದೆಯೆಂಬುದು ಸ್ಪಷ್ಟ.

ಬಚ್ಚಿಟ್ಟ ಅಜೆಂಡಾ ಇದು

ಆದ್ದರಿಂದಲೇ ಬಿಜೆಪಿ ನೇತೃತ್ವದ ಮೈತ್ರಿ ಕೂಟದ 'ರಾಷ್ಟ್ರೀಯ ಅಜೆಂಡಾ' ಪ್ರಕಟಗೊಂಡಾಗಲೇ ಸಿಪಿಐ(ಎಂ) ಇದು ಬಿಜೆಪಿಯ ಇನ್ನೊಂದು ಮುಖವಾಡ ಎಂದು ಎಚ್ಚರಿಸಿತ್ತು; ಇದರಲ್ಲಿ 'ತುಂಬಿರುವ ವಿರೋಧಾಭಾಸಗಳು, ಚರ್ವಿತ ಚರ್ವಣಗಳ ನಡುವೆ ಕಾಣುವ ಒಂದು ವಿಷಕಾರಿ ಲಕ್ಷಣವೆಂದರೆ ಭಾರತದ ಸಂವಿಧಾನವನ್ನು ವಿಮರ್ಶಿಸಲು ಒಂದು ಆಯೋಗವನ್ನು ನೇಮಿಸಲಾಗುವುದು ಎಂಬ ಘೋಷಣೆ' ಎಂದಿತ್ತು. ಹಿಟ್ಲರ್ ಕೂಡಾ 'ರಾಷ್ಟ್ರೀಯ ಸಮಾಜವಾದ'ದ ಮುಖವಾಡ ಧರಿಸಿ ಅಧಿಕಾರ ಮಾಡಿದ ಮೊದಲ ಕೆಲಸವೆಂದರೆ ಎಲ್ಲಾ ನಿರ್ಣಯಾಧಿಕಾರಗಳು ತನ್ನ ಆಪ್ತ ಕೂಟದ ಕೈಯಲ್ಲಿರುವಂತೆ ಸಂವಿಧಾನವನ್ನು ತಿದ್ದುಪಡಿ ಮಾಡಿದ್ದು ಎಂದು ಸಿಪಿಐ(ಎಂ) ಆಗಲೇ ನೆನಪಿಸಿತ್ತು.

ಜಾತ್ಯಾತೀತತೆ ಭಾರತೀಯ ಸಂವಿಧಾನದ ಒಂದು ಮೂಲಭೂತ ಲಕ್ಷಣ ಎಂದು ದೇಶದ ಅತ್ಯುನ್ನತ ನ್ಯಾಯಾಲಯವೇ ಸಾರಿದೆ. ಜಾತ್ಯಾತೀತತೆ ಎಂದರೆ ಏನು ಎಂದೂ ಅದು ಸ್ಪಷ್ಟಪಡಿಸಿದೆ. ಆದರೆ ಬಿಜೆಪಿ ಜಾತ್ಯಾತೀತತೆಗೆ ತನ್ನದೇ ನಿರ್ವಚನೆ ನೀಡುವ ಪಕ್ಷ. ಈಗ ಸಂವಿಧಾನದ ಇನ್ನೊಂದು ಮೂಲಭೂತ ಲಕ್ಷಣವಾದ ಸಂಸದೀಯ ಸ್ವರೂಪವನ್ನೇ ಬದಲಿಸುವ ಮಾತಾಡುವಾಗಲೂ ಸಂವಿಧಾನದ ಮೂಲಭೂತ ಲಕ್ಷಣಗಳನ್ನು ಬದಲಿಸುವುದಿಲ್ಲ ಎನ್ನುತ್ತಿದೆ! 'ರಾಷ್ಟ್ರೀಯ ಅಜೆಂಡಾ'ದ ಮರೆಯಲ್ಲಿ ಬಿಜೆಪಿಯ 'ಬಚ್ಚಿಟ್ಟಾ ಅಜೆಂಡಾ' ವೇ ಕೆಲಸ ಮಾಡುವುದು ಎಂಬ ಸಿಪಿಐ(ಎಂ) ನ ಆರೋಪದ ಸತ್ಯಾಂಶಗಳನ್ನು ಮನದಟ್ಟು ಮಾಡುವ ಇನ್ನೊಂದು ಪ್ರಕರಣ ಇದು.

ಬಿ.ಜೆ.ಪಿ.ಯ ಸರಕಾರದ ಒಂದು ತಿಂಗಳು

\- ವಿ.ರಾಮಚಂದ್ರರಾವ್

"ನಾವು ದೇಶಕ್ಕೆ ಸುಸೂತ್ರವಾದ ಆಡಳಿತೆಯನ್ನು ಒದಗಿಸುತ್ತೇವೆ" "ನಾವು ಸ್ವದೇಶಿಗೆ ಒತ್ತುಕೊಟ್ಟು ದೇಶದ ಆರ್ಥಿಕವನ್ನು ಸಮರ್ಥವಾಗಿ ಬೆಳೆಸುವೆವು" "ನಾವು 22 ಮಿತ್ರ ಪಕ್ಷಗಳು ಕೂಡಿ ತಯಾರಿಸಿದ 'ರಾಷ್ಟ್ರೀಯ ಕಾರ್ಯಕ್ರಮ'ವನ್ನು ಜ್ಯಾರಿ ಮಾಡಿ ದೇಶದ ಸರ್ವತೋಮುಖ ಬೆಳವಣಿಗೆಯನ್ನು ಮಾಡಿ ತೋರಿಸುವೆವು" "ಕೃಷಿಗೆ ವಿಶೇಷ ಬಂಡವಾಳವು ಹರಿದು ಬರುವಂತೆ ಮಾಡುತ್ತೇವೆ" "ಕೋಟಿಗಟ್ಟಲೆ ನಿರುದ್ಯೋಗದಿಂದ ಬಳಲುತ್ತಿರುವ ಯುವಕರಿಗೆ 'ಸ್ವಯಂಉದ್ಯೋಗಾವಕಾಶ'ವನ್ನು ಒದಗಿಸಿಕೊಡುವೆವು"........ ಇತ್ಯಾದಿಯಾಗಿ ಬೊಬ್ಬಿಡುತ್ತಾ ಬಂದ ಬಿ.ಜೆ.ಪಿ. ಅಧಿಕಾರಕ್ಕೆ ಬಂದ ಸುಮಾರು ಒಂದು ತಿಂಗಳಲ್ಲಿ ಸಾಧಿಸಿದ್ದೇನು?

ಸಾಧಿಸಿದ್ದು ಎರಡು : ಒಂದು ಅಧಿಕಾರಕ್ಕೇರಲು ಎಲ್ಲಾ ಕಳಂಕಿತ, ಕಲುಷಿತ, ಭ್ರಷ್ಟರನ್ನು ತಮ್ಮ ಮಂತ್ರಿಮಂಡಲದಲ್ಲಿ ಸೇರಿಸಿಕೊಂಡು, ಇದೀಗ ಸಾರ್ವಜನಿಕ ಒತ್ತಡಕ್ಕೆ ಸಿಲುಕಿ, "ಇದೇಯೋ ಬಿ.ಜೆ.ಪಿ. ಆಡಳಿತ" ಎಂದು ಜನಸಾಮಾನ್ಯರಲ್ಲಿ ಹಾಗೂ ಬುದ್ಧಿಜೀವಿಗಳಲ್ಲಿ ತಿರಸ್ಕಾರದ ಮಾತು ಹರಡಿದಾಗ, ಒಂದಿಬ್ಬರನ್ನು ಮಂತ್ರಿಮಂಡಲದಿಂದ ಹೊರಹಾಕಿದುದು... ತಮಿಳುನಾಡಿನ ಎ.ಐ.ಡಿ.ಎಂ.ಕೆ. ಮಂತ್ರಿ ಮುತ್ತಯ್ಯ, ಜೆ.ಎಂ.ಎಂ. ಲಂಚ ಹಗರಣದ (ಕು)ಖ್ಯಾತಿಯುಳ್ಳ ಭ್ರಷ್ಟ ಬೂಟಾಸಿಂಗ್, ಇದೀಗ ಹಿಮಾಚಲ ಪ್ರದೇಶದ ಉಪ ಮುಖ್ಯಮಂತ್ರಿ ಸಾವಿರಾರು ಕೋಟಿ ರೂಪಾಯಿ ಗುಳುಂ ಮಾಡಿದ ಸುಖರಾಂ.... ಮುಂದಕ್ಕೆ ಜೇಠ್ಮಲಾನಿ, ರಾಮಕೃಷ್ಣ ಹೆಗ್ಗಡೆ...... ಅಡ್ವಾಣಿ, ಜೋಷಿ..... ಈಗಾಗಲೇ ಜೇಠ್ಮಲಾನಿ ಮತ್ತು ರಾಮಕೃಷ್ಣ ಹೆಗ್ಗಡೆಯವರು ನಾವಾಗಿ ರಾಜಿನಾಮೆ ನೀಡುವುದಿಲ್ಲ ಎಂದು ಪುನಃ ಪುನಃ ಹೇಳಿಕೆ ನೀಡುತ್ತಾ ಬರುತ್ತಿದ್ದಾರೆ. ಬಿಜೆಪಿಯವರು ನಮ್ಮ ಮೇಲೆ ಕ್ರಿಮಿನಲ್ ಚಾರ್ಜುಗಳುಳ್ಳ ಎಫ್.ಐ.ಆರ್. ಇದ್ದರೂ ಅವುಗಳೆಲ್ಲಾ ರಾಜಕೀಯದಲ್ಲಿ ಮಾಡಿದ ಕ್ರಿಮಿನಲ್ ಚಟುವಟಿಕೆಗಳು ಆದ್ದರಿಂದ ನಾವು ರಾಜಿನಾಮೆ ಕೊಡುವುದಿಲ್ಲ ಎಂದು ಹೇಳಿದ್ದಾರೆ.

ಎರಡು, 'ಸ್ವದೇಶಿ'ಗೆ ಒತ್ತು ಕೊಡುತ್ತೇವೆಂದು ಹೇಳಿದುದು ಓಟು ಪಡೆಯುವುದಕ್ಕಾಗಿ, ಅಧಿಕಾರಕ್ಕೆ ಕೂರುವುದಕ್ಕಾಗಿಯೇ ಹೊರತು ಜಾರಿ ಮಾಡುವುದಕ್ಕಲ್ಲ ಎಂದು ಅವರು ಸ್ಪಷ್ಟಪಡಿಸಿದ್ದಾರೆ. ಇವರೇ ತಾನೇ ಮಹಾರಾಷ್ಟ್ರದಲ್ಲಿ 'ನಾವು ಅಧಿಕಾರಕ್ಕೆ ಬಂದರೆ ಎನ್ರಾನ್ ಯೋಜನೆ ಮಾಡಿಕೊಂಡ ಒಪ್ಪಂದವನ್ನು ರದ್ದು ಗೊಳಿಸುತ್ತೇವೆ ಎಂದು ಸಾರಿದವರು? ಓಟು ಪಡೆದು, ಅಧಿಕಾರಕ್ಕೆ ಬಂದ ನಂತರ ಅದೇ ಎನ್ರಾನ್ ಕಂಪನಿಯ ಜತೆ ಅದೇ ಒಪ್ಪಂದದ ಕಲಮುಗಳನ್ನು ಒಪ್ಪಿಕೊಳ್ಳಲಿಲ್ಲವೇ? 'ಸ್ವದೇಶಿ' ದೃಷ್ಟಿಯಿಂದ ಟೀಕಿಸಿ ಜನಪ್ರಿಯತೆ ಪಡೆದ ಶಿವಸನೇ-ಬಿಜೆಪಿ ನಿಲುಮೆ ಈಗ ಎಲ್ಲಿದೆ? ವಾಜಪೇಯಿ ಅವರು 'ರಾಷ್ಟ್ರೀಯ ಕಾರ್ಯಕ್ರಮ' ವನ್ನು ರಾಷ್ಟ್ರಕ್ಕೆ ಅರ್ಪಿಸಿದ ಸಮಯದಲ್ಲಿ ಬಹಳಷ್ಟು 'ಸ್ವದೇಶಿ' ಗೆ ಒತ್ತುಕೊಟ್ಟವರು. ಇದೀಗ ಭಾರತದ ಕೈಗಾರಿಕಾ ಮತ್ತು ವಾಣಿಜ್ಯೋದ್ಯಮಿಗಳ ಒಕ್ಕೂಟವನ್ನು ಕುರಿತು ಮಾತನಾಡುತ್ತಾ 'ನಾವು ವ್ಯಾಪಾರಸ್ಥರ ಬೆಂಬಲದಿಂದ ಅಧಿಕಾರಕ್ಕೆ ಬಂದವರು, ನಾವು ಖಂಡಿತವಾಗಿ ಉದಾರೀಕರಣ, ಖಾಸಗೀಕರಣ, ಜಾಗತೀಕರಣದ ನೀತಿಗಳನ್ನು ಮುಂದುವರಿಸಿಕೊಂಡು ಹೋಗುತ್ತೇವೆ ಎಂಬುದರಲ್ಲಿ ಯಾರಿಗಾದರೂ ಏನೇನೂ ಸಂಶಯ ಬೇಡ' ಎಂದಿದ್ದಾರೆ. ಹಣಕಾಸು ಮಂತ್ರಿ ಅಮೇರಿಕಾದಲ್ಲಿ ಅಮೇರಿಕದ ಉದ್ಯಮಿಗಳನ್ನು ಉದ್ದೇಶಿಸಿ ಮಾತನಾಡುತ್ತಾ 'ನಾವು ಉದಾರೀಕರಣ, ಖಾಸಗೀಕರಣ ಮತ್ತು ಜಾಗತೀಕರಣ ನೀತಿಗಳನ್ನು ಚಾಚೂ ತಪ್ಪದೇ ಮುಂದುವರಿಸುತ್ತಾ ಹೋಗಬೇಕು ಎಂಬುದರಲ್ಲಿ ಯಾರೂ ಸಂಶಯ ಪಡುವುದು ಬೇಡ. ನೀವು ನಮ್ಮ ದೇಶಗಳಲ್ಲಿ ಧಾರಾಳವಾಗಿ ಅಡೆತಡೆಯಿಲ್ಲದೆ ಬಂಡವಾಳವನ್ನು ಹೂಡಬಹುದು" ಎಂದು ಹೇಳಿದ್ದಾರೆ. ಬಿಜೆಪಿ ನೇತೃತ್ವ ಸರಕಾರದ ವಾಣಿಜ್ಯ ಮಂತ್ರಿ ಲೋಕಶಕ್ತಿಯ ರಾಮಕೃಷ್ಣ ಹೆಗ್ಗಡೆಯವರು ಇತ್ತೀಚೆಗೆ ಆಯಾತ-ನಿರ್ಯಾತ ಧೋರಣೆಯನ್ನು ನಿರೂಪಿಸಿ 340 ವಸ್ತುಗಳ ಆಯಾತವನ್ನು ಪೂರ್ತಿಯಾಗಿ ಲೈಸೆನ್ಸ್ ರಹಿತ ವ್ಯಾಪಾರ ಪಟ್ಟಿಗೆ ಸೇರಿಸಿದ್ದಾರೆ ಮತ್ತು ಇನ್ನೂ 320 ವಸ್ತುಗಳನ್ನು ಈ ಪಟ್ಟಿಗೆ ಸ್ವಲ್ಪ ಸಮಯದಲ್ಲೇ ಸೇರಿಸುತ್ತೇವೆ ಎಂದು ಭರವಸೆ ಕೊಡಲಿಲ್ಲವೆ? ಮಾತ್ರವಲ್ಲ, ಅವರು ಇನ್ನೂ ಮುಂದೆ ಹೋಗಿ 'ಪ್ರಾಥಮಿಕ ವಿದ್ಯಾಭ್ಯಾಸ ಕ್ಷೇತ್ರವನ್ನು ಖಾಸಗೀಕರಣಗೊಳಿಸಬೇಕೆಂದು' ಹೇಳಿಕೆ ಕೊಟ್ಟು ಎಲ್ಲರನ್ನೂ ಬೆರಗುಗೊಳಿಸಲಿಲ್ಲವೇ?

ಸುಗಮ ಆಡಳಿತೆ ಕೊಡುವ ಕುರಿತು ಚಿಂತನೆ ಮಾಡುವ ಬದಲು ಇದ್ದ ಆಡಳಿತೆಯನ್ನು ಬುಡಮೇಲು ಮಾಡುವ ಕುರಿತು ಹಲವು ತಂತ್ರಗಳನ್ನು ಬಿಜೆಪಿ ನೇತೃತ್ವದ ಸರಕಾರ ಕೈಗೊಳ್ಳುತ್ತಿದೆ ಎಂಬುದನ್ನು ದೇಶದ ಜನರು ಎಚ್ಚರಿಕೆಯಿಂದ ನೋಡಬೇಕಾಗಿದೆ. ಒಂದು, ತಮಿಳು ನಾಡಿನಲ್ಲಿ 'ಕಾನೂನು ವ್ಯವಸ್ಥೆ' ಯ ಕುರಿತು ತಪಶೀಲು ಮಾಡಲು ಗೃಹಮಂತ್ರಿ ಅಡ್ವಾಣಿಯವರು ವಿಶೇಷ ತನಿಖಾ ತಂಡವನ್ನು ಕಳುಹಿಸಲಿಲ್ಲವೇ? ಎರಡು, ಒರಿಸ್ಸಾ ಮತ್ತು ಪಶ್ಚಿಮ ಬಂಗಾಳದಲ್ಲಿ ಸುಂಟರಗಾಳಿ ಬಂದು ಆಸ್ತಿಪಾಸ್ತಿ, ಪ್ರಾಣಹಾನಿ ದೊಡ್ಡ ಪ್ರಮಾಣದಲ್ಲಿ ಸಂಭವಿಸಿದಾಗ, ಏಕಾಏಕಿಯಾಗಿ ಸಂಬಂಧಪಟ್ಟ ಯಾರನ್ನು ಸೇರಿಸಿಕೊಳ್ಳದೆ ಕೇವಲ ಮಮತಾ ಬ್ಯಾನರ್ಜಿಯವರನ್ನು ವಿಮಾನದಲ್ಲಿ ಕೊಂಡೊಯ್ದು ತನಿಖೆ ಮಾಡಿಸಿ, ರಾಜ್ಯ ಸರಕಾರಗಳು ಏನೇನೂ ಮಾಡುತ್ತಿಲ್ಲ ಎಂದು ಅವರ ಮೂಲಕ ಹೇಳಿಕೆಗಳನ್ನು ಬಹಿರಂಗವಾಗಿ ಕೊಡಿಸಲಿಲ್ಲವೇ? ಜಾರ್ಜ್ ಫರ್ನಾಂಡೀಸ್ ಮೂಲಕ ಪಾಕಿಸ್ತಾನವು ಕ್ಷಿಪಣಿಯನ್ನು ಸಿಡಿಸಿದಾಗ ಇವಕ್ಕೆಲ್ಲಾ ಮೂಲ ಚೀನಾ ಎಂದು ಆಪಾದನೆ ಹೊರಡಿಸಲಿಲ್ಲವೇ? ಚೀನಾ ನೇಪಾದಲ್ಲಿ ಹೆಲಿಪ್ಯಾಡ್ ರಚನೆ ಮಾಡಿದ್ದಾರೆ - ನಮ್ಮ ಗಡಿಯೊಳಗೆ ಎಂದು ಅವರ ಮೂಲಕ ಹೇಳಿಸಲಿಲ್ಲವೇ? ಅದೇ ವೇಳೆ, ನಾಟಕದ ಸೂತ್ರಧಾರಿಯಾಗಿ ಅಟಲ್ ಬಿಹಾರಿಯವರು 'ಫರ್ನಾಂಡಿಸ್'ರ ಈ ಹೇಳಿಕೆ ಹುರುಳಿಲ್ಲದ್ದು" ಎಂದು ಹೇಳಲಿಲ್ಲವೇ? ಕುಮಾರಿ ಜಯಲಲಿತಾರ ಮೇಲಿರುವ ಹಲವಾರು ಮೊಕದ್ದಮೆಗಳಲ್ಲಿ ಅವರನ್ನು 'ರಕ್ಷಿಸುತ್ತಿದ್ದ' ವಕೀಲರುಗಳನ್ನೇ ಇದೀಗ ಕೇಂದ್ರ ವಕೀಲರಾಗಿ ನೇಮಕಮಾಡಿ, ಆ ಆಪಾದನೆಗಳಲ್ಲಿ ಜಯಾರವರನ್ನು ತಪ್ಪಿಸುವಂತೆ ಮಾಡಲು ಷಡ್ಯಂತ್ರ ಹೂಡಲಿಲ್ಲವೇ?

ಹೀಗೆ ಹೇಳುತ್ತಾ ಹೋದರೆ ಇಂತಹ ಬೇಡದ, ಅನಗತ್ಯ ಮತ್ತು ದೇಶದ ಸುಗಮ

ಪುಟ 8 ಕ್ಕೆ



ಭಾರತೀಯ ವಿಮೋಚನಾ ಸಮರ

ಸುಮಾರು ಎರಡು ಶತಮಾನಗಳ (೧೭೫೭ - ೧೯೪೭) ಪರಾಧೀನತೆಯ ವಿರೋಧಿ ಸಮರದಲ್ಲಿ ಭಾರತ ಒಂದು ಆಧುನಿಕ ರಾಷ್ಟ್ರವಾಗಿ ಬೆಸೆದುಕೊಂಡ. ಭಾರತೀಯ ಜನಗಳ ಅಪಾರ ತ್ಯಾಗ-ಬಲಿದಾನಗಳ ಒಂದು ಪಕ್ಷಿನೋಟ.

ಈ ಮೊದಲು ಹೇಳಿದಂತೆ ಎರಡನೇ ಮಹಾಯುದ್ಧ ಮುಗಿದ ನಂತರ ಭುಗಿಲೆದ್ದ ವಿವಿಧ ಭಾರತೀಯ ಜನ ವಿಭಾಗಗಳ -ಕಾರ್ಮಿಕರು, ರೈತರು, ಸೈನಿಕರ - ಹೋರಾಟಗಳು ಬ್ರಿಟಿಶ್ ಆಳರಸರನ್ನು ನಡುಗಿಸಿಬಿಟ್ಟವು. ರಿನ್ ನಾವಿಕರ ಹೋರಾಟದ ನಡುವೆಯೇ ಬ್ರಿಟಿಶ್ ಪ್ರಧಾನ ಮಂತ್ರಿ ಆ್ಯಟ್ಲಿಯವರು ಅಧಿಕಾರದ ವರ್ಗಾವಣೆ ಕುರಿತಂತೆ ಮಾತುಕತೆ ನಡೆಸಲು ಕ್ಯಾಬಿನೆಟ್ ಆಯೋಗವನ್ನು ಕಳಿಸುವುದಾಗಿ ಘೋಷಿಸಿದ್ದರು.

ಮಾರ್ಚ್ 1945 ರಲ್ಲಿ ಕ್ಯಾಬಿನೆಟ್ ಆಯೋಗ ಭಾರತಕ್ಕೆ ಬಂದು ಮೂರು ತಿಂಗಳ ಕಾಲ ಮತ್ತು ವಿವಿಧ ರಾಜಕೀಯ ಪಕ್ಷಗಳ, ಗುಂಪುಗಳ ಜತೆ ಮಾತುಕತೆ ನಡೆಸಿ ಒಂದು ಯೋಜನೆಯನ್ನು ತಯಾರಿಸಿ ಈ ಬಗ್ಗೆ ಚರ್ಚಿಸಲು ಎಲ್ಲಾ ರಾಜಕೀಯ ಪಕ್ಷಗಳನ್ನು ಸಿಮ್ಲಾದಲ್ಲಿ ಒಂದು ಸಮ್ಮೇಳನಕ್ಕೆ ಆಹ್ವಾನಿಸಿತು. ಒಂದು ವಾರದ ಕಾಲ ನಡೆದ ಸಮ್ಮೇಳನದಲ್ಲಿ ಕಾಂಗ್ರೆಸ್ ಮತ್ತು ಮುಸ್ಲಿಂ ಲೀಗ್ ಕ್ಯಾಬಿನೆಟ್ ಮಿಶನ್‌ನ ಯೋಜನೆಯನ್ನು ಸ್ವೀಕರಿಸಲಿಲ್ಲ. ವಿದೇಶ ವ್ಯವಹಾರ, ರಕ್ಷಣೆ, ಸಂಪರ್ಕ ವಿಷಯಗಳ ಅಧಿಕಾರ ಹೊಂದಿರುವ ಪ್ರಾಂತ್ಯ ಸರಕಾರಗಳು - ಇವುಗಳನ್ನು ಹಿಂದೂ ಬಹುಸಂಖ್ಯಾತ ಹಾಗೂ ಮುಸ್ಲಿಂ, ಬಹುಸಂಖ್ಯಾತ ಎಂದು ಎರಡು ಗುಂಪುಗಳನ್ನು ಮಾಡಲಾಗಿತ್ತು. ಒಂದು ಕೇಂದ್ರ ಸರಕಾರ ಹಾಗೂ ಇತರೆಲ್ಲಾ ಅಧಿಕಾರಗಳನ್ನು ಹೊಂದಿರುವ ಕಾಂಗ್ರೆಸ್ ಅವಿಭಜಿತ ಭಾರತಕ್ಕೆ ಸ್ವಾತಂತ್ರ್ಯ ಮತ್ತು ಸಾರ್ವಭೌಮತೆ ನೀಡಬೇಕು ಎಂದರೆ ಮುಸ್ಲಿಂ ಲೀಗ್ ಪಾಕಿಸ್ತಾನ ಮತ್ತು ಹಿಂದುಸ್ತಾನಕ್ಕೆ ಎರಡು ಪ್ರತ್ಯೇಕ ಸಂವಿಧಾನ ರಚನಾ ಸಂಸ್ಥೆಗಳು ಬೇಕೆಂದು ಹೇಳಿತು.

ಕಮ್ಯುನಿಸ್ಟ್ ಪಕ್ಷ ವಿವಿಧ ಭಾಷೆಗಳನ್ನಾಡುವ ಜನಗಳು ವಿಭಿನ್ನ ದೇಶಿ ಜನಗಳು ಎಂದು ಪರಿಗಣಿಸಿ ವ್ಯಾಪಕ ಸ್ವಾಯತ್ತತೆ ನೀಡುವ ಹಾಗೂ ಕೇಂದ್ರದಲ್ಲಿ ವಿದೇಶ ವ್ಯವಹಾರ, ರಕ್ಷಣೆ, ಸಂಪರ್ಕ ಇತ್ಯಾದಿ ಸೀಮಿತ ಅಧಿಕಾರಗಳಿಂದ ಒಕ್ಕೂಟ ಸರಕಾರ ಇರುವ ವ್ಯವಸ್ಥೆಯ ಸೂಚನೆಯಿಟ್ಟಿತು. ಮೊದಲಿಗೆ ಇದು ದೇಶವನ್ನು ವಿಘಟನೆ ಮಾಡುವ ಸೂಚನೆ ಎಂದು ಕಾಂಗ್ರೆಸ್ಸಿಗರು ಇದನ್ನು ವಿರೋಧಿಸಿದರೂ ನಂತರ ಅವರೂ ಅದೇ ನಿಟ್ಟಿನಲ್ಲಿ ಸಾಗಬೇಕಾಯಿತು. ನಂತರ ಕಾಂಗ್ರೆಸ್ ಸ್ವಾಯತ್ತ ಪ್ರಾಂತ್ಯಗಳಿಂದ ಕೂಡಿದ ಒಕ್ಕೂಟ ಸಂವಿಧಾನ ಹಾಗೂ ಮುಸ್ಲಿಂ ಬಹುಸಂಖ್ಯಾತ ಪ್ರಾಂತ್ಯಗಳಿಗೆ ಅವಶ್ಯಕವೆನಿಸಿದರೆ ಭಾರತೀಯ ಒಕ್ಕೂಟದೊಳಗೆ ಒಂದು ಗುಂಪು ಸಂವಿಧಾನ ಇರುವ ವ್ಯವಸ್ಥೆ ಬಯಸಿದರೆ ಮುಸ್ಲಿಂ ಲೀಗ್ ಮುಸ್ಲಿಂ ಬಹುಸಂಖ್ಯಾತ ಪ್ರಾಂತ್ಯಗಳಿರುವ ಪಾಕಿಸ್ತಾನ ರಚಿಸಿ ಪಾಕಿಸ್ತಾನದ ಸಂವಿಧಾನ ರಚನೆಯ ನಂತರ ಯಾವುದೇ ಇಂತಹ ಪ್ರಾಂತ್ಯ ಅದರಿಂದ ದೂರವಿರುವ ಹಕ್ಕು ನೀಡುವ ವ್ಯವಸ್ಥೆಯನ್ನು ಪ್ರತಿಪಾದಿಸಿತು. ಭಿನ್ನಾಭಿಪ್ರಾಯಗಳಿಂದಾಗಿ ಸಿಮ್ಲಾ ಸಮ್ಮೇಳನ ಮುರಿದು ಬಿತ್ತು.

ನಂತರ ಕ್ಯಾಬಿನೆಟ್ ಆಯೋಗ ತನ್ನದೇ ಪ್ರಸ್ತಾಪಗಳನ್ನು ಮುಂದಿಟ್ಟಿತು. ಮುಸ್ಲಿಂ ಲೀಗ್ ಅದನ್ನು ಸ್ವೀಕರಿಸಿತು.

ಈ ಪ್ರಸ್ತಾಪವನ್ನು ಒಪ್ಪದೆ ಸ್ವಾತಂತ್ರ್ಯದ ಪೂರ್ವಭಾವಿಯಾಗಿ ರಚನೆಗೊಳ್ಳುವ ಮಧ್ಯಂತರ ಸರಾಕರದಲ್ಲಿ ಭಾಗವಹಿಸಲು ಸಾಧ್ಯವಿಲ್ಲವಾದ್ದರಿಂದ ಕಾಂಗ್ರೆಸ್ ಮುಖಂಡರಲ್ಲಿ ಈ ಬಗ್ಗೆ ಭಿನ್ನಾಭಿಪ್ರಾಯ ಕಂಡುಬಂತು. ಕಾಂಗ್ರೆಸ್ ಭಾಗವಹಿಸದ ಮಧ್ಯಂತರ ಸರಕಾರ ರಚನೆಗೊಂಡರೆ ಅದು ಕಾಂಗ್ರೆಸ್‌ಗೆ ಅಪಾಯಕಾರಿ ಎಂದು ಬಹುಪಾಲು ಕಾಂಗ್ರೆಸ್ ಮುಖಂಡರು ಭಾವಿಸಿದರೆ ಗಾಂಧೀಜಿ ಮತ್ತು ಅವರ ಕೆಲವು ಶಿಷ್ಯರು ಕ್ಯಾಬಿನೆಟ್ ಆಯೋಗ ಕೇಂದ್ರದಲ್ಲಿ ಜಿನ್ನಾರವರನ್ನು ಮಧ್ಯಂತರ ಸರಕಾರ ರಚಿಸಲು ಆಹ್ವಾನಿಸಬೇಕು ಎಂದು ಸೂಚನೆಯಿತ್ತರು. ಬಹುಶಃ ಗಾಂಧೀಜಿ ಈ ನಿಲುವಿನ ಬಗ್ಗೆ ಪಟ್ಟು ಹಿಡಿದಿದ್ದರೆ ದೇಶಾದ್ಯಂತ ನಡೆಯುತ್ತಿದ್ದ ಸಮರಧೀರ ಚಟುವಟಿಕೆಗಳ ಹಿನ್ನೆಲೆಯಲ್ಲಿ ನಂತರದ ಇತಿಹಾಸ ಬೇರೆಯೇ ಆಗಿರುತ್ತಿತ್ತು. ಆದರೆ ಅವರು ತಮ್ಮ ಭಿನ್ನಾಭಿಪ್ರಾಯ ವ್ಯಕ್ತಪಡಿಸಿದರಷ್ಟೆ. ಕಾಂಗ್ರೆಸ್ ಕ್ಯಾಬಿನೆಟ್ ಆಯೋಗದ ಪ್ರಸ್ತಾಪಗಳನ್ನು ತನ್ನದೇ ವ್ಯಾಖ್ಯೆಯೊಂದಿಗೆ ಒಪ್ಪಿಕೊಂಡ ನಂತರ ಮಧ್ಯಂತರ ಸರಕಾರದ ರಚನೆಯ ಪ್ರಯತ್ನ ಆರಂಭವಾಯಿತು. ಈ ನಡುವೆ ಮಧ್ಯಂತರ ಸರಕಾರದಲ್ಲಿ ಕಾಂಗ್ರೆಸ್ಸಿನ ಪ್ರತಿನಿಧಿಗಳು, ಲೀಗ್‌ನ ಪ್ರತಿನಿಧಿಗಳು ಯಾರು ಎಂಬ ಬಗ್ಗೆ ಮತ್ತೆ ಚರ್ಚೆ-ವಿವಾದ ನಡೆಯಿತು. ಮುಸ್ಲಿಂ ಲೀಗ್ ತನ್ನ ಇತಿಹಾಸದಲ್ಲಿ ಮೊದಲ ಬಾರಿಗೆ 'ನೇರ ಕಾರ್ಯಾಚರಣೆ'ಗೆ ಇಳಿಯಿತು. ಆಗಸ್ಟ್ 16, 1946 ರಂದು ನಡೆಸಿದ ಈ ಕಾರ್ಯಾಚರಣೆ ಹಿಂದೆ ವಿವರಿಸಿದ ಕಲ್ಕತ್ತೆ ಮತ್ತಿತರ ಕಡೆ ಭಯಾನಕ ಕೋಮುದಂಗೆಗಳಿಗೆ ದಾರಿ ಮಾಡಿಕೊಟ್ಟಿತು.

ನೆಹರೂ ನೇತೃತ್ವದ ಮಧ್ಯಂತರ ಸರಕಾರ ರಚನೆಯಾದ ನಂತರವೂ ಒಂದೆಡೆ ಕಾಂಗ್ರೆಸ್ ಮತ್ತು ಲೀಗ್ ನಡುವೆ, ಇನ್ನೊಂದೆಡೆ ಕಾಂಗ್ರೆಸ್ ಮತ್ತು ಬ್ರಿಟಿಶ್ ಅಧಿಕಾರಿಗಳ ನಡುವೆ ನಿರಂತರ ತಿಕ್ಕಾಟಗಳು ಕಂಡುಬಂದವು. ಒಂದು ಸಂಯುಕ್ತ, ಸ್ವತಂತ್ರ ಭಾರತದ ನಿರೀಕ್ಷೆಯಿಟ್ಟುಕೊಳ್ಳುವುದು ಸಾಧ್ಯವಿಲ್ಲ ಎಂದು ಹೆಚ್ಚೆಚ್ಚು ಸ್ಪಷ್ಟವಾಗಲಾರಂಭಿಸಿತು.

ಫೆಬ್ರವರಿ 20, 1947 ರಂದು ಬ್ರಿಟಿಶ್ ಪ್ರಧಾನಿ ಆ್ಯಟ್ಲಿ ಮೌಂಟ್‌ಬ್ಯಾಟನ್‌ರನ್ನು ಹೊಸ ವೈಸರಾಯ್ ಆಗಿ ನೇಮಿಸುವ ಹಾಗೂ ಜನವರಿ 1948ರೊಳಗೆ ಭಾರತ ಬಿಡುವ ಸಂಕೇತ ನೀಡಿದರು. ಮೌಂಟ್‌ಬ್ಯಾಟನ್ ವಿವಿಧ ರಾಜಕೀಯ ಪಕ್ಷಗಳ ಮುಖಂಡರೊಂದಿಗೆ ಸಮಾಲೋಚನೆಗಳ ಆಧಾರದಲ್ಲಿ ಒಂದು ವರದಿ ತಯಾರಿಸಿದರು. ಇದರ ಆಧಾರದ ಮೇಲೆ ಜೂನ್ 3, 1947 ರಂದು ಬ್ರಿಟಿಶ್ ಸರಕಾರ ಆಗಸ್ಟ್ 15, 1947 ರಂದು ಭಾರತ ಮತ್ತು ಪಾಕಿಸ್ತಾನ ಎಂಬ ಎರಡು ಸ್ವತಂತ್ರ ಸಾರ್ವಭೌಮ ದೇಶಗಳನ್ನು ರಚಿಸುವ ಘೋಷಣೆ ಮಾಡಿತು.



ವಿಭಜನೆಗೆ ಕಾಂಗ್ರೆಸ್ ಒಪ್ಪಿಗೆ

ಗಾಂಧೀಜಿಗೆ ಈ ಪ್ರಸ್ತಾಪ ಒಪ್ಪಿಗೆಯಾಗಲಿಲ್ಲ. ನೆಹರೂ, ಪಟೇಲ್, ರಾಜಗೋಪಾಲಾಚಾರಿ ಮುಂತಾದ ಪ್ರಮುಖ ಕಾಂಗ್ರೆಸ್ ಮುಖಂಡರಿಗೂ



ಜಿ.ಎಸ್.ಮಣಿ

ಸಣ್ಣ, ಅತಿ ಸಣ್ಣ ರೈತರಿಗೇಕೆ ಸಾಲ?

ಇಷ್ಟು ನೇರವಾಗಿ ಯಾರೂ ಈ ಪ್ರಶ್ನೆಯನ್ನು ಕೇಳಿಲ್ಲ. ಆದರೆ ಸಣ್ಣ ಅತಿ ಸಣ್ಣ ರೈತರಿಗೆ ಸಾಲ ನೀಡುವ ಅವಶ್ಯಕತೆಯಿಲ್ಲ, ದೊಡ್ಡ ರೈತರು ಜಮೀನ್ದಾರರು ಮತ್ತು ಕೃಷಿಯಲ್ಲಿ ತೊಡಗಿರುವ ಕಂಪನಿಗಳಿಗೆ ಸಾಲ ನೀಡಿದರೆ ಸಾಕು, ಅದರಿಂದ ದೇಶದ ಕೃಷಿ ಅಪಾರವಾಗಿ ಬೆಳೆಯುತ್ತದೆ ಎಂದು ಒಂದು ಸಮಿತಿ ಹೇಳಿದೆ. ಭಾರತೀಯ ರಿಸರ್ವ್ ಬ್ಯಾಂಕು ನೇಮಿಸಿದ ಏಕ ಸದಸ್ಯ ಸಮಿತಿ ಇಂತಹುದೇ ಅರ್ಥ ಬರುವಂತಹ ವರದಿಯನ್ನು ಸಲ್ಲಿಸಿದೆ. ಭಾರತೀಯ ರಿಸರ್ವ್ ಬ್ಯಾಂಕಿನ ಮಾಜಿ ಉಪಗವರ್ನರ್ ಶ್ರೀ ಆರ್ ವಿ. ಗುಪ್ತ ಈ ಸಮಿತಿಯ ಅಧ್ಯಕ್ಷರು (ಏಕ ಸದಸ್ಯರು).

ಉದಾರೀಕರಣ ತೀವ್ರವಾಗಿ ಜಾರಿಗೆ ಬಂದ ನಂತರ ಇಂತಹ ಹಲವು ಸಮಿತಿಗಳನ್ನು ನೇಮಿಸಲಾಗುತ್ತಿದೆ. ಈ ಸಮಿತಿಗಳ ವಿಶೇಷವೇನೆಂದರೆ ಸಮಿತಿಯ ನೇತೃತ್ವ ವಹಿಸುವವರು ಪಕ್ಕಾ ಉದಾರೀಕರಣವಾದಿಗಳು. ಅಂದರೆ ಸಾಮ್ರಾಜ್ಯಶಾಹಿಗಳ ದೂತರಂತೆ ಇರುತ್ತಾರೆ. ಮೊದಲೇ ಅವರು ಇಂತಹ ವರದಿಯನ್ನೇ ನೀಡುತ್ತಾರೆಂದು ಹೇಳಿಬಿಡಬಹುದು. ಕೃಷಿ ಸಾಲಗಳ ವಿಷಯವನ್ನು ಅವಲೋಕಿಸಿ ಒಂದು ವರದಿ ನೀಡುವಂತೆ ಶ್ರೀ ಗುಪ್ತಾ ಅವರ ಸಮಿತಿಯನ್ನು ಕೇಳಿದಾಗಲೇ ಅವರು ಇಂತಹದ್ದೇ ವರದಿ ನೀಡುತ್ತಾರೆಂಬುದು ಗೊತ್ತಿತ್ತು. ಅಧಿಕಾರದಲ್ಲಿರುವವರು ಇಂತದ್ದೇ ವರದಿ ಬಯಸುತ್ತಾರೆ ಎಂಬುದು ಅವರಿಗೆ ಸ್ಪಷ್ಟವಾಗಿ ಗೊತ್ತಿದ್ದಿರಬಹುದು. ಆದ್ದರಿಂದಲೇ ಈ ಸಮಿತಿಗಳ ವರದಿಗಳು ಹೀಗಿರುತ್ತವೆ.

ಗುಪ್ತ ಸಮಿತಿಯ ವರದಿಯ ಮುಖ್ಯ ಅಂಶಗಳು ಹೀಗಿವೆ.

- ಕೃಷಿ ಸಾಲಗಳ ಮೇಲಿನ ಬಡ್ಡಿದರವನ್ನು ಮುಕ್ತಗೊಳಿಸಿ.
- ಸಹಾಯಧನದೊಂದಿಗಿನ ಸಾಲದ ನಿರ್ಧಾರವನ್ನು ವಾಣಿಜ್ಯೀಕರಿಸಿ.
- ಈಗಿರುವ ಕೃಷಿಗೆ ವಾಣಿಜ್ಯ ಬ್ಯಾಂಕುಗಳು ತಮ್ಮ ಒಟ್ಟು ಸಾಲದ ಶೇ 18 ರಷ್ಟನ್ನು (ಕನಿಷ್ಠ) ನೀಡಬೇಕೆಂಬ ನಿರ್ಬಂಧ ತೆಗೆದು ಹಾಕಿ.
- ಸೇವಾ ಕ್ಷೇತ್ರದ ಪರಿಕಲ್ಪನೆ ತೆಗೆದು ಹಾಕಿ ಯಾವ ಬ್ಯಾಂಕು ಎಲ್ಲಿ ಬೇಕಾದರೂ ಸಾಲ ನೀಡುವಂತಿರಲಿ.
- ರೈತರ ಎಲ್ಲ ಅವಶ್ಯಕತೆಗಳನ್ನು ಪೂರೈಸಲು ಸಂಯುಕ್ತ ಸಾಲ ನೀಡುವ ವ್ಯವಸ್ಥೆ ಮಾಡಿ.
- ಜಮೀನು ಮತ್ತು ಚಿನ್ನದಲ್ಲಿ ಹಣ ಹೂಡುವ ರೈತರಿಗೆ ವಿಶೇಷ ಉಳಿತಾಯ ಯೋಜನೆ ರೂಪಿಸಿ.

ಹೀಗೆ ಈ ಮೇಲಿನ ಶಿಫಾರಸ್ಸುಗಳು ತಾಂತ್ರಿಕ ಪದಗಳ ರೂಪದಲ್ಲಿರುವುದರಿಂದ ಕೂಡಲೇ ಇವುಗಳ ಪರಿಣಾಮಗಳು ಗೊತ್ತಾಗುವುದಿಲ್ಲ. ಉದಾಹರಣೆಗೆ ಎರಡು ಲಕ್ಷ ರೂಪಾಯಿಗಳವರೆಗಿನ ಕೃಷಿ ಸಾಲಕ್ಕೆ ಈಗ ಭಾರತೀಯ ರೀಸರ್ವ್ ಬ್ಯಾಂಕು ಬಡ್ಡಿ ದರವನ್ನು ನಿರ್ಧರಿಸುತ್ತದೆ. ಮತ್ತು ಅದು ಕಡಿಮೆ ಯಿರುತ್ತದೆ. ಬಡ್ಡಿದರವನ್ನು ಮುಕ್ತಗೊಳಿಸಿ ಎಂಬ ಶಿಫಾರಸ್ಸು ಪರೋಕ್ಷವಾಗಿ ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಕಡಿಮೆ ಬಡ್ಡಿ ದರದಲ್ಲಿ ಸಾಲ ನೀಡಬೇಡಿ ಎಂದು ಹೇಳುತ್ತದೆ. ತಾಕತ್ತಿದ್ದರೆ ಮಾರುಕಟ್ಟೆ ದರದಲ್ಲಿ ಅವರು ಸಾಲ ಪಡೆಯಲಿ ಎಂಬುದೇ ಇದರ ಅರ್ಥ. ಕೃಷಿ ಸಾಲದ ನಿರ್ಧಾರವನ್ನು ವಾಣಿಜ್ಯೀಕರಿಸಿ ಎಂದರೆ ಯೋಜನೆಗಳು ಅತಿ ಲಾಭದಾಯಕವಿದ್ದರೆ ಮಾತ್ರ ಅವುಗಳಿಗೆ ಸಾಲನೀಡಿ ಈಗಿನಂತೆ ಸಹಾಯಧನ ಬಂದಾಗ ಮಾತ್ರ ಆ ಯೋಜನೆಗಳು ಲಾಭದಾಯಕವಾಗುವುದಿದ್ದರೆ ಸಾಲ ಬೇಡ ಎಂದು ಅರ್ಥ.

ಕೃಷಿಗೆ ಒಟ್ಟು ಸಾಲದ ಶೇ 18 ರಷ್ಟನ್ನು ನೀಡಲೇ ಬೇಕೆಂಬ ನಿರ್ಬಂಧ ತೆಗೆದುಹಾಕಿದರೆ ಕೃಷಿಗೆ ಯಾರು ಸಾಲ ನೀಡಿಯಾರು? ಬರೀ ಶ್ರೀಮಂತ ಕೃತರಿಗೆ ಜಮೀನುದಾರರಿಗೆ ಮಾತ್ರ ಸಾಲ ನೀಡುತ್ತಾರೆ. ವಾಣಿಜ್ಯ ಬ್ಯಾಂಕುಗಳು ತಮ್ಮ ಒಟ್ಟು ಸಾಲ ಖಾತೆಯ ಶೇ 18 ರಷ್ಟನ್ನು ಕೃಷಿಗೆ ನೀಡಲೇ ಬೇಕೆಂಬ ನಿರ್ಭಂಧ ವಿರುವಾಗಲೇ ಈ ಗುರಿಯನ್ನು ತಲುಪುತ್ತಿಲ್ಲ. ನಿರ್ಬಂಧವಿಲ್ಲದಿದ್ದರೆ? ಕೇಳುವುದೇ ಬೇಡ. ಹೀಗೆ ಈ ಸಮಿತಿ ಕೃಷಿ ಸಾಲದ ವಿಚಾರದಲ್ಲಿ ಐ.ಎಂ.ಎಫ್ ವಿಶ್ವ ಬ್ಯಾಂಕುಗಳ ಷರತ್ತುಗಳನ್ನು ಜಾರಿಗೊಳಿಸುವಂತಿದೆ.

ಭಾರತದಲ್ಲಿ ಸಣ್ಣ ಅತಿ ಸಣ್ಣ ರೈತರೇ ಬಹುಸಂಖ್ಯೆಯಲ್ಲಿರುವವರು. ಇವರೇ ಧವಸ ದಾನ್ಯಗಳನ್ನು ಬೆಳೆವವರು ಉತ್ತಮ ಕೃಷಿ ಮಾಡುವವರು ಲಾಗುವಾಡು ಮಾಡಲು ಹಣವಿಲ್ಲದೇ ಒದ್ದಾಡುವವರು ಇವರಿಗೆ ಸಾಲ ದೊರೆಯದಿದ್ದರೆ ಸಣ್ಣ ಮತ್ತು ಅತಿ ಸಣ್ಣ ಹಿಡುವಳಿಗಳಲ್ಲಿ ಲಾಭ ನೆಲಕಚ್ಚಿ ಬಿಡುತ್ತದೆ. ಅಂತಹ ಪರಿಸ್ಥಿತಿ ಉಂಟಾದರೆ ಜಮೀನು ದಾರರ ಮತ್ತು ಕೃಷಿ ಬಂಡವಾಳಿಗರ ರೊಟ್ಟಿ ಮುರಿದು ತುಪ್ಪಕ್ಕೆ ಬಿದ್ದಂತೆಯೇ. ಸಣ್ಣ ಅತಿ ಸಣ್ಣ ರೈತರು ತಮ್ಮ ಜಮೀನುಗಳನ್ನು ಮಾರಿ ಕೊಳ್ಳಬೇಕಾಗುತ್ತದೆ. ಅದನ್ನೇ ಕೃಷಿ ಬಂಡವಾಳಿಗರು ಬಯಸುವುದು.

ಈಗಾಗಲೇ ಕೃಷಿ ರಂಗದಲ್ಲಿ ನಕಾರಾತ್ಮಕ ಬೆಳವಣಿಗೆಗಳಾಗಿವೆ. ಕೃಷಿ ಬೆಳವಣಿಗೆ ದರ ಕುಸಿದಿದೆ. ಆಹಾರದಾನ್ಯಗಳ ಉತ್ಪಾದನೆ ಏರುತ್ತಿಲ್ಲ. 2000 ಇಸವಿಯ ವೇಳೆಗೆ 225 ದಶಲಕ್ಷಟನ್ ಆಹಾರದಾನ್ಯಗಳನ್ನು ಬೆಳೆಯಬೇಕು ನಾವು. ಆಧರೆ ಅದು ಸಾಧ್ಯವಾಗುವ ಬದಲು ಇಂದಿರುವ ಸ್ಥಿತಿಗಿಂತಲೂ ಹಿಂದೆ ಹೋಗುವಂತೆ ಸಾಮ್ರಾಜ್ಯ ಶಾಹಿಗಳಿಗೆ ತೋರುತ್ತಿದೆ. ಇದೇ ಬೇಕಲ್ಲವೆ-ನಮ್ಮ ಆಹಾರ ಸುಭದ್ರತೆ ಕೊಚ್ಚಿ ಹೋಗುವುದು?

ಸಾಫ್ಟ್‌ವೇರ್‌ಗಳ ಹೆಸರಿನಲ್ಲಿ ಹೊರ ಹೋಗುವ ಭಾರತದ ಹಣ

ಇದು ಹವಾಲ ಹಗರಣವೇ ಹೌದು. ಭಾರತದಿಂದ ಹಣವನ್ನು ವಿದೇಶಗಳಿಗೆ ಕೊಂಡೊಯ್ಯಲು ಇಂದಿಗೂ ಹಲವು ನಿರ್ಭಂಧಗಳಿವೆ. ಆದರೆ ಉದಾರೀಕರಣದಿಂದಾಗಿ ಹಲವು ಕಳ್ಳಗಿಂಡಿಗಳು ತೆರೆದುಕೊಂಡಿವೆ.

ಅಂತಹ ಒಂದು ಕಳ್ಳಗಿಂಡಿ ಕಂಪ್ಯೂಟರ್ ಸಾಫ್ಟ್‌ವೇರ್. ಕಂಪ್ಯೂಟರ್ ಕಾರ್ಯಕ್ರಮವನ್ನು (ಸಾಫ್ಟ್ ವೇರ್) ಒಂದು 'ಸಿಡಿ ರಾಮ್' ಮೂಲಕ ಆಮದು ಮಾಡಿಕೊಳ್ಳಲಾಗುತ್ತದೆ. ಈ ಸಿಡಿ ರಾಮ್‌ನ ಬೆಳೆ ಬಹಳ ಕಡಿಮೆ. ಆದರೆ ಅದರೊಳಗಿನ ಕಾರ್ಯಕ್ರಮಕ್ಕೆ ಅಪಾರ ಹಣ. ಈ ಕಾರ್ಯಕ್ರಮ ಅಂತಹ ಬೆಲೆ ಉಳ್ಳದ್ದೊ ಅಲ್ಲವೊ ಎಂಬುದನ್ನು ಸುಲಭದಲ್ಲಿ ಕಂಡು ಹಿಡಿಯಲಾಗುವುದಿಲ್ಲ.

ಆದ್ದರಿಂದ ಸಾಫ್ಟ್ ವೇರ್‌ಗಳಿಗಾಗಿ ಅಪಾರ ಹಣವನ್ನು ನೀಡುವ ಮೂಲಕ ಭಾರತದಿಂದ ಹಣವನ್ನು ಹೊರಗೆ ಕೊಂಡೊಯ್ಯಬಹುದು. ಸಾಫ್ಟ್‌ವೇರ್ ಆಮದಿನ ಹೆಸರಿನಲ್ಲಿ ಇಂತಹ ದೊಡ್ಡ ಹಗರಣವೇ ನಡೆಯುತ್ತಿದೆಯಂತೆ ಇದಲ್ಲವೆ ಉದಾರೀಕರಣ?.

ಎರಡನೇ ನರಸಿಂಹಮ್ ಅವತಾರ

ಬ್ಯಾಂಕಿಂಗ್ ವಲಯದ ಉದಾರೀಕರಣಕ್ಕೆ ನರಸಿಂಹಮ್ ಎಂಬ ಭಾರತೀಯ ರಿಸರ್ವ್ ಬ್ಯಾಂಕಿನ ಮಾಜಿ ಉಪಗವರ್ನರ್ ಅವರ ನೇತೃತ್ವದಲ್ಲಿ 1991 ರಲ್ಲಿ ಒಂದು ಸಮಿತಿ ನೇಮಿಸಲಾಗಿತ್ತು. ಅದರ ವರದಿಯ ಶಿಫಾರಸ್ಸುಗಳ ಆಧಾರದ ಮೇಲೆ ಬ್ಯಾಂಕಿಂಗ್ ವಲಯದ ಉದಾರೀಕರಣವನ್ನು ಸರ್ಕಾರ ಮಾಡತೊಡಗಿದ್ದು ಈಗ ಇತಿಹಾಸ. ಈ ಉದಾರೀಕರಣದ ಹಾದಿಯಲ್ಲಿ ಹಲವು ಅಡೆತಡೆಗಳು ಬಂದವಾದರೂ ಬ್ಯಾಂಕಿಂಗ್ ವಲಯದ ಉದಾರೀಕರಣ ದೊಡ್ಡ ಪ್ರಮಾಣದಲ್ಲೇ ಆಯಿತೆನ್ನಬಹುದು. ಇನ್ನೂ ಹೆಚ್ಚಿನ ಉದಾರೀಕರಣವನ್ನು ದೇಶೀ ಬಂಡವಾಳಿಗರು ಮತ್ತು ಬಹುರಾಷ್ಟ್ರೀಯ ಕಂಪನಿಗಳು ಬಯಸ್ಸುತ್ತಿವೆ. ಅವರ ಈ ಬಯಕೆ ಪೂರೈಸುವ ಸಲುವಾಗಿಯೇ ಈ ಎರಡನೇ ಸಮಿತಿಯನ್ನು ನೇಮಿಸಲಾಗಿತ್ತು. ಅದು ಈಗ ಬ್ಯಾಂಕಿಂಗ್ ವಲಯದ ಎರಡನೇ ಕಂತಿನ ಉದಾರೀಕರಣಕ್ಕೆ ತನ್ನ ಶಿಫಾರಸ್ಸುಗಳ ವರದಿಯನ್ನು ನೀಡಿದೆ.

ವರದಿಯ ಮುಖ್ಯ ಅಂಶಗಳು ಕೆಳಗಿನಂತಿವೆ:

- ■ ಪ್ರಬಲ ಬ್ಯಾಂಕುಗಳನ್ನು ವಿಲೀನ ಗೊಳಿಸಿ ದುರ್ಬಲ ಬ್ಯಾಂಕುಗಳನ್ನಲ್ಲ.
- ■ ದುರ್ಬಲ ಬ್ಯಾಂಕುಗಳನ್ನು ಪುನಶ್ಚೇತನ ಗೊಳಿಸಿ ಸಂಕುಚಿತ ಬ್ಯಾಂಕಿಂಗ್ ಅನ್ನು ಅಳವಡಿಸಿ.
- ■ ಸಣ್ಣ ಸ್ಥಳೀಯ ಬ್ಯಾಂಕುಗಳ ಕಾರ್ಯವ್ಯಾಪ್ತಿಯನ್ನು ರಾಜ್ಯ ಅಥವಾ ಕೆಲವು ಜಿಲ್ಲೆಗಳಿಗೆ ಸೀಮಿತಗೊಳಿಸಿ ಬ್ಯಾಂಕಿನ ನಿರ್ವಾಹಕ ಮಂಡಳಿಯ ಕಾರ್ಯಗಳನ್ನು ವಿಮರ್ಶಿಸಿ ಅವುಗಳನ್ನು ಜವಾಬ್ದಾರಿಯುತಗೊಳಿಸಿ.
- ■ ಭಾರತೀಯ ರಿಸರ್ವ್ ಬ್ಯಾಂಕ್ ಕಾಯಿದೆ, ಬ್ಯಾಂಕಿಂಗ್ ರೆಗುಲೇಷನ್ ಕಾಯಿದೆ, ರಾಷ್ಟ್ರೀಕರಣ ಕಾಯಿದೆ, ಭಾರತೀಯ ಸ್ಟೇಟ್ ಬ್ಯಾಂಕ್ ಕಾಯಿದೆಗಳನ್ನು ಪರಾಮರ್ಶಿಸಿ
- ■ ಸಾರ್ವಜನಿಕ ವಲಯದ ಬ್ಯಾಂಕುಗಳ ಕಂಪ್ಯೂಟರೀಕರಣವನ್ನು ವೇಗಗೊಳಿಸಿ ಬ್ಯಾಂಕುಗಳಲ್ಲಿ ಸಿಬ್ಬಂದಿ ಆಯ್ಕೆ ವಿಧಾನ ತರಬೇತಿ, ಮತ್ತು ಸಂಬಳ ಇತ್ಯಾದಿಗಳನ್ನು ಪುನರ್ ವಿಮರ್ಶಿಸಿ ಇತ್ಯಾದಿ.

ಹೀಗೆ ಈ ಎರಡನೇ ನರಸಿಂಹಮ್ ವರದಿ ಬ್ಯಾಂಕ್ ರಾಷ್ಟ್ರೀಕರಣದಿಂದ ದೇಶದ ಆರ್ಥಿಕ ಮತ್ತು ಒಟ್ಟು ಅಭಿವೃದ್ಧಿಗೆ ಆದ ಎಲ್ಲ ಲಾಭಗಳನ್ನು ತೊಡೆದು ಹಾಕಿ ಖಾಸಗೀಕರಣದ ಹೊಸ ಯುಗವನ್ನೇ ಹುಟ್ಟಿ ಹಾಕುವ ಹೇತುವನ್ನು ತೋರಿದೆ.

ಪ್ರಬಲ ಬ್ಯಾಂಕುಗಳನ್ನು ವಿಲೀನಗೊಳಿಸಿ ದುರ್ಬಲ ಬ್ಯಾಂಕುಗಳನ್ನಲ್ಲ ಎಂದರೆ ಪ್ರಬಲ ಬ್ಯಾಂಕುಗಳು ಇನ್ನೂ ಪ್ರಬಲವಾಗಲಿ ದುರ್ಬಲ ಬ್ಯಾಂಕುಗಳು ಮುಚ್ಚಿಹೋಗಲಿ ಎಂದು. ಪ್ರಬಲ ಬ್ಯಾಂಕುಗಳು ಇನ್ನೂ ಪ್ರಬಲವಾಗುವುದರಿಂದ ಅವು ದೊಡ್ಡ ಬಂಡವಾಳಿಗರಿಗೆ ಮತ್ತು ಬಹುರಾಷ್ಟ್ರೀಯ ಕಂಪನಿಗಳಿಗೆ ಸಾವಿರ ಸಾವಿರ ಕೋಟಿ ರೂಪಾಯಿಗಳ ಸಾಲ ನೀಡುವ

ಪುಟ 7 ಕ್ಕೆ

ಅಮೇರಿಕದ ದೂರು

ಅಮೇರಿಕ ಭಾರತದ ವಿರುದ್ಧ ವಿಶ್ವ ವ್ಯಾಪಾರ ಸಂಸ್ಥೆಗೆ ದೂರು ಒಯ್ದಿದೆ. ಭಾರತ ತನ್ನ ಭರವಸೆಗಳನ್ನು ಈಡೇರಿಸುತ್ತಿಲ್ಲ ಎಂಬುದೇ ಈ ದೂರು. ವಿಶ್ವ ವ್ಯಾಪಾರ ಸಂಸ್ಥೆಯ ಎಲ್ಲ ಸದಸ್ಯ ದೇಶಗಳ ಪೈಕಿ ಭಾರತ ಅತ್ಯಂತ ಹೆಚ್ಚಿನ ರಕ್ಷಣಾತ್ಮಕತೆ ಉಳ್ಳದ್ದು. ಆದ್ದರಿಂದ ಅದು ಇನ್ನು ಹೆಚ್ಚಿನ ಅಧಿಕ ಸುಧಾರಣೆಗಳನ್ನು ಶೀಘ್ರವಾಗಿ ತರಬೇಕೆಂಬುದೇ ಅದರ ಒತ್ತಾಯ. ಅದರಲ್ಲಿ ಎಲ್ಲಕ್ಕಿಂತ ಮುಖ್ಯವಾದದ್ದು ವಿಶ್ವ ವ್ಯಾಪಾರ ಸಂಸ್ಥೆಗೆ ನೀಡಿರುವ ಭರವಸೆಗಳನ್ನು ಈಡೇರಿಸುವುದು. ಅಂದರೆ ಭಾರತದಲ್ಲಿನ ಕಾಯಿದೆಗಳನ್ನು ಬದಲಾಯಿಸುವುದು, ತಿದ್ದುಪಡಿ ಮಾಡುವುದು. ಉದಾಹರಣೆಗೆ 1970 ರ ಭಾರತೀಯ ಪೆಟೆಂಟ್ ಕಾಯಿದೆಯನ್ನು ಆಮೂಲಾಗ್ರವಾಗಿ ಬದಲಾಯಿಸುವುದು, ವಿಮಾ ವಲಯವನ್ನು ತೆರೆಯುವುದು ಇತ್ಯಾದಿ. ಭಾರತ ರಫ್ತುದಾರರಿಗೆ ಪ್ರೋತ್ಸಾಹಕ ನೆರವು ನೀಡುತ್ತಿರುವ ಸಮಯದಲ್ಲೇ ಆಮದಿನ ಮೇಲೆ ನಿರ್ಬಂಧಗಳನ್ನು ಮುಂದುವರೆಸಿದೆ ಎಂದು ಅದು ದೂರಿದೆ.

ಭಾರತ ಸರ್ಕಾರದ ಮೇಲೆ ತೀವ್ರವಾದ ಒತ್ತಡ ನೀಡುವ ತಂತ್ರವಾಗಿ ಈ ಅಭಿವೃದ್ಧಿ ಹೊಂದಿದ ದೇಶಗಳು ಭಾರತದ ವಿರುದ್ಧ ವಿಶ್ವ ವ್ಯಾಪಾರ ಸಂಸ್ಥೆಯ ಮೇಲೆ ಒತ್ತಡ ಹೇರುತ್ತಿವೆ. ಇದನ್ನು ಎದುರಿಸಲು ದೃಢ ಸಂಕಲ್ಪದ ಸರ್ಕಾರದ ಅವಶ್ಯಕತೆಯಿದೆ. ಕೇಂದ್ರದ ಬಿಜೆಪಿ ಸರ್ಕಾರಕ್ಕೆ ಅಂತಹ ಸಂಕಲ್ಪ ಹೋಗಲಿ ಸೈದ್ಧಾಂತಿಕ ನಿಲುವಾದರೂ ಇದೆಯೇ?

ಹೊಸ ಸನ್ನಿವೇಶದ ಜವಾಬ್ದಾರಿಗಳನ್ನು ನಿಭಾಯಿಸೋಣ

ಸಿಐಟಿಯು ಮೇ ದಿನದ ಪ್ರಣಾಳಿಕೆಯ ಕರೆ



ಮೇ ದಿನದ ಸಂದರ್ಭದಲ್ಲಿ ಸಿಐಟಿಯು ವಿಶ್ವಾದ್ಯಂತ ಸಾಮ್ರಾಜ್ಯಶಾಹಿಯ ವಿರುದ್ಧ ಹೋರಾಟದಲ್ಲಿ ನಿರತರಾಗಿರುವ ಕಾರ್ಮಿಕ ವರ್ಗಕ್ಕೆ ಕ್ರಾಂತಿಕಾರಿ ಶುಭಾಶಯಗಳನ್ನು ನೀಡುತ್ತಾ ಭಾರತದ ಪ್ರಸ್ತುತ ಪರಿಸ್ಥಿತಿಯಲ್ಲಿ ಕಾರ್ಮಿಕ ವರ್ಗದ ಮುಂದಿರುವ ಜವಾಬ್ದಾರಿಗಳನ್ನು ನೆನಪಿಸಿದೆ. ಸಿಐಟಿಯು ನ ಮೇ ದಿನ ಪ್ರಣಾಳಿಕೆಯ ಆ ಭಾಗವನ್ನು ಇಲ್ಲಿ ಮುಂದೆ ಕೊಡಲಾಗಿದೆ.

ಇದು ಕಮ್ಯುನಿಸ್ಟ್ ಪ್ರಣಾಳಿಕೆ ಪ್ರಕಟಣೆಯ 150ನೇ ವಾರ್ಷಿಕೋತ್ಸವದ ವರ್ಷವಾಗಿದ್ದು "ಎಲ್ಲಾ ದೇಶಗಳ ಕಾರ್ಮಿಕರೇ ಒಂದಾಗಿ' ಎಂಬ ರಣಕಹಳೆಯೂದಿದ ನಮ್ಮ ವರ್ಗದ ಮಹಾನ್ ಬೋಧಕರಾದ ಕಾರ್ಲ್‌ಮಾರ್ಕ್ಸ್ ಮತ್ತು ಫ್ರೆಡರಿಕ್ ಎಂಗೆಲ್ಸ್ ನೀಡಿದ ಕ್ರಾಂತಿಕಾರಿ ಸಂದೇಶವನ್ನು ಎತ್ತಿ ಹಿಡಿಯಬೇಕೆಂದೂ ಅದು ಕರೆ ನೀಡಿದೆ.

ಈ ವರ್ಷದ ಮೇ ದಿನದಂದು ಭಾರತದ ಕಾರ್ಮಿಕ ವರ್ಗ ಮತ್ತು ಜನತೆ ಸ್ವಾತಂತ್ರ್ಯದ ನಂತರ ಒಂದು ಸಂಪೂರ್ಣ ಹೊಸದಾದ ಸನ್ನಿವೇಶವನ್ನು ಎದುರಿಸುತ್ತಿದ್ದಾರೆ. ಕೇಂದ್ರದಲ್ಲಿನ ಹೊಸ ಸರ್ಕಾರಕ್ಕೆ ಬೂರ್ಜ್ವಾ-ಭೂಮಾಲಕ ವರ್ಗಗಳ ಒಂದು ವಿಶಿಷ್ಟ ಹಾಗೂ ಅತ್ಯಂತ ಕೋಮುವಾದಿಯಾದ ಪಕ್ಷವಾದ ಬಿಜೆಪಿ ನೇತೃತ್ವ ನೀಡುತ್ತಿದೆ. ಫ್ಯಾಸಿಸ್ಟ್ ಮಾದರಿ ದನಿ ಹೊರಡಿಸುವ ಹಿಂದುತ್ವದ ಸಿದ್ಧಾಂತ ಹಾಗೂ ತತ್ವ ಹೊಂದಿರುವ ಹಾಗೂ 'ಹಿಂದೂ ರಾಷ್ಟ್ರ' ದ ಸ್ಥಾಪನೆಯ ಕಾರ್ಯಕ್ರಮ ಹೊಂದಿರುವ ಆರ್.ಎಸ್.ಎಸ್. ಇದರ ಆತ್ಮ ಮತ್ತು ಚಾಲಕ ಶಕ್ತಿ. ಭಾರತದ ಸಂವಿಧಾನದ ಜಾತ್ಯಾತೀತ ಅಡಿಗಲ್ಲು ಮತ್ತು ದೇಶದ ಬಹುಮುಖೀ ಸ್ವರೂಪಕ್ಕೆ ಇದೊಂದು ಗಂಬೀರ ಬೆದರಿಕೆ.

ಆಳುವ ಪಕ್ಷ ಸರ್ವಸಮ್ಮತಿಯಿಂದ ಆಳುವಂತೆ ನಟಿಸಿದರೂ, 'ರಾಷ್ಟ್ರೀಯ ಅಜೆಂಡಾ' ದ ಬಗ್ಗೆ ಹೇಳಿಕೊಂಡರೂ ತನ್ನದೇ ಬಚ್ಚಿಟ್ಟ ಅಜೆಂಡಾವನ್ನು ಅನುಸರಿಸಲು ಕಾತುರವಾಗಿದೆ. ಈಗಾಗಲೇ ಸಂವಿಧಾನದ ವಿಮರ್ಶೆ ಮಾಡಬೇಕೆಂದು ಸರಕಾರ ಸೂಚಿಸಿದೆ. ಕಾರ್ಮಿಕ ವರ್ಗ ದೇಶದ ಐಕ್ಯತೆ ಮತ್ತು ಸಮಗ್ರತೆಯನ್ನು ರಕ್ಷಿಸಲು ಮತ್ತು ಅದರ ಜಾತ್ಯಾತೀತ ಸ್ವರೂಪವನ್ನು ಉಳಿಸಲು ಐಕ್ಯತೆಯಿಂದ ಹೋರಾಡಬೇಕೆಂದು ಈ ಮೇ ದಿನದಂದು ಸಿಐಟಿಯು ಕಾರ್ಮಿಕ ವರ್ಗಕ್ಕೆ ಕರೆ ನೀಡುತ್ತದೆ.

ಬಿಜೆಪಿ ಸರಕಾರ ಕೂಡಾ ಖೋಟಾ ಸ್ವದೇಶಿ ನಿಲುವೇನಿದ್ದರೂ ಹೊಸ ಆರ್ಥಿಕ ನೀತಿಗಳನ್ನು ಇನ್ನಷ್ಟು ಹೆಚ್ಚು ಬಲ ಪ್ರತಿಗಾಮಿ ತಿರುವಿನೊಂದಿಗೆ ಅನುಸರಿಸುವುದು ಖಂಡಿತ, ಐಎಂಎಫ್-ವಿಶ್ವಬ್ಯಾಂಕ್, ವಿಶ್ವ ವ್ಯಾಪಾರ ಸಂಸ್ಥೆಯ ಆದೇಶಗಳನ್ನು ಪಾಲಿಸುವುದು ಖಂಡಿತ. ಇತ್ತೀಚೆಗೆ ಪ್ರಕಟಿಸಿದ ಆಮದು-ರಫ್ತು ನೀತಿ, ರೋಗಗ್ರಸ್ತ ಸಾರ್ವಜನಿಕ ವಲಯದ ಘಟಕಗಳನ್ನು ಮುಚ್ಚುವ ಬೆದರಿಕೆ, ಶೇರು ಮಾರಾಟದ ಬಗ್ಗೆ ಅದರ ನಿಲುವು ಹಾಗೂ ಬಹುರಾಷ್ಟ್ರೀಯ ಕಂಪನಿಗಳಿಗೆ ನೀಡಿರುವ ಭರವಸೆ ಇವೆಲ್ಲಾ ಈ ಸರಕಾರ ಹಿಡಿಯುತ್ತಿರುವ ದಾರಿಯನ್ನು ಸ್ಪಷ್ಟವಾಗಿ ಸೂಚಿಸಿವೆ.

ಐಎಂಎಫ್ ಮತ್ತು ವಿಶ್ವಬ್ಯಾಂಕ್‌ನ ಅಣತಿಯಂತೆ ಹೊಸ ಆರ್ಥಿಕ ನೀತಿಗಳನ್ನು ಆರಂಭಿಸಿದಂದಿನಿಂದ ಕಾರ್ಮಿಕ ಸಂಘಗಳು ಇತರ ಸಾಮೂಹಿಕ ಸಂಘಟನೆಗಳೊಡನೆ ಸೇರಿಕೊಂಡು ಸಂರಚನಾ ಹೊಂದಾಣಿಕೆ ಕಾರ್ಯಕ್ರಮ' ಹಾಗೂ ಅದರ ವಿವಿಧ ಸ್ವರೂಪಗಳ ವಿರುದ್ಧ ಬಲವಾದ ಪ್ರತಿರೋಧ ಒಡ್ಡುತ್ತಾ ಬಂದಿವೆ ಎಂಬುದನ್ನು ಸಿಐಟಿಯು ಈ ಸಂದರ್ಭದಲ್ಲಿ ನೆನಪಿಸಿಕೊಳ್ಳುತ್ತದೆ.

ದಕ್ಷಿಣ ಪೂರ್ವ ಏಶ್ಯಾದಲ್ಲಿನ ಪವಾಡ ಈಗ ಕೊಚ್ಚಿಕೊಂಡು ಹೋಗಿದ್ದರೂ, ಭಾರತದ ಆಳುವ ವರ್ಗಗಳು ಆರ್ಥಿಕ ಸುಧಾರಣೆಯ ಪ್ರಕ್ರಿಯೆಯನ್ನು ಅನುಸರಿಸಬಯಸುತ್ತವೆ. ಬಿಜೆಪಿ ನೇತೃತ್ವದ ಪ್ರಸಕ್ತ ಸರಕಾರ ಇದಕ್ಕೆ ತನ್ನನ್ನು ಸಮರ್ಪಿಸಿಕೊಂಡ, ಏನು ಆದೇಶ ಬೇಕಾದರೂ ಪಾಲಿಸಲು ಸಿದ್ಧವಿರುವ ಒಂದು ಸಾಧನ.

ನಮ್ಮ ದೇಶದ ಕಾರ್ಮಿಕ ವರ್ಗ ತಕ್ಷಣವೇ ಐಎಂಎಫ್-ವಿಶ್ವಬ್ಯಾಂಕ್ - ವಿಶ್ವ ವ್ಯಾಪಾರ ಸಂಸ್ಥೆಯ ಆದೇಶಗಳಂತೆ ಸರ್ಕಾರ ಅನುಸರಿಸುತ್ತಿರುವ ವಿನಾಶಕಾರಿ ಆರ್ಥಿಕ ನೀತಿಗಳ ವಿರುದ್ಧ ಹೋರಾಟವನ್ನು ತೀವ್ರಗೊಳಿಸಬೇಕು.

ನಮ್ಮ ದೇಶದ ಕಾರ್ಮಿಕ ವರ್ಗ ಹಾಗೂ ಕಾರ್ಮಿಕ ಆಂದೋಲನ ಅಂತರ್‌ರಾಷ್ಟ್ರೀಯ ವ್ಯಾಪಾರದ ವಿಷಯಗಳಲ್ಲಿ 'ಸಾಮಾಜಿಕ ನಿಬಂಧನೆ' ಯನ್ನು ಹೇರುವುದರ ವಿರುದ್ಧ ಹೋರಾಟವನ್ನು ದೃಢತೆಯಿಂದ ಮುಂದೊಯ್ಯಬೇಕು ಎಂದು ಸಿಐಟಿಯು ಕರೆ ನೀಡುತ್ತದೆ. ಏಕೆಂದರೆ ಈ ನಿಬಂಧನೆಯಿಂದ ಮುಂದುವರಿದ ದೇಶಗಳಿಗಷ್ಟೇ ಪ್ರಯೋಜನ.

ಶೇರು ಮಾರಾಟ ಆಯೋಗ ಹಾಕಿಕೊಂಡಿರುವ ಸಾರ್ವಜನಿಕ ವಲಯವನ್ನು ಅಂತ್ಯಗೊಳಿಸುವ ಕಾರ್ಯಕ್ರಮಕ್ಕೆ ಎದುರಾಗಿ ಕೇಂದ್ರ ಸಾರ್ವಜನಿಕ ವಲಯದ ಉದ್ದಿಮೆಗಳ ಕಾರ್ಮಿಕರು ಒಂದಾಗಿ ಖಾಸಗೀಕರಣ ಪ್ರಯತ್ನಗಳನ್ನು ವಿಫಲಗೊಳಿಸಬೇಕು.

ಆದೇಶಗಳನ್ನು ವಿಧೇಯತೆಯಿಂದ ಪಾಲಿಸುವ ಭಾರತ ಸರ್ಕಾರಕ್ಕೆ ಐಎಂಎಫ್ ಆರ್ಥಿಕ ಸುಧಾರಣೆಗಳನ್ನು ತ್ವರಿತಗೊಳಿಸಲು ಕರೆ ನೀಡುವುದರೊಂದಿಗೆ ಹಣಕಾಸು ವಲಯವನ್ನು ತೆರೆಯುವ ಘಟ್ಟ ಸಿದ್ಧವಾಗುತ್ತಿದೆ. ಸಂಯುಕ್ತ ರಂಗದ ಆಡಳಿತ ಕಾಲದಲ್ಲಿ ಯಶಸ್ವಿಯಾಗಿ ತಡೆದು ನಿಲ್ಲಿಸಿದ ವಿಮಾ ನಿಯಂತ್ರಣ ಪ್ರಾಧಿಕಾರ ಮಸೂದೆಯನ್ನು ಈಗ ಯಾವ ಸಮಯದಲ್ಲಾದರೂ ಮತ್ತೆ ತರುವ ಸಾಧ್ಯತೆಯಿದೆ.

ಟೆಲಿಕಾಂ ವಲಯವನ್ನು ಬಹುರಾಷ್ಟ್ರೀಯ ಕಂಪನಿಗಳಿಗೆ ತೆರೆದಿಟ್ಟ ನಂತರ ದೂರಸಂಪರ್ಕ ನಿಯಂತ್ರಣ ಪ್ರಾಧಿಕಾರ ಸಾರ್ವಜನಿಕ ವಲಯ ಎಂಟಿಎನ್‌ಎಲ್ ವಿರುದ್ಧ ನೀಡಿರುವ ವಿಚಿತ್ರ ತೀರ್ಪು ಮುಂಬರಲಿರುವ ಅಪಾಯಗಳ ಮುನ್ಸೂಚನೆಯಾಗಿದೆ. ವಿದ್ಯುತ್, ಮೂಲ ರಚನೆಯಷ್ಟೇ ಅಲ್ಲ, ರಕ್ಷಣಾ ವಲಯವನ್ನು ತೆರೆಯುವ ಪ್ರಯತ್ನಗಳು ಸಾಗಿವೆ.

ದೇಶದ ಕಾರ್ಮಿಕ ವರ್ಗ ಈ ಪ್ರಯತ್ನಗಳನ್ನು ಪ್ರತಿರೋಧಿಸಬೇಕು, ಏಕೆಂದರೆ ಇವು ನಮ್ಮ ದೇಶದ ಸಾರ್ವಭೌಮತೆಗೆ ಅಪಾಯಕಾರಿ ಸೂಚನೆಗಳು.

ಗ್ಯಾಟ್ ಒಪ್ಪಂದ, ವಿಶ್ವ ವ್ಯಾಪಾರ ಸಂಸ್ಥೆ, ಬೌದ್ಧಿಕ ಆಸ್ತಿ ಹಕ್ಕುಗಳ ಮತ್ತು ಪೇಟೆಂಟ್‌ಗಳ ಹೆಸರಿನಲ್ಲಿ ಸರಕಾರ ನೀಡಿರುವ ಮಾತುಗಳಿಂದಾಗಿ ನಮ್ಮ ದೇಶಕ್ಕೆ, ಆರ್ಥಿಕಕ್ಕೆ ಹಾಗೂ ಏಶ್ಯಾದ ಇತರ ದೇಶಗಳೊಂದಿಗೆ ನಮ್ಮ ವ್ಯಾಪಾರಕ್ಕೆ ವಿಪತ್ತು ಕಾದಿದೆಯೆಂಬುದನ್ನು ಇತ್ತೀಚೆಗೆ ಅಮೆರಿಕಾದಲ್ಲಿ ಬಾಸ್ಮತಿ ಅಕ್ಕಿಯ ಪೇಟೆಂಟಿನ ಪ್ರಕರಣ ಬಟ್ಟ ಬಯಲು ಮಾಡಿದೆ. ವಿಶ್ವದ ಕೇವಲ ಕೆಲವು ಮುಂದುವರಿದ ದೇಶಗಳಿಗೆ ಅನುಕೂಲ ಮಾಡಿಕೊಡುವ ಸಂಪೂರ್ಣ ಏಕಪಕ್ಷೀಯವಾದ ವಿಶ್ವ ವ್ಯಾಪಾರ ಒಪ್ಪಂದಗಳನ್ನು ತಿರಸ್ಕರಿಸಿ, ನಮ್ಮ ದೇಶವೂ ಸೇರಿದಂತೆ ಮೂರನೇ ಜಗತ್ತಿನ ಮಾತುಕತೆ ನಡೆಸುವಂತಾಗಬೇಕು ಕಾರ್ಮಿಕ ವರ್ಗ ಈ ದಿಕ್ಕಿನಲ್ಲಿ ಒತ್ತಡಗಳನ್ನು ಹೆಚ್ಚಿಸಬೇಕು.

ಕಾರ್ಮಿಕ ವರ್ಗದಲ್ಲಿ ಒಟ್ಟು ಐಕ್ಯತೆಯನ್ನು ತರುವಲ್ಲಿನ ಅಡ್ಡಿ ಆತಂಕಗಳನ್ನೂ ಬೇಗನೇ ನಿವಾರಿಸಿ ಎಲ್ಲಾ ಕೇಂದ್ರ ಕಾರ್ಮಿಕ ಸಂಘಟನೆಗಳನ್ನು ಒಂದು ಮಹಾ ಒಕ್ಕೂಟದಲ್ಲಿ ಒಟ್ಟು ಸೇರಿಸಿ ನೀತಿಗಳ ಪ್ರಶ್ನೆಯಲ್ಲಿ ಒಂದು ಜಂಟಿ ಹೋರಾಟ ನಡೆಸುವಂತಾಗಬೇಕು ಎಂದು ಸಿಐಟಿಯು ಕಾರ್ಮಿಕ ವರ್ಗಕ್ಕೆ ಕರೆ ನೀಡುತ್ತದೆ.

ಗುಪ್ತ ಮತದಾನದ ಮೂಲಕ ಕಾರ್ಮಿಕ

ಪುಟ 6 ಕ್ಕೆ

ಮುಂದಿನ ವಾರ ನಿರೀಕ್ಷಿಸಿ !

ಫ್ರಾನ್ಸ್‌ನ 1968 ಕೆಂಪು ಮೇ - ಒಂದು ಹಿನ್ನೋಟ

ಫ್ರಾನ್ಸ್ ಏಕೆ-ಇಡೀ ಅಭಿವೃದ್ಧಿ ಹೊಂದಿದ ಬಂಡವಾಳಶಾಹಿ ಸಮಾಜವನ್ನೇ ನಡುಗಿಸಿದ 1968 ರ ಮೇ ಘಟನೆಗಳು ನಡೆದು ಮೂರು ದಶಕಗಳು ಕಳೆದಿವೆ. ಮೇ 1968 ರಲ್ಲಿ ಫ್ರಾನ್ಸ್ ಅಭಿವೃದ್ಧ ಬಂಡವಾಳಶಾಹಿ ಸಮಾಜವೊಂದು ಮೊದಲ ಬಾರಿಗೆ ಕ್ರಾಂತಿಯ ಹೊಸ್ತಿಲಲ್ಲಿ ನಿಂತಿತ್ತು. ಅಕ್ಷರ ಮಟ್ಟಿಗೆ ಅದು ನಿಜವಾಗಿಯೂ ಕೆಂಪು ಮೇ ಆಗಿತ್ತು. ಫ್ರಾನ್ಸ್‌ನಲ್ಲಿ ಇತ್ತೀಚೆಗೆ ಮತ್ತು ಅಭಿವೃದ್ಧ ಬಂಡವಾಳಶಾಹಿ ಜಗತ್ತಿನಲ್ಲಿ ಪುನಃ ವ್ಯವಸ್ಥೆಯ ವಿರುದ್ಧ ಕೋಪ, ತಾಪ, ವಿದ್ರೋಹದ ಜ್ವಾಲೆ ಹರಡುತ್ತಿರುವಾಗ ಫ್ರಾನ್ಸಿನ ಆ 'ಕೆಂಪು ಮೇ' ನೆನಪು - ಮುಂದಿನವಾರ.

ಮಹಿಳಾ ಸಮಾನತೆಯ ಹೋರಾಟದಲ್ಲಿ

ಅಖಿಲ ಭಾರತ ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆಯ ಅಖಿಲ ಭಾರತ 5ನೇ ಸಮ್ಮೇಳನ ಬರುವ ಜೂನ್ 11ರಿಂದ 14ರವರೆಗೆ ಕರ್ನಾಟಕದ ರಾಜಧಾನಿ ಬೆಂಗಳೂರಿನಲ್ಲಿ ನಡೆಯುತ್ತಿರುವ ಸಂದರ್ಭದಲ್ಲಿ ದೇಶದಲ್ಲೇ ಮಾತ್ರವಲ್ಲ ಅಂತರಾಷ್ಟ್ರೀಯ ಮಟ್ಟದಲ್ಲೂ ಅತಿದೊಡ್ಡ ಸಂಘಟನೆಯಾಗಿ ಮಾನ್ಯತೆ ಪಡೆದು ಬೆಳೆಯುತ್ತಿರುವ ಈ ಸಂಘಟನೆಯ ಬಗ್ಗೆ ಸಮ್ಮೇಳನದ ಹಿನ್ನೆಲೆಯಲ್ಲಿ ಒಂದು ಕಿರುನೋಟ.

ಎನ್.ಪ್ರಭಾ

ಅಖಿಲ ಭಾರತ ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆಯು 1981ರಲ್ಲಿ ರಚನೆಗೊಂಡಿತು. ಅದಕ್ಕೂ ಮುಂಚೆ ಪ. ಬಂಗಾಳ, ಕೇರಳ, ಆಂಧ್ರಪ್ರದೇಶ, ತಮಿಳುನಾಡು ಮತ್ತು ತ್ರಿಪುರಾಗಳಲ್ಲಿ ಪ್ರಗತಿಪರ ಸ್ಥಳೀಯ ಕೆಲವು ಸಂಘಗಳಿದ್ದವು.

ಇಂದು ಎ.ಐ.ಡಿ.ಡಬ್ಲ್ಯೂ.ಎ. ಜಮ್ಮು ಮತ್ತು ಕಾಶ್ಮೀರವನ್ನು ಸೇರಿಸಿಕೊಂಡಂತೆ ಉತ್ತರ ಪೂರ್ವ ಪ್ರದೇಶವಾದ ಗೋವಾವನ್ನು ಒಳಗೊಂಡು ಕಳೆದ 17 ವರ್ಷಗಳ ತನ್ನ ಕಾರ್ಯಚಟುವಟಿಕೆಗಳಲ್ಲೂ, ಸಾಮಾಜಿಕ, ಆರ್ಥಿಕ, ರಾಜಕೀಯ, ಸಾಂಸ್ಕೃತಿಕ ವಿಷಯಗಳು ಮಹಿಳೆಯರ ಜೀವನದ ಮೇಲೆ ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ಪ್ರಭಾವ ಬೀರುತ್ತಿದ್ದು ಇವುಗಳ ಕಡೆ ಗಮನ ಹರಿಸುವಲ್ಲಿ ಎ.ಐ.ಡಿ.ಡಬ್ಲ್ಯೂ.ಎ. ಮುಂದಾಗಿದೆ.

ಎ.ಐ.ಡಿ.ಡಬ್ಲ್ಯೂ.ಎ. ಗಮನ ಹರಿಸಿದ ಕೆಲವು ಮಹಿಳಾ ಸಂಬಂಧಿ ವಿಷಯಗಳು.

- ಕುಟುಂಬದ ಒಳಗಿನ ಮತ್ತು ಹೊರಗಿನ, ಮಹಿಳೆಯರ ಮೇಲಿನ ಹಿಂಸೆಗಳು.
- ಕೃಷಿ ಕೂಲಿಕಾರ ಮಹಿಳೆಯರು ಎದುರಿಸುತ್ತಿರುವ ಸಮಸ್ಯೆಗಳನ್ನು ಗುರುತಿಸಿ ಅವುಗಳ ಪರಿಹಾರಕ್ಕಾಗಿ ಹೋರಾಟ.
- ದಲಿತ ಮಹಿಳೆಯರ ಸಮಾವೇಶಗಳನ್ನು ಸಂಘಟಿಸಿ ಅವರಲ್ಲಿ ಅರಿವು ಮೂಡಿಸುವುದು ಅವರ ಸಮಸ್ಯೆಗಳ ಪರಿಹಾರಕ್ಕಾಗಿ ಅವರ ಮಧ್ಯೆ ಸಂಘಟಿತ ಹೋರಾಟಗಳನ್ನು ಅಣಿನೆರೆಸುವುದು.
- ಮಹಿಳೆಯರ ಆರೋಗ್ಯದ ಮೇಲೆ ತೀವ್ರ ರೀತಿಯ ಪರಿಣಾಮಗಳನ್ನು ಬೀರುವಂತಹ ಗರ್ಭ ನಿರೋಧಕಗಳ ವಿರುದ್ಧ ಹೋರಾಟ ಉದಾ : ಕ್ವಿನ್‌ಕ್ರೀನ್, ನ್ಯೂರೋ ಪ್ಲಾಂಟ್ ಮುಂತಾದವು.
- ಬಡ ಮಹಿಳೆಯರಿಗೆ ಪ್ರತಿಕೂಲವಾಗುವ 2 ಮಕ್ಕಳಿಗಿಂತ ಹೆಚ್ಚು ಮಕ್ಕಳಿರುವವರು ಚುನಾವಣೆಗಳಲ್ಲಿ ಸ್ಪರ್ಧಿಸಬಾರದೆನ್ನುವ ಮಸೂದೆಯ ವಿರುದ್ಧ ಪ್ರತಿಭಟನೆ.
- ವಿವಾಹಗಳ ಕಡ್ಡಾಯ ನೊಂದಣಿಗಾಗಿ ಮತ್ತು ಆಸ್ತಿ ಹಕ್ಕಿನ ಜಂಟಿ ಪಟ್ಟಾ ಕಾನೂನುಬದ್ಧಗೊಳಿಸಲು ಒತ್ತಾಯಿಸಿ ನಿರಂತರ ಹೋರಾಟ.

ವಿವಿಧ ಮಟ್ಟಗಳಲ್ಲಿ ಮಾಧ್ಯಮ ಕಾವಲು ಸಮಿತಿಗಳನ್ನು ರಚಿಸಿ ಮುದ್ರಣ ಮತ್ತು ಎಲೆಕ್ಟ್ರಾನಿಕ್ ಮಾಧ್ಯಮಗಳ ಪ್ರಚಾರವನ್ನು ಪುನರ್‌ವಿಮರ್ಶಿಸಲು ಆಗ್ರಹಿಸಿ ಹೋರಾಟ.

ಎ.ಐ.ಡಿ.ಡಬ್ಲ್ಯೂ.ಎ.ನ ಕೆಲವು ಸಾಧನೆಗಳು :

- ತಮಿಳುನಾಡಿನ ಪದ್ಮಿನಿಯ ಮೇಲೆ ನಡೆದ ಸಾಮೂಹಿಕ ಅತ್ಯಾಚಾರವನ್ನು ಪ್ರತಿಭಟಿಸಿ ಹೋರಾಟ ನಡೆಸಿದ ಹಿನ್ನೆಲೆಯಲ್ಲಿ 1 ಲಕ್ಷ ರೂಪಾಯಿಗಳ ಪರಿಹಾರ ಮತ್ತು ಸರ್ಕಾರಿ ಹುದ್ದೆಯನ್ನು ಕೋರ್ಟಿನ ಮೂಲಕ ಕೊಡಿಸಲಾಗಿದೆ.
- ಇದೇ ರಾಜ್ಯದ ಟುಟಿಕೊರಿನ್ ಜಿಲ್ಲೆಯ ದಲಿತರ ಹಳ್ಳಿಯೊಂದನ್ನು ಲೂಟಿ ಮಾಡಿ ಹಳ್ಳಿಯನ್ನು ವಶಪಡಿಸಿಕೊಂಡ ಪೊಲೀಸರ ದೌರ್ಜನ್ಯವನ್ನು ಖಂಡಿಸಿ ಸುಪ್ರಿಂ ಕೋರ್ಟಿನಲ್ಲಿ ದಾವೆ ಹೂಡಿ 26 ಲಕ್ಷ ರೂಪಾಯಿಗಳ ಪರಿಹಾರವನ್ನು ಹಳ್ಳಿಯ ಜನರಿಗೆ ಕೊಡಿಸಲಾಗಿದೆ.
- ಅಪಾಯಕಾರಿ ಗರ್ಭ ನಿರೋಧಕ ಕ್ರಿನ್‌ಕ್ರೀಮ್ ವಿರುದ್ಧ ಅಫಿಡವಿಟ್ ಹಾಕುವ ಮೂಲಕ ಭಾರತ ಸರ್ಕಾರ ಈ ಔಷಧಿಯನ್ನು ನಿಷೇಧಿಸುವ ಮಟ್ಟಿಗೆ ಯಶಸ್ವೀ ಹೋರಾಟ ಮಾಡಲಾಗಿದೆ.
- ಸರ್ಕಾರ ಮಹಿಳೆಯರಿಗೆ ಸಂಬಂಧಿಸಿ ರೂಪಿಸಿದ ನೀತಿಗಳನ್ನು ಎ.ಐ.ಡಿ. ಡಬ್ಲ್ಯೂ.ಎ. ವಿಮರ್ಶಿಸಿದೆ. ಹಾಗೆಯೇ ಬದಲೀ ನೀತಿಗಳ ಜಾರಿಗಾಗಿ ಶ್ರಮಿಸಿದೆ.
- ಕರ್ನಾಟಕದಲ್ಲಿ ದೇವದಾಸಿ ಪದ್ಧತಿಯ ವಿರುದ್ಧ ಹೋರಾಡುತ್ತಿದೆ ಮತ್ತು ಈ ಮಹಿಳೆಯರ ಪುನರ್ವಸತಿಗಾಗಿ ಒತ್ತಾಯಿಸುತ್ತಿದೆ.
- 1996ರಲ್ಲಿ ಬೆಂಗಳೂರಿನಲ್ಲಿ ನಡೆದ ವಿಶ್ವಸುಂದರಿ ಸ್ಪರ್ಧೆಯ ವಿರುದ್ಧ ಜನವಾದಿ ಮಹಿಳಾ ಸಂಘಟನೆ ದೊಡ್ಡಮಟ್ಟದ ಹೋರಾಟ ನಡೆಸಿ ದೇಶದ ಗಮನ ಸೆಳೆದಿದೆ.
- ರಾಜಾಸ್ತಾನದ ಸಮಾಜ ಕಾರ್ಯಕರ್ತೆ ಬಾಂವ್ರಿದೇವಿಯ ಮೇಲೆ ನಡೆದ ಸಾಮೂಹಿಕ ಅತ್ಯಾಚಾರವನ್ನು ಖಂಡಿಸಿ ದೇಶಾದ್ಯಂತ ಹೋರಾಟಗಳನ್ನು ಸಂಘಟಿಸಿದೆ.

ಈ ರೀತಿಯ ಹತ್ತು ಹಲವು ಮಹತ್ತರ ಹೋರಾಟಗಳನ್ನು ಎ.ಐ.ಡಿ.ಡಬ್ಲ್ಯೂ.ಎ. ನಡೆಸಿದೆ.

ಕರ್ನಾಟಕದಲ್ಲಿ ಎ.ಐ.ಡಿ.ಡಬ್ಲ್ಯೂ.ಎ.



ಕರ್ನಾಟಕದಲ್ಲಿಯೂ ಸಹ ರಾಜ್ಯ ಘಟಕವಾಗಿ ಜನವಾದಿ ಮಹಿಳಾ ಸಂಘಟನೆಯು ಕೃಷಿ ಕೂಲಿಕಾರರ ಮಹಿಳೆಯರ, ದುಡಿಯುವ ಮಹಿಳೆಯರ ಮಧ್ಯಮ ವರ್ಗದ ಮಹಿಳಾ ನೌಕರರ ಹಾಗೂ ವಿದ್ಯಾರ್ಥಿನಿಯರ ಮಧ್ಯದಲ್ಲಿ ತೊಡಗಿಸಿಕೊಂಡು ಕಳೆದ 2 ದಶಕಗಳಿಂದ ಕೆಲಸ ಮಾಡುತ್ತಿದೆ.

ಹಳ್ಳಿಗಾಡಿನ ಮಹಿಳೆಯ ಸಮಸ್ಯೆಯಿಂದ ಹಿಡಿದು ಸರ್ಕಾರ ರೂಪಿಸುವ ನೀತಿಗಳವರೆಗೆ ಜನವಾದಿ ಮಹಿಳಾ ಸಂಘಟನೆ ಜೀವಂತ ಪ್ರತಿಕ್ರಿಯೆ ನೀಡುತ್ತಾ ಬಂದಿದೆ.

ಹಳ್ಳಿಗಾಡಿನ ಮಹಿಳಾ ಸಮುದಾಯಕ್ಕಾಗಿ ಶೌಚಾಲಯ, ಕುಡಿಯುವ ನೀರು, ಬೀದಿ ದೀಪಕ್ಕಾಗಿ, ರಸ್ತೆ, ಚರಂಡಿ ಮುಂತಾದ ನಾಗರೀಕ ಸೌಲಭ್ಯಗಳಿಗಾಗಿ ಹೋರಾಡುವುದರೊಂದಿಗೆ ಪಡಿತರ ಅಂಗಡಿಗಳ ಮೂಲಕ ಅರ್ಧ ಬೆಲೆಗೆ ರೇಷನ್ ವಿತರಿಸುವಂತೆ ಸರ್ಕಾರವನ್ನು ಒತ್ತಾಯಿಸಿ ಹೋರಾಟಗಳನ್ನು ನಡೆಸಿ ಬಡಜನರ, ಮಹಿಳೆಯರ ಬದುಕಿನ ಮೂಲ ಪ್ರಶ್ನೆಗಳಿಗೆ ಸ್ಪಂದಿಸಿದೆ.

ಬಹು ಸಂಖ್ಯಾತ ಬಡ ಕೃಷಿಕೂಲಿಕಾರರ ಮಹಿಳೆಯರ ಬದುಕಿಗೆ ಸಹಾಯವಾಗಬಲ್ಲ ಕನಿಷ್ಟ ಕೂಲಿಗಾಗಿ ಆಗ್ರಹಿಸಿ, ಕೃಷಿ ಕೂಲಿಕಾರ ಮಸೂದೆಯನ್ನು ಜಾರಿಗೊಳಿಸಲು ಸರ್ಕಾರಿ ಮಟ್ಟದಲ್ಲಿಯೂ ತೀವ್ರ ಒತ್ತಾಯವನ್ನು ರಾಷ್ಟ್ರಮಟ್ಟದಲ್ಲಿ ತರಲಾಗಿದೆ.

ಲಕ್ಷಾಂತರ - ಸಂಘಟಿತ ಮತ್ತು ಅಸಂಘಟಿತ ದುಡಿಯುವ ಮಹಿಳೆಯರ ಮಧ್ಯದಲ್ಲಿಯೂ ತೊಡಗಿಸಿಕೊಂಡು ಅವರ ಸಮಸ್ಯೆಗಳ ವಿರುದ್ಧ ನಡೆಯುವ ಹೋರಾಟಗಳಲ್ಲಿ ಭಾಗವಹಿಸುತ್ತಾ ನಿರಂತರ ಬೆಂಬಲ ನೀಡುತ್ತಾ ಬಂದಿದೆ.

ವಿದ್ಯಾರ್ಥಿನಿಯನ್ನು ಒಳಗೊಂಡಂತೆ ವಿವಿಧ ಸ್ತರದ ಮಹಿಳೆಯರ ಮಧ್ಯೆ ಸಾಮಾಜಿಕ ಜಾಗೃತಿಯನ್ನು ಮೂಡಿಸುವ ಕೆಲಸವನ್ನು ಎ.ಐ.ಡಿ.ಡಬ್ಲ್ಯೂ.ಎ. ಸಮರ್ಥವಾಗಿ ಮಾಡುತ್ತಿದೆ. ಅಗತ್ಯ ಕಾನೂನು ನೆರವುಗಳನ್ನು ನೀಡುವಲ್ಲಿಯು ಮುನ್ನಡೆಯುತ್ತಿದೆ.

ಮಹಿಳೆಯರ ಆರ್ಥಿಕ ರಾಜಕೀಯ ಸ್ವಾತಂತ್ರ್ಯಕ್ಕಾಗಿ ದಿಟ್ಟ ಹೋರಾಟವನ್ನು ಮಾಡುತ್ತಿರುವ ಎ.ಐ.ಡಿ.ಡಬ್ಲ್ಯೂ.ಎ.ನ ಹೋರಾಟಗಳನ್ನು ಹೀಗೆ ಹಲವಾರು ರೀತಿಯಲ್ಲಿ ಗುರುತಿಸಿಕೊಳ್ಳಬಹುದಾಗಿದೆ.

ಎ.ಐ.ಡಿ.ಡಬ್ಲ್ಯೂ.ಎ. ಮುಖಂಡತ್ವ

- ಸ್ವಾತಂತ್ರ್ಯ ಚಳುವಳಿಯಲ್ಲಿ ಧುಮುಕಿ ಸುಭಾಷ್‌ಚಂದ್ರಬೋಸ್‌ರವರ ಝಾನ್ಸಿ ರಾಣಿ ರೆಜಿಮೆಂಟ್‌ನಲ್ಲಿ ಕ್ಯಾಪ್ಟನ್ ಆಗಿ ಸಾಮ್ರಾಜ್ಯಶಾಹಿಯ ವಿರುದ್ಧ ಧೀರೋದಾತ್ತ ಹೋರಾಟ ನಡೆಸಿದ ದಿಟ್ಟ ಮಹಿಳೆ ಕ್ಯಾಪ್ಟನ್ ಸೆಹಗಲ್.
- ಪುಟ್ಟ ಬಾಲಕಿಯಾಗಿರುವಾಗಲೇ ಆಂಧ್ರದ

ಪುಟ 6 ಕ್ಕೆ

ದೇಶದೊಳಗೆ

ಶ್ರೀ ಕೃಷ್ಣ ಆಯೋಗದ ವರದಿ ಮಂಡನೆ ಮುಂದೂಡಿಕೆ: ಮತ್ತೆ ಶಿವಸೇನೆ-ಬಿಜೆಪಿ ಸರಕಾರದ ವಿಳಂಬ ತಂತ್ರ

ಬಾಬ್ರಿ ಮಸೀದಿ ಧ್ವಂಸದ ನಂತರ 1992-93 ರಲ್ಲಿ ಮುಂಬೈಯನ್ನು ಅಲುಗಾಡಿಸಿದ ಕೋಮುದಂಗೆಗಳ ತನಿಖೆ ನಡೆಸಿದ ನ್ಯಾಯಮೂರ್ತಿ ಶ್ರೀ ಕೃಷ್ಣ ರವರ ಆಯೋಗದ ವರದಿಯನ್ನು ಪ್ರಕಟಿಸಲು ಮಹಾರಾಷ್ಟ್ರದ ಶಿವಸೇನೆ-ಬಿಜೆಪಿ ಸರಕಾರ ಮತ್ತೆ ಹಿಂದೇಟು ಹಾಕಿದೆ. ಆಯೋಗ ತನ್ನ 700 ಪುಟಗಳ ವರದಿಯನ್ನು ಫೆಬ್ರವರಿ 16 ರಂದು ಸರಕಾರಕ್ಕೆ ಸಲ್ಲಿಸಿತ್ತು. ಲೋಕಸಭಾ ಚುನಾವಣೆಗಳ ಮೊದಲೇ ಇದನ್ನು ಪ್ರಕಟಿಸಬೇಕಾಗಿತ್ತು. ಆದರೆ ಏಪ್ರಿಲ್ ತಿಂಗಳಲ್ಲಿ ಪ್ರಕಟಿಸುವದಾಗಿ ಮಹಾರಾಷ್ಟ್ರದ ಮುಖ್ಯಮಂತ್ರಿಗಳು ಆಗ ಭರವಸೆ ನೀಡಿದರು. ಆದರೆ ಈಗ ಮತ್ತೆ ಅದನ್ನು ಮುಂದೂಡಲಾಗಿದೆ. ಇದು ವಿಳಂಬ ತಂತ್ರವಲ್ಲದೆ ಮತ್ತೇನೂ ಅಲ್ಲ ಎಂದು ಸಿಪಿಐ(ಎಂ) ಪೊಲಿಟ್‌ಬ್ಯೂರೋ ಖಂಡಿಸಿದೆ.

ಸಾವಿರಾರು ಜನ ಪ್ರಾಣಕಳಕೊಂಡ, ತಮ್ಮ ಮನೆ-ಮಠಗಳಿಂದ ಹೊಡೆದೋಡಿಸಲ್ಪಟ್ಟ ಈ ಅತ್ಯಂತ ಹೀನ ಕೋಮುದಂಗೆಗಳಿಗೆ ಜವಾಬ್ದಾರರಾದ ಹಲವು ಬಿಜೆಪಿ-ಶಿವಸೇನಾ ಉನ್ನತ ಮುಖಂಡರನ್ನು ರಕ್ಷಿಸಲಿಕ್ಕಾಗಿಯೇ ರಾಜ್ಯ ಸರಕಾರ ಈ ವರದಿಯನ್ನು ಪ್ರಕಟಿಸುತ್ತಿಲ್ಲ ಎಂಬುದು ಸ್ಪಷ್ಟ ಎಂದಿರುವ ಸಿಪಿಐ(ಎಂ) ಪೊಲಿಟ್ ಬ್ಯೂರೋ 'ಪ್ರಸಕ್ತ ಬಜೆಟ್ ಅಧಿವೇಶನದಲ್ಲಿ ವಿಧಾನಸಭೆಯಲ್ಲಿ ವರದಿಯನ್ನು ಮಂಡಿಸಲಾಗುವುದೆಂಬ ತನ್ನ ವಚನವನ್ನು ಮುಖ್ಯಮಂತ್ರಿಗಳು ಮತ್ತೊಮ್ಮೆ ಉಲ್ಲಂಘಿಸಿದ್ದಾರೆ" ಎಂದು ಟೀಕಿಸಿದೆ.

ಇಷ್ಟು ನಗ್ನ ರೀತಿಯಲ್ಲಿ ಪ್ರಜಾಪ್ರಭುತ್ವವನ್ನು ಬುಡಮೇಲು ಮಾಡಲು ಬಿಜೆಪಿ-ಶಿವಸೇನೆ ಸರಕಾರವನ್ನು ಬಿಡಬಾರದು. ದೇಶಕ್ಕೆ ಮತ್ತು ಜನಗಳಿಗೆ ಮಾನವ ಕುಲದ ಮೇಲೆ ಇಂತಹ ಜಘನ್ಯ ಅಪರಾಧ ಎಸಗಲು ಕಾರಣರಾದವರು ಯಾರು ಎಂದು ತಿಳಿಯುವ ಹಾಗು ಇವರನ್ನು ಶಿಕ್ಷಿಸಬೇಕು ಎಂದು ಆಗ್ರಹಿಸುವ ಹಕ್ಕಿದೆ. ತಪ್ಪಿತಸ್ಥರನ್ನು ರಕ್ಷಿಸುವಲ್ಲಿ ಬಿಜೆಪಿ-ಶಿವಸೇನೆಯ ಶಾಮೀಲು ಈಗ ಸಂಪೂರ್ಣವಾಗಿ ಬಯಲಾಗಿದೆ ಎಂದು ಸಿಪಿಐ(ಎಂ) ಪೊಲಿಟ್ ಬ್ಯೂರೋ ಹೇಳಿದೆ.

ಈ ವರದಿಯನ್ನು ತಕ್ಷಣವೇ ಪ್ರಕಟಿಸಬೇಕು, ತಪ್ಪಿತಸ್ಥರ ಮೇಲೆ ದೃಢ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಪಡಿಸಿರುವ ಸಿಪಿಐ(ಎಂ) ಮುಂಬೈಯನ್ನು 1992-93 ರಲ್ಲಿ ಅಲುಗಾಡಿಸಿದ ಈ ಭಯಾನಕ ಕೋಮುದಂಗೆಗಳನ್ನು ಸೃಷ್ಟಿಸಿದ ಅಪರಾಧಿಗಳನ್ನು ರಕ್ಷಿಸುವ ಕೋಮುವಾದಿಗಳ ದುಷ್ಟ ಆಟಗಳನ್ನು ಬಯಲಿಗೆಳೆಯಬೇಕು ಎಂದು ತನ್ನ ಎಲ್ಲಾ ಘಟಕಗಳಿಗೆ ಕರೆ ನೀಡಿದೆ.

ತ್ರಿಪುರಾದಲ್ಲಿ ಮಹಿಳಾ ಹುತಾತ್ಮರ ದಿನ

ಮಾರ್ಚ್ 28, ರಂದು ತ್ರಿಪುರಾದ ಕೊವೈ ಸಬ್‌ಡಿವಿಜನ್‌ನ ಪದ್ಮಬಿಲ್‌ನಲ್ಲಿ ಮಹಿಳಾ ಹುತಾತ್ಮರ ದಿನವನ್ನು ಆಚರಿಸಲಾಯಿತು. 50 ವರ್ಷಗಳ ಹಿಂದೆ ಈ ದಿನದಂದು ಕುಮಾರಿ, ಮಧೂತಿ ಹಾಗೂ ರೂಪಶ್ರೀ ಎಂಬ ಮೂವರು ಧೀರ ಮಹಿಳೆಯರು ಆಗಿನ ಸಂಸ್ಥಾನದ ಸೈನ್ಯಪಡೆಗಳವರು ನಡೆಸುತ್ತಿದ್ದ ಬಡ ಬುಡಕಟ್ಟು ಮಹಿಳೆಯರ ಶೋಷಣೆ ಹಾಗೂ ಚಿತ್ರಹಿಂಸೆಯ ವಿರುದ್ಧ ಹೋರಾಡುತ್ತಾ ತಮ್ಮ ಪ್ರಾಣಗಳನ್ನೇ ಅರ್ಪಿಸಿದ್ದರು.

ಸೈನ್ಯ ಪಡೆಗಳವರು ಸರಿಯಾದ ರಸ್ತೆ ಸಂಪರ್ಕವಿಲ್ಲದ ಆ ದಿನಗಳಲ್ಲಿ ಗುಡ್ಡಗಾಡು ಪ್ರದೇಶಗಳಲ್ಲಿ ತಮ್ಮ ಸಾಮಾನು-ಸರಂಜಾಮುಗಳನ್ನು ಸಾಗಿಸಲು ಮಹಿಳೆಯರನ್ನು ಬಳಸುತ್ತಿದ್ದರು. ಪ್ರತಿಯಾಗಿ ಅವರಿಗೆ ಏನೂ ಕೊಡುತ್ತಿರಲಿಲ್ಲ. ಇದನ್ನು 'ತೈತೂನ್' ಎನ್ನಲಾಗುತ್ತಿತ್ತು. ಈ ಶೋಷಣೆಯ ವಿರುದ್ಧ ಪ್ರತಿಭಟಿಸಲು ಮಾರ್ಚ್ 28, 1948 ರಂದು ಮಹಿಳೆಯರು ದೊಡ್ಡ ಸಂಖ್ಯೆಯಲ್ಲಿ ಪದ್ಮಬಿಲ್‌ನಲ್ಲಿ ಜಮಾಯಿಸಿ ಈ ಪದ್ಧತಿಯ ವಿರುದ್ಧ ಪ್ರತಿರೋಧ ಒಡ್ಡಿದರು. 'ದೇಬೇನಾ ತೈತೂನೇ' (ತೈತೂನ್ ಕೊಡಲಾರೆವು) ಎಂಬ ಘೋಷಣೆ ಮೊಳಗಿತು. ಸೈನ್ಯದ ಸಾಮಾನು ಹೊತ್ತು ಸಾಗಿಸಲು ಅವರು ನಿರಾಕರಿಸಿದರು. ತ್ರಿಪುರಾ ಸಂಸ್ಥಾನದ ಅರಸನ ಸೈನಿಕರು ನಿರ್ದಯವಾಗಿ ಗೋಳಿಬಾರು ಮಾಡಿದಾಗ ಈ ಮೂವರು ಧೀರ ಮಹಿಳೆಯರು ಬಲಿಯಾದರು. ಹಲವರಿಗೆ ಗಾಯಗಳಾದವು.

ಆದರೂ ಈ ಪದ್ಧತಿ ಇನ್ನೂ ಸ್ವಲ್ಪ ಕಾಲ ಮುಂದುವರಿಯಿತು. 'ಗಣಮುಕ್ತಿ ಪರಿಷತ್' ಒಂದು ವ್ಯಾಪಕ ಚಳುವಳಿ ಆರಂಭಿಸಿತು. ಇದನ್ನು ಅತ್ಯಂತ ಕ್ರೂರ ರೀತಿಯಲ್ಲಿ ದಮನ ಮಾಡಲು ಆಗಿದ್ದ ತ್ರಿಪುರಾ ಸಂಸ್ಥಾನದ ರಾಜನ ಸೈನ್ಯ ಪ್ರಯತ್ನಿಸಿತು. ಆದರೆ ಈ ಮೂವರು ಧೀರ ಮಹಿಳೆಯರ ಬಲಿದಾನದ ಸ್ಫೂರ್ತಿಯಿಂದ ಹೋರಾಟ ಕೊನೆಗೂ ಯಶಸ್ವಿಯಾಯಿತು.

ಈ ಮಹಿಳೆಯರ ಬಲಿದಾನ ತ್ರಿಪುರಾದಲ್ಲಿ ಮಹಿಳೆಯರ ಸ್ಥಾನಮಾನವನ್ನು ಹೆಚ್ಚಿಸುವಲ್ಲಿ ಬಹಳ ನೆರವಾಗಿದೆ. ಪಂಚಾಯತುಗಳಲ್ಲಿ ಮಹಿಳೆಯರಿಗೆ 30% ಮೀಸಲಾತಿ ಘೋಷಿಸಿ ಜಾರಿ ಮಾಡಿದ ಮೊದಲ ರಾಜ್ಯ ತ್ರಿಪುರಾ. ಈಗ ತ್ರಿಪುರಾ ವಿಧಾನ ಸಭೆಯಲ್ಲೂ ಮಹಿಳಾ ಪ್ರತಿನಿಧಿಗಳಿದ್ದಾರೆ. ಮಹಿಳೆಯರ ಸಮಸ್ಯೆಗಳಿಗೆ ಸ್ಪಂದಿಸುವ ಒಂದು ಮಹಿಳಾ ಆಯೋಗವಿದೆ.

ಈ ಧೀರ ಮಹಿಳೆಯರ ಬಲಿದಾನದ ಸ್ವರ್ಣ ಜಯಂತಿಯ ಅಂಗವಾಗಿ ಎರಡು ದಿನಗಳ ಕಾರ್ಯಕ್ರಮ ನಡೆಯಿತು. ಅದು ಭಿನ್ನ ರೀತಿಯಲ್ಲಿ ನಡೆಯಿತು. ಚರ್ಚೆಗಳು, ಸಾಂಸ್ಕೃತಿಕ ಕಾರ್ಯಕ್ರಮಗಳು, ಆಟೋಟ ಸ್ಪರ್ಧೆಗಳ ಮೂಲಕ ಎಲ್ಲಾ ವಯೋಗುಂಪಿನ ವಿಭಾಗಗಳ ಜನರು, ಮುಖ್ಯವಾಗಿ ಮಹಿಳೆಯರು ಈ ಕಾರ್ಯಕ್ರಮದಲ್ಲಿ ದೊಡ್ಡ ಸಂಖ್ಯೆಯಲ್ಲಿ ಭಾಗವಹಿಸಿದರು.

ಹರ್ಯಾಣದಲ್ಲಿ ಜನಾದೇಶವನ್ನು ಮುರಿದ ಬಿಜೆಪಿ

ಇತ್ತೀಚಿನ ಲೋಕಸಭಾ ಚುನಾವಣೆಗಳಲ್ಲಿ ಸ್ಪಷ್ಟ ಬಹುಮತ ಪಡೆಯದಿದ್ದರೂ 'ಜನಾದೇಶ'ದ ಮಾತಾಡುತ್ತಿದ್ದ ಬಿಜೆಪಿ ಮತ್ತು ಅವರ ಬೆಂಬಲಿಗರು ಅದೇ ವೇಳೆಗೆ ಹರ್ಯಾಣದಲ್ಲಿ ಪಡೆದ 'ಜನಾದೇಶ'ವನ್ನು ಯಾವುದೇ ನಾಚಿಕೆಯಿಲ್ಲದೆ ಉಲ್ಲಂಘಿಸುತ್ತಿರುವುದರ ಬಗ್ಗೆ ಚಕಾರವೆತ್ತುತ್ತಿಲ್ಲ. ವಾಸ್ತವವಾಗಿ ಅವರಿಗೆ ಬೇಕಾದ್ದು ಜನಾದೇಶವಲ್ಲ ಅಧಿಕಾರದ ಕುರ್ಚಿಗಳು ಎಂದು ಇನ್ನಷ್ಟು ಸ್ಪಷ್ಟವಾಗಿ ಸಾರಿರುವ ರಾಜ್ಯ ಹರ್ಯಾಣ.

ಈ ಏಪ್ರಿಲ್ 1 ರಿಂದ ಹರ್ಯಾಣದ ಹೆಚ್‌ವಿಪಿ-ಬಿಜೆಪಿ ಮೈತ್ರಿಕೂಟದ ಸರಕಾರ ಪಾನನಿಷೇಧವನ್ನು ರದ್ದುಗೊಳಿಸಿದೆ. 1996 ರ ವಿಧಾನಸಭಾ ಚುನಾವಣೆಗಳಲ್ಲಿ ಇದು ಒಂದು ದೊಡ್ಡ ಚುನಾವಣಾ ಪ್ರಶ್ನೆಯಾಗಿತ್ತು.

ಕುಡಿತದಿಂದ ಉಂಟಾಗುತ್ತಿದ್ದ ಕೌಟುಂಬಿಕ ಹಾಗೂ ಸಾಮಾಜಿಕ ಸಮಸ್ಯೆಗಳ ವಿರುದ್ಧ ಮುಖ್ಯವಾಗಿ ಮಹಿಳೆಯರು ಒಂದು ಬೃಹತ್ ಚಳುವಳಿ ಆರಂಭಿಸಿದ್ದರಿಂದ ಅಂದು ರಾಜ್ಯದಲ್ಲಿ ಒಂದು ಬಲವಾದ ಸಾರ್ವಜನಿಕ ಅಭಿಪ್ರಾಯ ಮೂಡಿ ಬಂದಿತ್ತು. ಇದನ್ನು ಬಳಸಿಕೊಂಡು ಹೆಚ್‌ವಿಪಿ-ಬಿಜೆಪಿ ಕೂಟ ಅಧಿಕಾರಕ್ಕೆ ಬಂತು. ಅಧಿಕಾರಕ್ಕೆ ಬಂದ ನಂತರ ಜುಲೈ 1, 1996 ರಿಂದ ಪಾನನಿಷೇಧವನ್ನು ಜಾರಿಗೂ ತಂದಿತು. ಆದರೆ ಈ ಬಾರಿಯ ಲೋಕಸಭಾ ಚುನಾವಣೆಗಳ ನಂತರ ಅದನ್ನು ರದ್ದು ಮಾಡಿತು. ಅದರ ನಂತರ ನಡೆದ ಸಾರಾಯಿ ಅಂಗಡಿಗಳ ಹರಾಜಿನಲ್ಲಿ ಸಿಂಹಪಾಲು ಪಡೆದವರು ಆಳುವ ಕೂಟಕ್ಕೆ ವಿಧೇಯರಾಗಿದ್ದವರು ಎಂದು ತಿಳಿದು ಬಂದಿದೆ. ಪಾನನಿಷೇಧ ಜಾರಿಯಲಿದ್ದಾಗಲೂ ಸರಕಾರದ ಪೋಷಣೆಯಲ್ಲಿ ಕಾನೂನು ಬಾಹಿರ ಸಾರಾಯಿ ಸರಬರಾಜು ಮಾಡಿ ಅಪಾರ ಹಣ ಗಳಿಸಿದವರೂ ಇವರೇ ಎಂದು ಹೇಳಲಾಗುತ್ತಿದೆ.

ಪಾನನಿಷೇಧ ಜಾರಿಗೆ ತಂದು 'ಜನಾದೇಶ'ವನ್ನು ಪಾಲಿಸಿದ ಹೆಚ್‌ವಿಪಿ-ಬಿಜೆಪಿ ಸರಕಾರ ಇದರಿಂದ ಆಗುವ ರೆವಿನ್ಯೂ ಹಾನಿಯನ್ನು ಸಾರ್ವಜನಿಕರಿಂದ ಹೆಚ್ಚಿನ ತೆರಿಗೆಯ ಮೂಲಕ ಭರಿಸುವುದಿಲ್ಲ ಎಂಬ ವಚನವನ್ನು ಮಾತ್ರ ಆಗಲೇ ಮುರಿದುಬಿಟ್ಟಿತು. ವಿದ್ಯುತ್ ದರ, ಬಸ್‌ದರಗಳನ್ನು ಏರಿಸಿ 650 ಕೋಟಿ ರೂ. ದೋಚಿತ್ತು. ಅತ್ತ ಪಾನನಿಷೇಧದ ಜಾರಿಯಲ್ಲಿ ಆಗಲೇ ಬಲವಾದ ಸಾರ್ವಜನಿಕ ಅಭಿಪ್ರಾಯವನ್ನು ಮೂಡಿಸಿದ್ದ ಜನರ ಎಲ್ಲಾ ಸಂಘಟನೆಗಳನ್ನು ಒಳಗೊಳ್ಳಲಿಲ್ಲ ಮಾತ್ರವಲ್ಲ, ಅವರನ್ನು ದೂರವಿಟ್ಟು ಕೇಂದ್ರದಿಂದಲೇ ಜಾರಿಯ ಮೇಲೆ ಹತೋಟಿ ಯಿಡಲಾಯಿತು. ವಾಸ್ತವವಾಗಿ ಇದರ ಹಿಂದೆ ಒಂದು ಯೋಜಿತ ಪಿತೂರಿಯೇ ಇರಬಹುದೆಂದು ಗುಮಾನಿಯಿದೆ.

ಈ ಬಾರಿ ಲೋಕಸಭಾ ಚುನಾವಣೆಗಳಲ್ಲಿ ಸೋತ ನಂತರ ಈ ಸೋಲಿಗೆ ಪಾನನಿಷೇಧವೇ ಕಾರಣ ಎಂದು ಹೇಳಿ ಈಗ ಅದನ್ನು ತಕ್ಷಣ ರದ್ದು ಮಾಡಲಾಗಿದೆ. ವಾಸ್ತವವಾಗಿ ತನ್ನ ಜನ-ವಿರೋಧಿ ನೀತಿಗಳನ್ನು ರಾಜ್ಯದ ಮತದಾರರು ತಿರಸ್ಕರಿಸಿದ್ದಾರೆ ಎಂಬುದನ್ನು ಮರೆಮಾಚುವುದೇ ಇದರ ಉದ್ದೇಶವಿದ್ದಂತಿದೆ. ಆದರೆ ರಾಜ್ಯದ ಜನರನ್ನು ವಂಚಿಸಲು ಈ ಹೆಚ್‌ವಿಪಿ-ಬಿಜೆಪಿ ಕೂಟಕ್ಕೆ ಆಗುತ್ತಿಲ್ಲ. ಎರಡು ವರ್ಷಗಳ ಹಿಂದೆ ಪಾನನಿಷೇಧದ ಹೆಸರಲ್ಲಿ ಹೇರಿದ 650 ಕೋಟಿ ರೂ. ಗಳ ಹೆಚ್ಚಿನ ಹೊರೆಯನ್ನೂ ಇದರ ಜೊತೆಗೆ ರದ್ದು ಮಾಡಬೇಕು ಎಂದು ಅವರು ಆಗ್ರಹಿಸುತ್ತಿದ್ದಾರೆ.

ಕಾಂ. ಕೆ.ಎನ್.ಮಲಬಾಡೆ ನಿಧನ

ಸಿಪಿಐ(ಎಂ) ಮಹಾರಾಷ್ಟ್ರ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರೂ ಸಿಐಟಿಯು ಉಪಾಧ್ಯಕ್ಷರೂ ಆದ ಕಾಂ. ಕೆ.ಎಲ್.ಮಲಬಾಡೆ ಏಪ್ರಿಲ್ 16 ರಂದು ಇಚಲ್‌ಕರಂಜಿಯಲ್ಲಿ ನಿಧನರಾದರು. ಅವರಿಗೆ 64 ವರ್ಷ ವಯಸ್ಸಾಗಿತ್ತು.

ರೈತ ಕುಟುಂಬವೊಂದರಲ್ಲಿ ಹುಟ್ಟಿ ಪವರ್‌ಲೂಂಗಳ ನಗರವಾದ ಇಚಲ್‌ಕರಂಜಿಯ ಮುನಿಸಿಪಲ್ ನೌಕರರಾದ ಮಲಬಾಡೆಯವರು ಮೊದಲು ಮುನಿಸಿಪಲ್ ನೌಕರರ ಸಂಘಟನೆ, ನಂತರ ಮಹಾರಾಷ್ಟ್ರದ ಬಲಿಷ್ಠ ಪವರ್‌ಲೂಂ ಕಾರ್ಮಿಕರ ಸಂಘಟನೆಯ ಸಮರಧೀರ ಮುಖಂಡರಾಗಿ ಬೆಳೆದವರು.

ಅವರು 1990 ರಲ್ಲಿ ಇಚಲ್‌ಕರಂಜಿ ವಿಧಾನಸಭಾ ಕ್ಷೇತ್ರದಿಂದ ಸಿಪಿಐ(ಎಂ) ಅಭ್ಯರ್ಥಿಯಾಗಿ ಚುನಾವಣೆಯಲ್ಲಿ ಗೆದ್ದಿದ್ದರು. 1996 ರ ಲೋಕಸಭಾ ಚುನಾವಣೆಯಲ್ಲಿ ಇಚಲ್‌ಕರಂಜಿ ಕ್ಷೇತ್ರದಿಂದ ಸಿಪಿಐ(ಎಂ) ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದರು.

ಮೇ ದಿನ 1998

ಪುಟ 5 ರಿಂದ

ಸಂಘಗಳಿಗೆ ಮಾನ್ಯತೆ, ಆಡಳಿತದಲ್ಲಿ ಕಾರ್ಮಿಕರ ಭಾಗವಹಿಸುವಿಕೆ ಕುರಿತಂತೆ ಶಾಸನಗಳನ್ನು ತರಲು, ಭವಿಷ್ಯ ನಿಧಿಯನ್ನು ತಟ್ಟದೆ ಒಂದು ನಿಜ ಪೆನ್ಶನ್ ಯೋಜನೆಯೂ ಸೇರಿದಂತೆ ಒಂದು ನೈಜ ಸಾಮಾಜಿಕ ಭದ್ರತಾ ವ್ಯವಸ್ಥೆ ಪಡೆಯಲು ಹಾಗೂ ಶ್ರಮ ಮಾರುಕಟ್ಟೆಯ ಮೇಲಿನ ನಿಬಂಧನೆಗಳನ್ನು ತೆಗೆದುಹಾಕಿ ಪಟ್ಟಭದ್ರ ಹಿತಾಸಕ್ತಿಗಳು ಮನಬಂದಂತೆ ಅದನ್ನು ಸೂರೆಮಾಡಬೇಕೆಂದು ಮಾಡುತ್ತಿರುವ ಹವಣಿಕೆಗಳನ್ನು ವಿಫಲಗೊಳಿಸುವಂತೆ ಈಗಿರುವ ಕೈಗಾರಿಕಾ ಶಾಸನಗಳನ್ನು ಆಮೂಲಾಗ್ರವಾಗಿ ಬದಲಿಸುವಂತೆ ಮಾಡಲು ಕಾರ್ಮಿಕ ಆಂದೋಲನ ತನ್ನ ಸಂಯುಕ್ತ ಒತ್ತಡ ಹಾಕಬೇಕು.

ಅಸಂಘಟಿತ ವಲಯದಲ್ಲಿ ದೇಶದ ದುಡಿಯುವ ಜನಗಳ ಒಂದು ವಿಶಾಲ ವಿಭಾಗ ಬಡತನದ ರೇಖೆಯ ಕೆಳಗಿನ ಜೀವನ ಪರಿಸ್ಥಿತಿಗಳಲ್ಲಿ ಒಂದು ಕನಿಷ್ಠ ಕೂಲಿಯನ್ನಾದರೂ ಒದಗಿಸುವ ಸರಕಾರದ ಯಾವುದೇ ಕ್ರಮವಿಲ್ಲದೆ, ಕೈಗಾರಿಕಾ ಶಾಸನಗಳು ಹಾಗೂ ಸಾಮಾಜಿಕ ಭದ್ರತಾ ಕ್ರಮಗಳನ್ನು ಜಾರಿಗೊಳಿಸುವ ಯಾವುದೇ ಭರವಸೆಯಿಲ್ಲದೆ ಸಂಕಟ ಪಡುತ್ತಿದೆ. ಸಂಘಟಿತ ಕಾರ್ಮಿಕ ಆಂದೋಲನ ಈ ಅಸಂಘಟಿತ ವಲಯದ ಕಾರ್ಮಿಕ ಸಮಸ್ಯೆಗಳನ್ನೆತ್ತಿಕೊಂಡು ನಿರಂತರ ಕ್ರಮಿಸಬೇಕು.

ಬಹುರಾಷ್ಟ್ರೀಯ ಕಂಪನಿಗಳು ಮತ್ತು ಭೂಮಾಲಕರು ಹಸಿವನ್ನೇ ಹಿಂಗಿಸಲು ಕಾತುರವಾಗಿರುವ ಬೂರ್ಜ್ವಾ-ಭೂಮಾಲಕ ಸರಕಾರದ ಹೆಚ್ಚುತ್ತಿರುವ ಧಾಳಿಗಳಿಗೆ ಗ್ರಾಮೀಣ ಬಡವರು ಮತ್ತು ರೈತಾಪಿ ಜನ ತುತ್ತಾಗುತ್ತಿದ್ದಾರೆ. ಸಿಐಟಿಯು ಈ ಗ್ರಾಮೀಣ ಬಡವರ ಹೋರಾಟಗಳಿಗೆ ಸಂಪೂರ್ಣ ಬೆಂಬಲ ವ್ಯಕ್ತಪಡಿಸುತ್ತದೆ.

ಮತ್ತೆ-ಮತ್ತೆ ಮಾತು ಕೊಟ್ಟರೂ ಕೃಷಿ ಕಾರ್ಮಿಕರ ಮಸೂದೆ ಒಂದು ಬಲಿಷ್ಠ ಭೂಮಾಲಕ ಒತ್ತಡದಿಂದಾಗಿ ಇನ್ನೂ ಶಾಸನವಾಗದೆ ಉಳಿದಿದೆ. ಇದು ಶಾಸನವಾಗುವಂತೆ ಮಾಡಲು, ಕೃಷಿ ಕಾರ್ಮಿಕರ ಹಿತಾಸಕ್ತಿಗಳನ್ನು ರಕ್ಷಿಸಲು ಕಾರ್ಮಿಕ ವರ್ಗ ಒಟ್ಟಾಗಿ ಒತ್ತಾಯಿಸಬೇಕು.

ಉದ್ಯೋಗರಹಿತ ಬೆಳವಣಿಗೆಯ ಆರ್ಥಿಕ ಕಾರ್ಯತಂತ್ರ ಗ್ರಾಮೀಣ ಮತ್ತು ನಗರ ಪ್ರದೇಶಗಳ ನಿರುದ್ಯೋಗಿ ಯುವಜನರನ್ನು ಬಲವಾಗಿ ತಟ್ಟುತ್ತಿದೆ. ಹತಾಶರಾದ ಯುವಜನ ವಿಚ್ಛಿದ್ರಕಾರಿ ಹಾಗೂ ಸಮಾಜ ಘಾತುಕ ಶಕ್ತಿಗಳತ್ತ ತಳ್ಳಲ್ಪಡುತ್ತಿದ್ದಾರೆ. ರಾಷ್ಟ್ರೀಯ ಅಭಿವೃದ್ಧಿಗಾಗಿ ಯುವ ಮಾನವ ಸಂಪನ್ಮೂಲಗಳ ಅಪಾರ ಶಕ್ತಿಯನ್ನು ಬಳಸುವ ಒಂದು ಉದ್ಯೋಗವಕಾಶೋನ್ಮುಖಿ ಬೆಳವಣಿಗೆಯ ಕಾರ್ಯತಂತ್ರ ರೂಪಿಸಬೇಕೆಂದು ಕಾರ್ಮಿಕ ವರ್ಗ ಒತ್ತಾಯಿಸಬೇಕು.

ಕೈಗಾರಿಕಾ ರೋಗಗ್ರಸ್ತತೆಯ ಭೂತ ನಿಜವಾಗಿ ಎಲ್ಲಾ ಉದ್ದಿಮೆ ವಲಯಗಳನ್ನು ವ್ಯಾಪಿಸಿದೆ, ಉದ್ದಿಮೆಗಳು ಮುಚ್ಚಿ ಕಾರ್ಮಿಕರು ಕೆಲಸ ಕಳಕೊಳ್ಳುತ್ತಿದ್ದಾರೆ. ಕಾರ್ಮಿಕ ವರ್ಗ ತನ್ನೊಳಗಿನ ಭಿನ್ನಾಭಿಪ್ರಾಯಗಳನ್ನು ಬಿಟ್ಟು ರೋಗಗ್ರಸ್ತ ಘಟಕಗಳ ಪುನರುಜ್ಜೀವನಕ್ಕಾಗಿ ಹೋರಾಡಬೇಕು.

ನಮ್ಮ ಸಮಾಜದ ಬಹುದೊಡ್ಡ ವಿಭಾಗಗಳು ಅಂಧಶ್ರದ್ಧೆ ಹಾಗೂ ಪ್ರತಿಗಾಮಿ ವಿಚಾರಗಳಲ್ಲಿ ಮುಳುಗಿರುವುದರಿಂದ ದೇಶದ ಮಹಿಳೆಯರು ಹೆಚ್ಚು ಹೆಚ್ಚಾಗಿ ಎಲ್ಲಾ ರೀತಿಯ - ದೈಹಿಕ, ಸಾಮಾಜಿಕ, ಆರ್ಥಿಕ - ಕಿರುಕುಳ, ಧಾಳಿಗಳಿಗೆ ಒಳಗಾಗುತ್ತಿದ್ದಾರೆ. ಒಂದು ಘನತೆಯ ಮಾನವ ಬದುಕಿಗಾಗಿ, ಸಮಾನ ಸ್ಥಾನ ಮಾನಕ್ಕಾಗಿ ಭಾರತೀಯ ಮಹಿಳೆಯರ ನ್ಯಾಯಯುತ ಆಗ್ರಹಗಳ ರಕ್ಷಣೆಗೆ ಕಾರ್ಮಿಕ ವರ್ಗ ಮುಂದೆ ಬರಬೇಕು. ಶಾಸನ ಸಭೆಗಳಲ್ಲಿ ಹಾಗೂ ಸಂಸತ್ತಿನಲ್ಲಿ ಮಹಿಳೆಯರಿಗೆ 33% ಮೀಸಲಾತಿಯ ಶಾಸನ ತರಲು ಕಾರ್ಮಿಕ ವರ್ಗ ತನ್ನೆಲ್ಲಾ ಒತ್ತಡವನ್ನು ಹಾಕಬೇಕು. ಮಹಿಳೆಯರ ಮೇಲಿನ ಅತ್ಯಾಚಾರಗಳು, ಕೆಲಸದ ಸ್ಥಳಗಳಲ್ಲಿ ಮತ್ತು ಇತರೆಡೆ ಲೈಂಗಿಕ ಕಿರುಕುಳಗಳ ವಿರುದ್ಧ ಕಾರ್ಮಿಕ ವರ್ಗ ಹೋರಾಡಬೇಕು.

ಸಾವಿರಾರು ಎಳೆಯರನ್ನು ರಾಕ್ಷಸೀ ಶೋಷಣೆಗೊಳಪಡಿಸಿ ಅವರು ಶೋಚನೀಯವಾಗಿ ಬದುಕುವಂತೆ ಮಾಡುತ್ತಿರುವ ಬಾಲ ದುಡಿಮೆಯ ಪಿಡುಗು ಯಾವುದೇ ನಾಗರಿಕ ಸಮಾಜಕ್ಕೆ ಒಂದು ನಾಚಿಕೆಗೇಡಿನ ಸಂಗತಿ. ಬಾಲ ದುಡಿಮೆಯ ಮೂಲ ಕಾರಣ ದಟ್ಟ ದಾರಿದ್ರ್ಯವಾದರೂ ಕಾರ್ಮಿಕ ವರ್ಗ ಮಕ್ಕಳ ಶಿಕ್ಷಣದ ಹಕ್ಕನ್ನು, ದಾರಿದ್ರ್ಯದಿಂದ ಸ್ವಾತಂತ್ರ್ಯದ ಹಕ್ಕನ್ನು ಎತ್ತಿ ಹಿಡಿಯಬೇಕು.

ನಮ್ಮ ಜನಸಂಖ್ಯೆಯ ಇನ್ನೊಂದು ಬಹುದೊಡ್ಡ ವಿಭಾಗ ಆರ್ಥಿಕ ಶೋಷಣೆಯಷ್ಟೇ ಅಲ್ಲ, ಸಾಮಾಜಿಕ ದಮನಕ್ಕೂ ಗುರಿಯಾಗಿದ್ದಾರೆ. ಇತರ ನಮ್ಮ ಸಮಾಜದ ಜಾತಿ ವಿಂಗಡಣೆಯ ಪರಂಪರೆ ಮುಂದುವರಿಯುತ್ತಿರುವುದರ ದುಷ್ಫಲ. ತಮ್ಮ ಹಕ್ಕುಗಳಿಗಾಗಿ ತಲೆ ಎತ್ತಿ ನಿಲ್ಲುವ ದಲಿತರು ಮತ್ತು ಹಿಂದುಳಿದ ವರ್ಗಗಳ ಜನ ದೇಶದ ವಿವಿಧ ಭಾಗಗಳಲ್ಲಿ ಬರ್ಬರ ಧಾಳಿ ಎದುರಿಸಬೇಕಾಗುತ್ತಿದೆ. ಕಾರ್ಮಿಕ ವರ್ಗ ತನ್ನ ಅದೃಷ್ಟವನ್ನು ಈ ದಲಿತ ವಿಭಾಗಗಳ ಜನರೊಂದಿಗೆ ಹಂಚಿಕೊಂಡು ಜಾತಿ ದಮನದ ಉಳಿಕೆಗಳನ್ನು ನಿರ್ಮೂಲ ಮಾಡುವ ಪ್ರತಿಜ್ಞೆ ಮಾಡಬೇಕು.

ಈಗಿನ ಅತ್ಯಂತ ಕಠಿಣ ಹಾಗೂ ಹಾನಿಕಾರಕ ಸನ್ನಿವೇಶ ದೇಶದ ಕಾರ್ಮಿಕ ವರ್ಗದ ಹೆಗಲ ಮೇಲೆ ಅಪಾರ ಜವಾಬ್ದಾರಿಯನ್ನು ಹಾಕಿದೆ. ಜನಗಳ ಮತ್ತು ದೇಶದ ಐಕ್ಯತೆಯನ್ನು ಕಾಪಾಡಿಕೊಂಡು, ಕೋಮುವಾದಿ ಮತ್ತು ವಿಚ್ಛಿದ್ರಕಾರಿ ಶಕ್ತಿಗಳ ವಿರುದ್ಧ ಹೋರಾಟವನ್ನು ಮತ್ತು ಆರ್ಥಿಕವನ್ನು ಒಳಗೊಳ್ಳುತ್ತಿರುವ ಬಿಕ್ಕಟ್ಟಿನ ಕೆಸರಿನಿಂದ ಹೊರ ತೆಗೆಯುವ ಒಂದು ನೈಜ ಪರ್ಯಾಯ ಆರ್ಥಿಕ ನೀತಿಗಾಗಿ ಹೋರಾಟವನ್ನು ಮುಂದಕ್ಕೊಯ್ಯುವ ಹೊಣೆ ಕಾರ್ಮಿಕ ವರ್ಗದ ಮೇಲಿದೆ.

ಕ್ಯೂಬಾದಲ್ಲಿ ಆಗಸ್ಟ್ 1997 ರಲ್ಲಿ ನಡೆದ ಕಾರ್ಮಿಕರ ಅಂತರ್ರಾಷ್ಟ್ರೀಯ ಸಮ್ಮೇಳನದ ಮೇದಿನ 1998 ನ್ನು ವಿಶ್ವಾದ್ಯಂತ ಕಾರ್ಮಿಕ ಸಂಘಗಳ ಕಾರ್ಯಾಚರಣೆಗಳ ಮೂಲಕ ನವ ಉದಾರೀಕರಣ ಮತ್ತು ಜಾಗತೀಕರಣದ ಕಾರಣಗಳು ಮತ್ತು ಪರಿಣಾಮಗಳನ್ನು ಸೋಲಿಸಲು ಒಂದು ಏಕೀಕೃತ ಹೋರಾಟವನ್ನು ಕಟ್ಟುವ ದಿನವಾಗಿ ಆಚರಿಸಲು ಕರೆ ನೀಡಿತ್ತು. ಇದನ್ನು ಸಿಐಟಿಯು ಅನುಮೋದಿಸುತ್ತದೆ.

ಸಾಮ್ರಾಜ್ಯಶಾಹಿ ನಿರ್ದೇಶಿತ ಆರ್ಥಿಕದ ನೀತಿಯನ್ನು ಸೋಲಿಸಲು ಹಾಗು ಕೋಮುವಾದಿ, ವಿಚ್ಛಿದ್ರಕಾರಿ ಶಕ್ತಿಗಳ ಬೆದರಿಕೆಯನ್ನು ವಿಫಲಗೊಳಿಸಲು ಕಾರ್ಮಿಕ ವರ್ಗ ಕೃಷಿಕೂಲಿಕಾರರು, ರೈತಾಪಿ ಜನ ಹಾಗೂ ಎಲ್ಲಾ ದೇಶಪ್ರೇಮಿ, ಜಾತ್ಯಾತೀತ ಮತ್ತು ಪ್ರಜಾಪ್ರಭುತ್ವವಾದಿ ಜನ ಸಮೂಹಗಳೊಂದಿಗೆ ಒಂದು ವಿಶಾಲ ಆಧಾರದ ಮೈತ್ರಿಯನ್ನು ಕಟ್ಟಿ ಬೃಹತ್ ಐಕ್ಯ ಕಾರ್ಯಾಚರಣೆಗಳನ್ನು ನಡೆಸಬೇಕು ಎಂದೂ ಸಿಐಟಿಯು ಕರೆ ನೀಡುತ್ತದೆ.

ಎಐಡಿಡಬ್ಲ್ಯೂಎ ಸಮ್ಮೇಳನ

ಪುಟ 5 ರಿಂದ

ಪ್ರಖ್ಯಾತ ತೆಲಂಗಾಣ ರೈತ ಹೋರಾಟದಲ್ಲಿ ಭಾಗವಹಿಸಿ ಬಂದೂಕು ಹಿಡಿದು, ಗೆರಿಲ್ಲಾ ಯುದ್ಧದಲ್ಲಿ ಪಾಲ್ಗೊಂಡು ಬ್ರಿಟಿಷರ, ದೇಶೀ ಪಾಳೆಯಗಾರರ ಎದೆಯನ್ನು ನಡುಗಿಸಿದ ಧೀರ ಮಹಿಳೆ ಮಲ್ಲು ಸ್ವರಾಜ್ಯಂ.

- ಕೇರಳದಲ್ಲಿನ ತೆಂಗಿನನಾರು, ಗೋಡಂಬಿ ಉದ್ಯಮಗಳಲ್ಲಿ ದುಡಿಯುವ ಲಕ್ಷಾಂತರ ಮಹಿಳಾ ಕಾರ್ಮಿಕರ ಸಮಸ್ಯೆಗಳ ವಿರುದ್ಧ ಸಂಘಟಿತ ಹೋರಾಟಗಳನ್ನು ನಡೆಸಿದ, ಹಲವಾರು ಕಾರ್ಖಾನೆಗಳ ಕಾರ್ಮಿಕ ಮುಖಂಡರಾಗಿ, ಪ್ರಸ್ತುತ ಕೇರಳ ಸರ್ಕಾರದ ಕೈಗಾರಿಕಾ ಮಂತ್ರಿಗಳಾಗಿ ದುಡಿಯುತ್ತಿರುವ ಸುಶೀಲಾ ಗೋಪಾಲನ್. ಇನ್ನೂ ಮುಂತಾದವರು.

ಪ್ರತಿಯೊಬ್ಬ ಎ.ಐ.ಡಿ.ಡಬ್ಲ್ಯೂ.ಎ.ನ ಮುಖಂಡರು ಈ ರೀತಿಯ ಜನಪರ ಹೋರಾಟಗಳ, ಅನುಭವಗಳ ಹಿನ್ನೆಲೆಯಲ್ಲಿ ರಾಷ್ಟ್ರಮಟ್ಟದಲ್ಲಿ ಕೆಲಸ ಮಾಡುತ್ತಿದ್ದು ಸಂಘಟನೆಯ ನೇತೃತ್ವವನ್ನು ವಹಿಸಿರುತ್ತಾರೆ.

ಸಾಮಾಜಿಕ ಪರಿವರ್ತನೆಯಲ್ಲಿ ನಂಬಿಕೆಯನ್ನಿಟ್ಟಿರುವ ಈ ಸಂಘಟನೆ ಮಹಿಳಾ ಸಂಬಂಧಿ ವಿಷಯಗಳಿಗೆ ಸೀಮಿತಗೊಳಿಸಿಕೊಳ್ಳದೆ, ವಿಶಾಲ ಜನಸಮೂಹದ ಎಲ್ಲಾ ಪ್ರಶ್ನೆಗಳಿಗೂ ಸ್ಪಂದಿಸಬಯಸುತ್ತದೆ. ಮಹಿಳಾ ಸಮಾನತೆಯ ಅವಶ್ಯಕತೆಯ ಕಾಳಜಿಯುಳ್ಳ ಪ್ರತಿ ಪುರುಷರ ಬೆಂಬಲ ಮತ್ತು ಸಹಾಯವನ್ನು ಈ ಹಿನ್ನೆಲೆಯಲ್ಲಿ ಎ.ಐ.ಡಿ.ಡಬ್ಲ್ಯೂ.ಎ. ಇಚ್ಛಿಸುತ್ತದೆ. ಹಾಗೆಯೇ ಪ್ರಜ್ಞಾವಂತರ ಪ್ರಜಾಸತ್ತಾತ್ಮಕ ಸಂಘಟನೆಗಳ ನೆರವು ಮತ್ತು ಸಹಕಾರವನ್ನು ಬಯಸುತ್ತದೆ.

ಕರ್ನಾಟಕದಲ್ಲಿ ಕಳೆದವಾರ

ಏಪ್ರಿಲ್ 24

ಬೀದರ್, ಕಲ್ಬುರ್ಗಿ ಜಿಲ್ಲೆಗಳಲ್ಲಿ ಬೆಳನಾಶವಾಗಿರುವ ರೈತರಿಗೆ ಪ್ರತಿ ಏಕರೆಗೆ 500 ರೂ.ನಂತೆ ಗರಿಷ್ಠ 2500 ರೂ, ಆತ್ಮಹತ್ಯೆ ಮಾಡಿಕೊಂಡಿರುವ 10 ರೈತ ಕುಟುಂಬಗಳಿಗೆ ತಲಾ 1 ಲಕ್ಷ ರೂ. ಪರಿಹಾರ ನೀಡಲು ಜಂಟಿ ಸದನ ಸಮಿತಿಯ ಮಧ್ಯಂತರ ಶಿಫಾರಸು.

ಏಪ್ರಿಲ್ 25

ಉದ್ಯಮ ವಲಯದಲ್ಲಿ ಖಾಸಗೀ ಬಂಡವಾಳ ಹೂಡಿಕೆ ಪ್ರಮಾಣ ಹೆಚ್ಚಿಸಲು ತೀವ್ರ ಪ್ರಯತ್ನ ನಡೆಸಬೇಕು, ಪ್ರಾಥಮಿಕ ಶಿಕ್ಷಣಕ್ಕೆ ಬಜೆಟ್ಟಿನಲ್ಲಿ ನೀಡಿದ ಹಣದ ಜೊತೆಗೆ 350 ಕೋಟಿ ರೂ. ಒದಗಿಸಬೇಕು ಎಂದು ರಾಜ್ಯ ಸರಕಾರಕ್ಕೆ ರಾಜ್ಯ ಯೋಜನಾ ಮಂಡಳಿಯ ಶಿಫಾರಸು.

ಮಹದಾಯಿ ನದಿಯಿಂದ ಮಲಪ್ರಭಾ ನದಿಗೆ ನೀರು ಹರಿಸುವ ಯೋಜನೆಗೆ ಸಂಬಂಧಿಸಿದಂತೆ ಕರ್ನಾಟಕ ಮತ್ತು ಗೋವಾದ ತಲಾ ಮೂವರು ಅಧಿಕಾರಿಗಳಿರುವ ತಾಂತ್ರಿಕ ಸಮಿತಿ ರಚನೆ.

ರಾಯಚೂರಿನ ಸಿಂಧನೂರು ತಾಲ್ಲೂಕಿನ ಬಸವಣ್ಣ ಕ್ಯಾಂಪಿನಿಂದ ಇನ್ನೊಂದು ರೈತನ ಆತ್ಮಹತ್ಯೆ ಪ್ರಕರಣ ವರದಿ.

ಗುತ್ತಿಗೆ ಕಾರ್ಮಿಕ ಪದ್ಧತಿಯನ್ನು ಕೆಲವೊಂದು ಉದ್ದಿಮೆಗಳಲ್ಲಿ ರದ್ದು ಮಾಡಲು ಸಲಹಾ ಸಮಿತಿ ರಚಿಸಿರುವುದಾಗಿ ಕಾರ್ಮಿಕ ಮಂತ್ರಿಗಳು.

ಏಪ್ರಿಲ್ 26

ಕಲ್ಬುರ್ಗಿಯಲ್ಲಿ ಹಿಂದೆಂದೂ ಕಾಣದಂತ ಭಾರಿ ಮಳೆ. 4 ಸಾವು, 50 ಮಂದಿಗೆ ಗಾಯ, 70 ಮನೆಗಳಿಗೆ ಹಾನಿ.

ಏಪ್ರಿಲ್ 27

ಸರಕಾರಿ ನೌಕರರ ವರ್ಗಾವಣೆಯಲ್ಲಿ ಅನಗತ್ಯ ಶಿಫಾರಸು ಮಾಡುವುದರಿಂದ ದೂರ ಉಳಿಯಬೇಕು ಎಂದು ಶಾಸಕರಿಗೆ ಮುಖ್ಯಮಂತ್ರಿಗಳ ಮನವಿ.

ನ್ಯಾಯ ನೀಡಿಕೆಯಲ್ಲಿ ವಿಳಂಬವಾಗುತ್ತಿದೆಯೆಂದು 12 ಕಾರ್ಮಿಕ ನ್ಯಾಯಾಲಯಗಳು ಹಾಗೂ 4 ಔದ್ಯಮಿಕ ಮಂಡಳಿಗಳ ಆಡಳಿತವನ್ನು ಹೈಕೋರ್ಟ್ ಅಧೀನಕ್ಕೆ ವರ್ಗಾಯಿಸಲಾಗಿದೆ ಎಂದು ಕಾನೂನು ಮಂತ್ರಿಗಳು.

ಏಪ್ರಿಲ್ 28

ತಾನು ಶರಣಾಗಲಾರೆ ಎಂದು ಕುಖ್ಯಾತ ದಂತ ಚೋರ ವೀರಪ್ಪನ್.

ಏಪ್ರಿಲ್ 29

ಕರ್ನಾಟಕ ಸರಕಾರದ ಅಧೀನವಿರುವ 68 ಸಾರ್ವಜನಿಕ ವಲಯದ ಘಟಕಗಳಲ್ಲಿ ಸುಮಾರಾಗಿ ಎಲ್ಲಾ ನಷ್ಟದಲ್ಲಿವೆ ಎಂದು ಕಾನೂನು ಮಂತ್ರಿಗಳು.

ಏಪ್ರಿಲ್ 30

ವಿಧಾನಪರಿಷತ್ತು ಚುನಾವಣೆಗಳಲ್ಲಿ ತನ್ನ ಐದನೇ ಅಭ್ಯರ್ಥಿ ಕೆ.ಹೆಚ್. ಶ್ರೀನಿವಾಸ ಉಮೇದುವಾರಿಕೆಯನ್ನು ಹಿಂತಗೆದುಕೊಳ್ಳಲು ಜನತಾದಳ ನಿರ್ಧಾರ.

ಲೆವಲಿಂಗ್ ಸಾಲ ವಸೂಲಾತಿ ತಾತ್ಕಾಲಿಕ ಸ್ಥಗಿತ

ರಾಮದುರ್ಗ: ರಾಮದುರ್ಗ ತಾಲೂಕಿನ 12 ಹಳ್ಳಿಗಳ 219 ರೈತರಿಗೆ ಸಂಬಂಧಿಸಿದ ಸುಮಾರು ರೂ 30 ಲಕ್ಷಗಳ ವಸೂಲಾತಿಯನ್ನು ತಾತ್ಕಾಲಿಕವಾಗಿ ತಡೆ ಹಿಡಿಯಬೇಕೆಂದು ಮುಖ್ಯಮಂತ್ರಿಗಳು ಆದೇಶ ನೀಡಿದ್ದಾರೆ.

ಮಾರ್ಚ್ 27 ರಂದು ಭೇಟಿ ಮಾಡಿದ ರೈತ ಮುಖಂಡರ ನಿಯೋಗಕ್ಕೆ ಮುಖ್ಯ ಮಂತ್ರಿಗಳು ಲಿಖಿತ ಮೂಲಕ ಈ ಆದೇಶದ ಪ್ರತಿ ನೀಡಿದ್ದಾರೆ.

ಮಲಪ್ರಭಾ ನೀರಾವರಿ ಆರಂಭವಾದಾಗ ಭೂಮಿ ಸಮಪಾತಳಿ (ಲೇವಲಿಂಗ)ಗಾಗಿ ರಾಮದುರ್ಗ ತಾಲೂಕಿನ 12 ಗ್ರಾಮಗಳಲ್ಲಿ ನಬಾರ್ಡಿನಿಂದ ಸಾಲ ನೀಡಲಾಗಿತ್ತು. ರೈತರಿಗೆ ನೇರವಾಗಿ ಸಾಲ ನೀಡದೇ ಕಾಡಾ ಸಿಬ್ಬಂದಿ ಕಾಟ್ರಾಕ್ಟರ ಮೂಲಕ ಅರೆಬರೆ ಮಾಡಿಸಿ ರೈತರ ಮೇಲೆ ಸಾಲ ಹೇರಲಾಗಿತ್ತು. ಅಚ್ಚುಕಟ್ಟು ಪ್ರದೇಶದಲ್ಲಿ ನಡೆಯುವ ಈ ಲೇವಲಿಂಗ ಕೆಲಸವನ್ನು ಸರಕಾರ ಉಚಿತವಾಗಿ ನಿರ್ವಹಿಸುವರೆಂಬ ತಿಳುವಳಿಕೆಯನ್ನು ರೈತರಿಗೆ ನೀಡಲಾಗಿತ್ತು. 12 ಗ್ರಾಮಗಳ 219 ರೈತರ ಹೆಸರಿನಲ್ಲಿ ದಿ:31-03-97 ರವರೆಗೆ ರೂ 13,22,422 ಮತ್ತು ಬಡ್ಡಿ ರೂ 16, 38, 562 ಸೇರಿ ಒಟ್ಟು ರೂ 29, 50,984 ಆಗಿದೆ. ಕಂದಾಯ ಇಲಾಖೆಯವರು ಈ ಸಾಲವಸೂಲಾತಿಗಾಗಿ ಸಾಲಪಾವತಿಮಾಡದ ರೈತರ ಜಮೀನನ್ನು ಮುಟ್ಟುಗೋಲು ಹಾಕಿಕೊಂಡಿದ್ದಾರೆ. ಇದರಿಂದಾಗಿ ಪರಿಸ್ಥಿತಿ ಗಂಭೀರವಾಗಿತ್ತು.

ಕರ್ನಾಟಕ ಪ್ರಾಂತ ರೈತ ಸಂಘದ ರಾಮದುರ್ಗ ತಾಲೂಕಾ ಘಟಕವು ಈ ರೈತರನ್ನು ಸಂಘಟಿಸಿ ಮತಪ್ರದರ್ಶನ ನಡೆಸಿ ಈ ಸಾಲವನ್ನು ಮನ್ನಾ ಮಾಡಲು ಅಗ್ರಹಪಡಿಸಿತ್ತು.

ಲೇವಲಿಂಗ ಸಾಲ ಪಡೆದ ರೈತರ ನಿಯೋಗವೊಂದು 27-03-1998 ರಂದು ಮುಖ್ಯ ಮಂತ್ರಿಗಳನ್ನು ಬೆಂಗಳೂರಿನಲ್ಲಿ ಬೇಟಿಮಾಡಿ ಸಾಲಮನ್ನಾ ಮಾಡಲು ವಿನಂತಿಸಿಕೊಂಡಿತು. ಮಾನ್ಯ ಮುಖ್ಯಮಂತ್ರಿಗಳು ಸಾಲವಸೂಲಾತಿಯನ್ನು ತಾತ್ಕಾಲಿಕವಾಗಿ ತಡೆಹಿಡಿದು ಸಂಬಂಧಿಸಿದ ಇಲಾಖೆಯಿಂದ ಸಮಗ್ರ ವರದಿ ತರಿಸಿ ಸಾಲ ಮನ್ನಾ ಬಗ್ಗೆ ಸಂಪುಟದಲ್ಲಿ ನಿರ್ಧರಿಸಲಾಗುವುದೆಂದು ಆದೇಶ ನೀಡಿದ್ದಾರೆ.

ಮುಖ್ಯಮಂತ್ರಿಗಳನ್ನು ಬೇಟಿ ಮಾಡಿದ ನಿಯೋಗದಲ್ಲಿ ಕರ್ನಾಟಕ ಪ್ರಾಂತ ರೈತ ಸಂಘದ ಮುಖಂಡ ವಿ.ಪಿ ಕುಲಕರ್ಣಿ, ಜಿ. ವಾಯ ಹೆಬ್ಬಳ್ಳಿ ಮುಂತಾದವರಿದ್ದರು.

ಈ ನಿಯೋಗದೊಟ್ಟಿಗೆ ತೆರಳಿ ಸಮಸ್ಯೆಯನ್ನು ಮುಖ್ಯಮಂತ್ರಿಗಳಿಗೆ ಮನದಟ್ಟುಮಾಡಿ ಸಮಸ್ಯೆಯನ್ನು ಬಗೆಹರಿಸಲು ಕ್ರಮಿಸಿದ ರಾಮದುರ್ಗ ತಾಲೂಕಿನ ಶಾಸಕ ಶ್ರೀ ಬಿ.ಬಿ. ಹಿರೇರೆಡ್ಡಿ ಅವರಿಗೆ ಮತ್ತು ಬೆಳಗಾಂವಿ ಜಿಲ್ಲೆಯ ಉಸ್ತುವಾರಿ ಮಂತ್ರಿ ಶ್ರೀ ಉಮೇಶ ಕತ್ತಿ ಅವರನ್ನು ವಿ.ಪಿ. ಕುಲಕರ್ಣಿ ಅಭಿನಂದಿಸಿದ್ದಾರೆ.

ಬೆಟರಮೆಟು ಲೇವಿ ವಿರೋಧಿಸಿ ರೈತ ಜಾಗೃತಿ ಜಾಥಾ

ರಾಮದುರ್ಗ: ಹಿಂದೆ ಗುಂಡೂರಾವ್ ಸರಕಾರ ಆಡಳಿತದಲ್ಲಿದ್ದಾಗ ನೀರಾವರಿ ಭೂಮಿಗಳಿಗೆ ಬೆಟರ್‌ಮೆಂಟ್ ಲೇವಿ (ಅಭಿವೃದ್ಧಿಕರ) ಆಕರಿಸಿದ್ದನ್ನು ವಿರೋಧಿಸಿ ಐತಿಹಾಸಿಕ ನರಗುಂದ ಬಂಡಾಯಕ್ಕೆ ನಾಂದಿಯಾಗಿತ್ತು.

ಈಗ ರಾಜ್ಯ ಸರಕಾರದ ಆರ್ಥಿಕ ಸಲಹೆಗಾರರಾಗಿರುವ ಶ್ರೀ ನಂಜುಡಪ್ಪನವರು ಬೆಟರಮೆಂಟ್ ಲೇವಿ ಆಕರಿಸಬೇಕೆನ್ನುವ ವಿಚಾರ ಪ್ರತಿಪಾದಿಸುತ್ತಿದ್ದಾರೆ. ರಾಜ್ಯ ಸರಕಾರವು ಈ ಕುರಿತು ಸದನ ಸಮಿತಿ ರಚಿಸುವ ಯತ್ನದಲ್ಲಿದೆ.

ಬೆಟರಮೆಂಟ್ ಲೇವಿ ಆಕರಿಸಬೇಕೆನ್ನುವ ವಿಚಾರ ಕೈ ಬಿಡಬೇಕೆಂದು ರಾಮದುರ್ಗ ತಾಲೂಕಿನಲ್ಲಿ ಮುಂಗಾರಿ ಹಾಗೂ ಹಿಂಗಾರಿ ಬೆಳೆ ಹಾನಿ ಆಗಿರುವುದನ್ನು ಸಮೀಕ್ಷೆ ಮಾಡಬೇಕು. ಬೀಜ ಗೊಬ್ಬರ ಔಷಧಿಗಳನ್ನು ಸರಕಾರವೇ ನೇರವಾಗಿ ಪೂರೈಸಬೇಕೆಂದು ಆಗ್ರಹಿಸಿ ಕರ್ನಾಟಕ ಪ್ರಾಂತ ರೈತ ಸಂಘದ ತಾಲೂಕು ಘಟಕವು ತಾಲೂಕಿನ ನೀರಾವರಿ ಗ್ರಾಮಗಳಲ್ಲಿ ರೈತ ಜಾಗೃತಿ ಆರಂಭಿಸಿದೆ. ಈಗ 18 ಗ್ರಾಮಗಳಲ್ಲಿ ಸಭೆಗಳು ನಡೆದಿವೆ.

ಜೀಪ್ ಜಾಥಾದ ನೇತೃತ್ವವನ್ನು ಕರ್ನಾಟಕ ಪ್ರಾಂತ ರೈತ ಸಂಘದ ಮುಖಂಡ ವಿ.ಪಿ.ಕುಲಕರ್ಣಿ ಮತ್ತು ಗೈಬು ಜೈನೆಖಾನ ವಹಿಸಿದ್ದಾರೆ.

ಆಟೋರಿಕ್ಷಾ ಚಾಲಕರ 23 ನೇ ವಾರ್ಷಿಕ ಸಭೆ

ಬೆಂಗಳೂರು: ಆಟೋರಿಕ್ಷಾ ಚಾಲಕರ ಸಂಘ (ಸಿ.ಐ.ಟಿ.ಯು)ದ 23 ನೇ ಸರ್ವ ಸದಸ್ಯರ ಸಭೆಯು ಎಪ್ರಿಲ್ 26 ರಂದು ಶ್ರೀ. ಅರಸೋಜಿರಾವ್ ಕಲ್ಯಾಣ ಮಂಟಪದಲ್ಲಿ ಶ್ರೀ.ಎ.ಕೆ.ಕುಪ್ಪುಸ್ವಾಮಿ ಅವರ ಅಧ್ಯಕ್ಷತೆಯಲ್ಲಿ ನಡೆಯಿತು.

ಸಿ.ಐ.ಟಿ.ಯು ಕರ್ನಾಟಕ ರಾಜ್ಯ ಅಧ್ಯಕ್ಷರಾದ ಡಾ: ಎಸ್ ಸೂರ್ಯ ನಾರಾಯಣರಾವ್, ಅವರು ಧ್ವಜಾರೋಹಣ ನೆರವೇರಿಸಿದರು. ರಾಜ್ಯದ ಉಪಾಧ್ಯಕ್ಷರಾದ ಆರ್.ಶ್ರೀನಿವಾಸ್ ಉದ್ಘಾಟಿಸಿದರು. ಅತಿಥಿಗಳಾಗಿ ಕರ್ನಾಟಕ ಪ್ರಾಂತ್ಯ ರೈತ ಸಂಘದ ಕಾರ್ಯದರ್ಶಿಗಳಾದ ಪಿ.ಜಗನ್ನಾಥ ಅವರು ಚಾಲಕರನ್ನುದ್ದೇಶಿಸಿ ಭಾಷಣ ಮಾಡಿದರು.

ಸಭೆಯ ನೂತನ ಸಮಿತಿಗೆ 21 ಮಂದಿ ಕಾರ್ಯಕಾರಿ ಸಮಿತಿಯ ಸದಸ್ಯರನ್ನು ಮತ್ತು 9 ಜನ ಪದಾಧಿಕಾರಿಗಳನ್ನು ಆರಿಸಿತು. ಅಧ್ಯಕ್ಷರು: ಮೀನಾಕ್ಷಿಸುಂದರಂ, ಉಪಾಧ್ಯಕ್ಷರಾಗಿ ಎ.ಎಸ್.ಟಿ.ಅರಸು, ಜ.ಟಿ.ಮಹಾದೇವ, ಎ.ಕೆ.ಕುಪ್ಪುಸ್ವಾಮಿ, ಪ್ರಧಾನ ಕಾರ್ಯದರ್ಶಿಯಾಗಿ ಶ್ರೀ.ಹೆಚ್. ಜಿ.ಶ್ರೀನಿವಾಸ ಮೂರ್ತಿ, ಸಹ ಕಾರ್ಯದರ್ಶಿಗಳಾಗಿ ಕೆ.ಕೆ. ತನ್ನಿಕಾಚಲಂ, ಸಿ.ರಾಮಚಂದ್ರ, ಆರ್ ನಂಜಪ್ಪ, ಖಜಾಂಚಿಯಾಗಿ ಸಿ.ಸಿದ್ದಯ್ಯ ಆಯ್ಕೆಗೊಂಡರು.

ಸಭೆಯು ಕೈಗೊಂಡ ನಿರ್ಣಯಗಳು:

ಚಿತ್ರಹಿಂಸೆ ನೀಡಿದ ಪೋಲೀಸರ ಮೇಲೆ ಕ್ರಮಕ್ಕೆ ಒತ್ತಾಯ

ಆಟೋಚಾಲಕ ರಾಮಚಂದ್ರರನ್ನು ಅಕ್ರಮವಾಗಿ ಬಂಧಿಸಿ ಚಿತ್ರಹಿಂಸೆ ನೀಡಿದ ಜೀಗಜೀವನರಾಂ ಪೋಲೀಸರ ಮೇಲೆ ಕ್ರಮ ಜರುಗಿಸಬೇಕು,

ಆಟೋರಿಕ್ಷಾ ಚಾಲಕರ ಅಪಘಾತ ಪರಿಹಾರ ನಿಧಿ ಶೀಘ್ರ ವಿಚಾರಣೆಗೆ ಮಂಡಿಸುವಂತೆ ನಿರ್ಣಯ ಕೈಗೊಂಡಿದೆ.

ಅಂಗನವಾಡಿ ನೌಕರರಿಂದ ಜೂನ್ 12ರಂದು ಮುಖ್ಯಮಂತ್ರಿ ಮನೆ ಮುತ್ತಿಗೆ

ಅಂಗನವಾಡಿ ನೌಕರರು ತಮ್ಮ ಬಹುದಿನಗಳ ಬೇಡಿಕೆಗಳನ್ನು ಈಡೇರಿಸಬೇಕೆಂದು ಒತ್ತಾಯಿಸಿ ಕರ್ನಾಟಕ ರಾಜ್ಯ ಅಂಗನವಾಡಿ ನೌಕರರ ನೇತೃತ್ವದಲ್ಲಿ ಜೂನ್ 12ಕ್ಕೆ ಬೃಹತ್ ಮೆರವಣಿಗೆ ಮತ್ತು ಮುಖ್ಯಮಂತ್ರಿ ಮನೆ ಮುತ್ತಿಗೆ ಕಾರ್ಯಕ್ರಮವನ್ನು ಸಂಘಟಿಸಲಾಗಿದೆ.

ಈಗಾಗಲೆ ಸಂಘದ ರಾಜ್ಯ ಸಮಿತಿಯ ತೀರ್ಮಾನದಂತೆ ಮೊದಲನೆ ಹಂತದಲ್ಲಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ನಿರ್ದೇಶಕರನ್ನು ಭೇಟಿ ಮಾಡಲಾಗಿದೆ. ಅವರು ಸೌಹಾರ್ದಯುತವಾಗಿ ಸಮಸ್ಯೆಯನ್ನು ಕೂಡಲೆ ಬಗೆ ಹರಿಸುತ್ತೇವೆ. ಜಿಲ್ಲಾ ಪಂಚಾಯತಿಗಳಿಂದ ಸಿ.ಡಿ.ಪಿ.ಓ.ಗಳ ಮೂಲಕ ನೌಕರರ ವೇತನಕ್ಕೆ ಹಣ ಜಮಾ ಮಾಡುವಂತೆ ಆಜ್ಞೆ ಹೊರಡಿಸಿದ್ದಾರೆ ಕೂಡ.

ನಂತರದ ಹಂತದಲ್ಲಿ ಇಲಾಖೆಯ ಮಂತ್ರಿಗಳನ್ನು ಭೇಟಿಯಾಗಿ ಚರ್ಚೆ ನಡೆಸಲಾಗಿ ಅವರೂ ಸಹ ಕೆಲವು ಭರವಸೆಗಳನ್ನು ನೀಡಿ ಮುಖ್ಯಮಂತ್ರಿಗಳ ಕಡೆಗೆ ಬೆರಳು ತೋರಿಸಿ, ಹಾಗೂ ರಾಜ್ಯ ಸಮಿತಿಯ ತೀರ್ಮಾನದ ಹಿನ್ನೆಲೆಯಲ್ಲಿ ಮುಖ್ಯಮಂತ್ರಿಗಳನ್ನು ರಾಜ್ಯ ಮಟ್ಟದ ನಿಯೋಗವೊಂದು ಭೇಟಿಯಾಗಿ ಚರ್ಚೆ ನಡೆಸಿ ರಾಜ್ಯ ಸರ್ಕಾರ ವ್ಯಾಪ್ತಿಗೆ ಬರುವ ಬೇಸಿಗೆ ರಜೆ, ಬೋನಸ್, ಮುಂತಾದ ಬೇಡಿಕೆಗಳನ್ನು ಈಡೇರಿಸಲೇಬೇಕಾಗಿ ಒತ್ತಾಯಪಡಿಸಿದೆ. ಮುಖ್ಯಮಂತ್ರಿಗಳು ಇಲಾಖೆಯ ಹಾಗೂ ಮಂತ್ರಿಗಳ ಸಭೆ ಕರೆದು ಬಗೆ ಹರಿಸುವುದಾಗಿ ತಿಳಿಸಿರುತ್ತಾರೆ. ಅವರು ನೀಡಿದ ಭರವಸೆಗಳ ಜಾರಿಗಾಗಿ ಹೋರಾಟ ಮಾಡಲೇಬೇಕಾಗಿರುವ ಅನಿವಾರ್ಯತೆಯಿಂದಾಗಿ ಮುಖ್ಯಮಂತ್ರಿಗಳ ಮನೆ ಮುತ್ತಿಗೆ ಹಾಕಬೇಕಾಗಿದೆ. ಈ ಹೋರಾಟಕ್ಕೆ ರಾಜ್ಯದ ಎಲ್ಲಾ ಪ್ರದೇಶಗಳಿಂದಲೂ ನೌಕರರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳಲು ರಾಜ್ಯ ಸಮಿತಿಯು ವಿನಂತಿಸಿರುತ್ತದೆ.

ಗ್ರಾಮ ಪಂಚಾಯಿತಿಗೆ ಮುತ್ತಿಗೆ

ಮಂಗಳೂರು: ಕುಪ್ಪೆಪದವು ಗ್ರಾಮ ಪಂಚಾಯತು ಆರೋಗ್ಯ ಕೇಂದ್ರಕ್ಕೆ ಖಾಯಂ ವೈದ್ಯಾಧಿಕಾರಿಗಳನ್ನು ನೇಮಿಸದಿರುವುದನ್ನು ಪ್ರತಿಭಟಿಸಿ ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಶನ್ (ಡಿ.ವೈ.ಎಫ್.ಐ) ಕುಪ್ಪೆಪದವು ಘಟಕದ ನೇತೃತ್ವದಲ್ಲಿ ಎಪ್ರಿಲ್ 21 ರಂದು ಕುಪ್ಪೆಪದವು ಗ್ರಾಮಪಂಚಾಯತಿಗೆ ಸಾರ್ವಜನಿಕರು ಮುತ್ತಿಗೆ ಹಾಕಿದರು.

ಪ್ರತಿಭಟನೆಯ ನಂತರ ಪಂಚಾಯತು ಅಧ್ಯಕ್ಷರಿಗೊಂದು ಮನವಿಯನ್ನು ನೀಡಿ ಕೂಡಲೆ ಖಾಯಂ ವೈದ್ಯರನ್ನು ನೇಮಿಸುವಂತೆ ಒತ್ತಾಯಿಸಲಾಯಿತು.

ಮತ ಪ್ರದರ್ಶನಕಾರರನ್ನುದ್ದೇಶಿಸಿ ತಾಲೂಕು ಪಂಚಾಯತು ಸದಸ್ಯರಾದ ಶ್ರೀ ಉಮಾನಾಥ ನಾಯಕ್ ರವರು ಸಮಸ್ಯೆಯನ್ನು ಪರಿಹರಿಸಲು ಪ್ರಯತ್ನಿಸುವುದಾಗಿ ಭರವಸೆ ನೀಡಿದರು ವಿದ್ಯಾಧರ ಅಡಪ ಶುಭ ಕೋರಿ ಮಾತನಾಡಿದರು.

ಪ್ರತಿಭಟನೆಗಾರರನ್ನುದ್ದೇಶಿಸಿ (ಡಿ.ವೈ.ಎಫ್.ಐ) ದ.ಕ ಜಿಲ್ಲಾ ಸಮಿತಿ ಉಪಾಧ್ಯಕ್ಷರಾದ ವಸಂತ ಆಚಾರಿಯವರು ಮಾತನಾಡುತ್ತಾ ಜನಸಾಮಾನ್ಯರ ಸಮಸ್ಯೆಗಳಿಗೆ ಸ್ಥಳೀಯ ಸಂಸ್ಥೆಗಳು ಗಮನ ಹರಿಸಬೇಕಾದರೆ ಜನರು ಪ್ರತಿಭಟನೆಮಾಡುವುದು ಅನಿವಾರ್ಯವಾಗಿದೆ. ಸಮಸ್ಯೆ ಪರಿಹಾರವಾಗದಿದ್ದಲ್ಲಿ ತೀವ್ರ ಹೋರಾಟ ನಡೆಸಲಾಗುವುದೆಂದರು.

ಪ್ರತಿಭಟನೆಯ ನೇತೃತ್ವವನ್ನು ಡಿ.ವೈ.ಎಫ್.ಐ ನ ಎಸ್.ಎ.ಹಸನಬ್ಬ ಬಾಲಕೃಷ್ಣ ಪಂಚಾಯತು ಸದಸ್ಯರಾದ ಬೇಬಿನಾಯ್ಕ್ ವಾಸುದೇವವ ಆಚಾರಿ, ಸದಾಶಿವದಾಸ್ ಸುಂದರ ಪೂಜಾರಿ ಕುಸುಮಾವತಿ, ರಫೀಕ್, ಪುಂದರಿದಾಸ್, ಸರೋಜಿನಿಯವರು ವಹಿಸಿದ್ದರು.

ಎಸ್.ಎ. ಹಸನಬ್ಬರವರು ಸ್ವಾಗತಿಸಿ, ಬಾಲಕೃಷ್ಣ ವಂದಿಸಿದರು.

ಸ್ವಾತಂತ್ರ ಹೋರಾಟಗಾರ -ರೈತ ಮುಖಂಡ ಕಾಂ|| ಹೆಚ್.ಸಿ.ಚೆನ್ನಪ್ಪ ನಿಧನ:

ತುಮಕೂರು ಜಿಲ್ಲೆಯ ಹಿರಿಯ ಸ್ವಾತಂತ್ರ ಹೋರಾಟಗಾರರೂ, ಎ.ಐ.ಕೆ.ಎಸ್. ಮುಖಂಡರೂ, ಸಿಪಿಐ(ಎಂ) ನ ಜಿಲ್ಲಾ ಮುಖಂಡರೂ ಆದ ಕಾಂ|| ಹೆಚ್.ಸಿ. ಚೆನ್ನಪ್ಪನವರು 1998ರ ಏಪ್ರಿಲ್ 12 ರಂದು ಹೃದಯಾಘಾತದಿಂದಾಗಿ ನಿಧನರಾದರು. ಗುಬ್ಬಿ ತಾಲ್ಲೂಕಿನ ಹಾಗಲವಾಡಿ ಗ್ರಾಮ ಪಂಚಾಯತಿಯ ಅಧ್ಯಕ್ಷರೂ ಆಗಿದ್ದು ಈ ಹಿಂದೆ ಪಕ್ಷದ ಜಿಲ್ಲಾ ಕಾರ್ಯದರ್ಶಿಯಾಗಿದ್ದ ಅವರು ಹಾಲಿ ಪ್ರಾದೇಶಿಕ ಸಮಿತಿ ಸದಸ್ಯರಾಗಿದ್ದರು.

ಇಡೀ ತುಮಕೂರು ಜಿಲ್ಲೆಯಲ್ಲಿ ಸಿಪಿಐ(ಎಂ) ಎಂದರೆ ಕಾಂ|| ಚೆನ್ನಪ್ಪ ಎಂದೇ ಗುರುತಿಸಲ್ಪಟ್ಟಿದ್ದ, ಚೆನ್ನಪ್ಪನವರು ಕಳೆದ 50 ವರ್ಷಗಳಿಂದ ಪಕ್ಷಕ್ಕಾಗಿ ಸತತವಾಗಿ ದುಡಿದವರಾಗಿದ್ದಾರೆ.

ತಮ್ಮ ಜೀವನದ ಕೊನೆವರೆಗೆ ಪಕ್ಷದ ಶಿಸ್ತಿನ ಸಿಪಾಯಿಯಾಗಿದ್ದರು. ತುಮಕೂರು ಜಿಲ್ಲೆಯಲ್ಲಿ ಅನೇಕ ರೈತರ ಹೋರಾಟಗಳನ್ನು ನಡೆಸಿದ ಚೆನ್ನಪ್ಪನವರು, ಹೇಮಾವತಿ ನೀರನ್ನು ತುಮಕೂರಿಗೆ ತರಬೇಕೆಂದು ಒತ್ತಾಯ ಪಡಿಸಿದವರಲ್ಲಿ ಮೊದಲಿಗರು. ಜಿಲ್ಲೆಯ ಬೀಡಿ ಕಾರ್ಮಿಕರ ಸಂಘ, ಜನರಲ್ ಮೋಟಾರು ಚಾಲಕರ ಸಂಘ ಹೋಟಲ್ ಕಾರ್ಮಿಕರ ಸಂಘ ಹಾಗೂ ಇತರೆ ಕಾರ್ಮಿಕ ಸಂಘಟನೆಯ ಅನೇಕ ಹೋರಾಟಗಳಲ್ಲಿ ಸಕ್ರಿಯವಾಗಿ ಭಾಗವಹಿಸಿ ಅನೇಕ ಬಾರಿ ಬಂಧನಕ್ಕೊಳಗಾಗಿ ದ್ದರಲ್ಲದೆ, ಜೈಲುವಾಸವನ್ನು ಅನುಭವಿಸಿ 1994 ರಲ್ಲಿ ನಡೆದ ಪಕ್ಷದ ಕಾಯ್ದೆ ಭಂಗ ಚಳುವಳಿ ಯಲ್ಲಿ ಭಾಗವಹಿಸಿದ್ದವರು ಕಾಂ|| ಚೆನ್ನಪ್ಪನವರು. ಅವರು ಹೆಂಡತಿ, ಮಗ ಹಾಗೂ ಇಬ್ಬರು ಹೆಣ್ಣುಮಕ್ಕಳನ್ನು ಹಾಗೂ ಅಪಾರ ಅಭಿಮಾನಿಗಳನ್ನು ಅಗಲಿದ್ದಾರೆ.

ಶ್ರದ್ಧಾಂಜಲಿ: ಏಪ್ರಿಲ್ 13 ರಂದು ತುಮಕೂರಿನ ಪುರಸಭೆ ಆವರಣದಲ್ಲಿ ಸಿ.ಪಿ.ಐ. (ಎಂ) ಜಿಲ್ಲಾ ಸಮಿತಿಯು ಶ್ರದ್ಧಾಂಜಲಿ ಸಭೆಯನ್ನು ಸಂಘಟಿಸಿತ್ತು. ಜಿಲ್ಲೆಯ ಪ್ರಗತಿಪರ ಚಿಂತಕರು, ಸಾಹಿತಿಗಳು, ಉಪನ್ಯಾಸಕರು, ಪಕ್ಷದ ಸದಸ್ಯರು ಸಿ.ಐ.ಟಿ.ಯು, ಎಸ್‌ಎಫ್‌ಐ., ಡಿ.ವೈ.ಎಫ್.ಐ. ಸಂಗಾತಿಗಳು ಸಭೆಯಲ್ಲಿ ಭಾಗವಹಿಸಿ ಅಗಲಿದ ಮುಖಂಡರಿಗೆ ಶ್ರದ್ಧಾಂಜಲಿಸಲ್ಲಿಸಿದರು.

ವಿದ್ಯುಚ್ಛಕ್ತಿ ಮಂಡಳಿ ಮುಂದೆ ರೈತರ ಪ್ರತಿಭಟನೆ

ದೊಡ್ಡಬಳ್ಳಾಪುರ: ತಾಲೂಕಿನ ವಿವಿಧ ಗ್ರಾಮಗಳಿಂದ ಏಪ್ರಿಲ್ 6 ರಂದು 500 ಕ್ಕೂ ಹೆಚ್ಚು ರೈತರು ನಗರದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಿದಲ್ಲದೆ, ಕೆ.ಇ.ಬಿ.ಯ ಮುಖ್ಯ ಕಛೇರಿಯ ಮುಂದೆ ತೀವ್ರ ಪ್ರತಿಭಟನೆ ನಡೆಸಿದರು. ಗ್ರಾಮಾಂತರ ಪ್ರದೇಶಗಳಿಗೆ ವೋಲ್ಟೇಜ್‌ನೊಂದಿಗೆ ಕನಿಷ್ಟ 12 ಗಂಟೆಗಳ ಕಾಲ ವಿದ್ಯುತ್ ಪೂರೈಕೆ ಮಾಡಬೇಕು ಹೊಸ ಸಂಪರ್ಕಗಳನ್ನು ನೀಡುವಾಗ ಬರುವ ಖರ್ಚನ್ನು ಮಂಡಳಿಯೇ ಹೊರಬೇಕು ವಿದ್ಯುತ್ ಸರಬರಾಜಿನಲ್ಲಿರುವ ತೊಂದರೆಗಳನ್ನು ನಿವಾರಿಸಬೇಕೆಂದು ಘೋಷಣೆಗಳನ್ನು ಕೂಗಿದರು.

ರೈತರು ಕೇಳಿದ ಪ್ರಶ್ನೆಗಳಿಗೆ ಉತ್ತರಿಸುತ್ತಾ ಮಾತನಾಡಿದ ಕೆ.ಇ.ಬಿ.ಯ ಮುಖ್ಯ ಕಾರ್ಯನಿರ್ವಾಹಕ ಅಭಿಯಂತರ ಹನುಮಂತರಾಜು ವೋಲ್ಟೇಜ್ ಉತ್ತಮ ಪಡಿಸಲು ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳುವ ಭರವಸೆ ನೀಡಿದಲ್ಲದೆ ಭಾನುವಾರ ಮತ್ತು ರಜಾ ದಿನಗಳಂದು ದಿನ ಪೂರ್ತಿ ಕೃಷಿ ಪಂಪೂಗಳಿಗೆ ವಿದ್ಯುತ್ ನೀಡುವ ವಿಚಾರವಾಗಿ ಮೇಲಿನ ಅಧಿಕಾರಿಗಳೊಂದಿಗೆ ಮಾತನಾಡುವುದಾಗಿ ತಿಳಿಸಿದರು. ವಿದ್ಯುತ್ ಸರಬರಾಜಿನಲ್ಲಿರುವ ತೊಂದರೆಗಳನ್ನು ನಿವಾರಿಸಲು ಅಗತ್ಯವಿರುವ ಕಡೆ ದಪ್ಪ ತಂತಿ ಹಾಕಲು ಮತ್ತು ಉತ್ತಮ ಟಿ.ಸಿ ಗಳನ್ನು ಅಳವಡಿಸಲು ಕೂಡಲೇ ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು.

ನೆರೆದಿದ್ದ ರೈತರನ್ನು ಉದ್ದೇಶಿಸಿ. ಹಿರಿಯ ಸ್ವಾತಂತ್ರ್ಯ ಹೋರಾಟಗಾರರಾದ ಹೆಚ್. ಮುಗುವಾಳಪ್ಪನವರು ರೈತರು ತಮ್ಮ ಸಮಸ್ಯೆಗಳ ಪರಿಹಾರಕ್ಕೆ ಇದಕ್ಕಿಂತಲೂ ತೀವ್ರವಾದ ಹೋರಾಟ ಮಾಡಬೇಕು ಎಂದು ತಿಳಿಸಿದರು. ಕರ್ನಾಟಕ ಪ್ರಾಂತ ರೈತ ಸಂಘದ ಅಡಿಯಲ್ಲಿ ಸಂಘಟಿಸಲಾಗಿರುವ ವಿದ್ಯುತ್ ಪಂಪ್‌ಸೆಟ್ ಬಳಕೆದಾರರ ರೈತ ಸಂಘ ಈ ಹೋರಾಟವನ್ನು ಹಮ್ಮಿಕೊಂಡಿತ್ತು. ಕರ್ನಾಟಕ ಪ್ರಾಂತ ರೈತ ಸಂಘದ ತಾಲೂಕು ಕಾರ್ಯದರ್ಶಿ ಆರ್. ಚಂದ್ರತೇಜಸ್ವಿ, ಉಪಾಧ್ಯಕ್ಷ ರೇಣುಕಾರಾಧ್ಯ ಹೋರಾಟದ ನೇತೃತ್ವ ವಹಿಸಿದ್ದರು.

ಅಂಗನವಾಡಿ ನೌಕರರ ನೂತನ ಸಮಿತಿ

ಉತ್ತರ ಕನ್ನಡ: ಅಂಕೋಲ ತಾಲೂಕಿನ ಅಂಗನವಾಡಿ ನೌಕರರ ಸಭೆಯು ಏಪ್ರಿಲ್ 19 ರಂದು ನಡೆಯಿತು. ಮುಖ್ಯ ಅತಿಥಿಗಳಾದ ರಾಜ್ಯ ಅಂಗನವಾಡಿ ನೌಕರರ ಸಂಘದ ಕಾರ್ಯದರ್ಶಿ ಎಸ್. ವರಲಕ್ಷ್ಮಿ ಮಾತನಾಡಿ ಬೆಸಿಗೆ ರಜೆ, ಸೂಪರ್ ವೈಸರ್ ಸ್ಥಾನಕ್ಕೆ ಶೇ 45 ಮೀಸಲಾತಿ, ಕನಿಷ್ಠ ವೇತನ ಮುಂತಾದ ಬೇಡಿಕೆಗಳ ಈಡೇರಿಕೆಗಾಗಿ ಕಾರ್ಯಕರ್ತೆಯರು ಹೋರಾಟ ನಡೆಸಬೇಕಾಗಿದೆ ಎಂದರು. ಅತಿಥಿಗಳಾಗಿ ಆನಂದ, ಡಿ.ವೈ.ಎಫ್.ಐ.ನ ಶಾಂತರಾಂನಾಯಕ್, ಎಲ್‌ಐಸಿಯ ಆರ್. ನಾಯ್ಕ್ ಮುಂತಾದವರು ಭಾಗವಹಿಸಿದ್ದರು. ಸಭೆಯು ನೂತನ ತಾಲೂಕು ಸಮಿತಿಯನ್ನು ಚುನಾಯಿಸಿತು.

ನೂತನ ಸಮಿತಿ:

ಅಧ್ಯಕ್ಷರು-ಮಾಲಿನಿ ಕಾಮತ್, ಉಪಾಧ್ಯಕ್ಷೆ ಮಹಾದೇವಿ ನಾಯಕ್, ಕಾರ್ಯದರ್ಶಿ ಲಲಿತಾ ಎನ್ ಶೇಡಗೇರಿ, ಸಹಕಾರ್ಯದರ್ಶಿ ನಾಗಮ್ಮ ಬಿ.ನಾಯ್ಕ್, ಖಜಾಂಚಿ-ರಾಧಾ ಹೆಚ್. ನಾಯಕ್ ಹಾಗೂ ಹತ್ತು ಸದಸ್ಯರುಳ್ಳ ಸಮಿತಿ ಆಯ್ಕೆ ಗೊಂಡಿತು.

ದೇಶದ ಐಕ್ಯತೆ, ಸಮಗ್ರತೆ, ಸಮೃದ್ಧಿಯನ್ನು ಕಾಪಾಡಿಕೊಳ್ಳಲು ಪ್ರಚಾರಾಂದೋಲನ

ಸಿಪಿಐ(ಎಂ) ಕೇಂದ್ರ ಸಮಿತಿ ಆಹ್ವಾನ

ಏಪ್ರಿಲ್ ೧೭ರಿಂದ ೧೯ರವರೆಗೆ ನವದೆಹಲಿಯಲ್ಲಿ ಸಭೆ ಸೇರಿದ ಸಿಪಿಐ(ಎಂ) ಕೇಂದ್ರ ಸಮಿತಿ ೧೨ನೇ ಲೋಕಸಭಾ ಚುನಾವಣೆಗಳು ಮತ್ತು ನಂತರದ ಬೆಳವಣಿಗೆಗಳ ಅವಲೋಕನ ನಡೆಸಿ ಬಿಜೆಪಿಯ ಇಬ್ಬಂದಿತನವನ್ನು ಬಯಲಿಗೆಳೆಯಲು ಮೂರು ತಿಂಗಳ ಚಳುವಳಿ ಮತ್ತು ಜನಸಂಪರ್ಕ ಕಾರ್ಯಕ್ರಮವನ್ನು ನಡೆಸಲು ನಿರ್ಧರಿಸಿದ ಬಗ್ಗೆ ಕಳೆದ ಸಂಚಿಕೆಯಲ್ಲಿ ಓದಿರುವಿರಿ. ಸಭೆಯ ನಂತರ ಹೊರಡಿಸಿದ ಪತ್ರಿಕಾ ಹೇಳಿಕೆಯ ಪೂರ್ಣ ಪಾಠವನ್ನು ಇಲ್ಲಿ ಕೊಡಲಾಗಿದೆ.

ಚುನಾವಣಾ ವಿಮರ್ಶೆ

1998ರ ಮಧ್ಯಂತರ ಚುನಾವಣೆಗಳಲ್ಲಿ ಬಿಜೆಪಿ ಮತ್ತು ಕೋಮುವಾದಿ ಮೈತ್ರಿಕೂಟ ತನ್ನ ಮತಗಳಿಕೆಯನ್ನು ಶೇ.20.29 ರಿಂದ ಶೇ.25.47ಕ್ಕೆ ಏರಿಸಿಕೊಂಡಿವೆಯೆಂಬುದನ್ನು ಸಿಪಿಐ(ಎಂ)ಕೇಂದ್ರಸಮಿತಿ ಗಮನಿಸಿತು. ಬಿಜೆಪಿ ಅಧಿಕಾರ ಕೈವಶಮಾಡಿಕೊಳ್ಳಲು ಈ ಚುನಾವಣೆಗಳಲ್ಲಿ ಮಾಡದ ಕೆಲಸಗಳಿಲ್ಲ,ತನ್ನ ಬತ್ತಳಿಕೆಯಲ್ಲಿನ ಎಲ್ಲಾ ಬಾಣಗಳನ್ನು ಅದು ಪ್ರಯೋಗಿಸಿತು. ಅತ್ಯಂತ ಭ್ರಷ್ಟ ಮತ್ತು ಕ್ರಿಮಿನಲ್ ವ್ಯಕ್ತಿಗಳ ಬೆಂಬಲ ಪಡೆಯಲು ರಾಜಕೀಯ ಅನೈತಿಕತೆಯ ಪ್ರಪಾತಕ್ಕಿಳಿಯಿತು. ಆದರೂ ಅದರ ಸ್ಥಾನಗಳಲ್ಲಾದ ಹೆಚ್ಚಳ ಕೇವಲ 18. ತನ್ನ ಮಿತ್ರರೊಡಗೂಡಿ ಅದು ಬಹುಮತದ ಬಹಳ ಸಮೀಪ ಬಂತು, ಆದರೆ ಬಹುಮತ ಪಡೆಯಲಿಲ್ಲ. ತೆಲುಗು ದೇಶಂ ಪಕ್ಷ ಜಾತ್ಯಾತೀತತೆಗೆ ತನ್ನ ಬದ್ಧತೆಗೆ ಹಾಗು ಸಂಯುಕ್ತ ರಂಗಕ್ಕೆ ವಿಶ್ವಾಸಘಾತ ಮಾಡಿದ ನಿಲುವು ತಳೆದುದರಿಂದಾಗಿಯಷ್ಟೇ ಬಿಜೆಪಿ ನೇತೃತ್ವದ ಸರಕಾರ ಅಧಿಕಾರ ವಹಿಸಿಕೊಳ್ಳಲು ಸಾಧ್ಯವಾಯಿತು.

ಕಾಂಗ್ರೆಸ್ ಪಕ್ಷದ ಮತಗಳಿಕೆಯಲ್ಲಿ ಇಳಿತ ಮುಂದುವರೆಯಿತು. ಅದು ಶೇ.28.8ರಿಂದ ಶೇ. 25.88 ಕ್ಕಿಳಿಯಿತು. ಶ್ರೀಮತಿ ಸೋನಿಯಾ ಗಾಂಧಿಯವರ ತೀವ್ರ ಪ್ರಚಾರದ ಹೊರತಾಗಿಯೂ ಆ ಪಕ್ಷಕ್ಕೆ 11ನೇ ಲೋಕ ಸಭೆಯಲ್ಲಿನ ತನ್ನ ಸ್ಥಾನಗಳನ್ನು ಹೇಗೋ ಉಳಿಸಿಕೊಳ್ಳಲು ಸಾಧ್ಯವಾಯಿತಷ್ಟೆ.

ಸಂಯುಕ್ತ ರಂಗಕ್ಕೆ ಈ ಚುನಾವಣೆಗಳಲ್ಲಿ ತೀವ್ರ ಹಿನ್ನಡೆಯುಂಟಾಯಿತು. ಸಿಪಿಐ(ಎಂ) ತನ್ನ 32 ಸದಸ್ಯ ಸ್ಥಾನಗಳನ್ನು ಉಳಿಸಿ ಕೊಂಡರೆ, ಸಂಯುಕ್ತ ರಂಗದ ಪ್ರಧಾನ ಘಟಕವಾದ ಜನತಾದಳ ಭಾರೀ ಪರಾಭವ ಉಂಡಿದೆ. ಸಂಯುಕ್ತ ರಂಗದ ಎಲ್ಲಾ ಘಟಕಗಳು ತಂತಮ್ಮ ಸಾಧನೆಗಳ ಸರಿಐದ ಒಂದು ಪರಾಮರ್ಶೆ ಮಾಡುವುದಗತ್ಯವಿದೆ.

ಸಮಾನ ಕನಿಷ್ಟ ಕಾರ್ಯಕ್ರಮದಲ್ಲಿದ್ದ ಜನಪರ ಧೋರಣೆಗಳನ್ನು ಪ್ರಾಮಾಣಿಕತೆಯಿಂದ ಜ್ಯಾರಿಮಾಡದಿದ್ದರೆ ಅದಕ್ಕೆ ಜನಗಳ ಬೆಂಬಲ ಪಡೆಯಲು ಸಾಧ್ಯವಾಗುವುದಿಲ್ಲ ಎಂದು ಸಿಪಿಐ(ಎಂ) ಮೊದಲಿಂದಲೂ ಸಂಯುಕ್ತರಂಗ ಸರಕಾರವನ್ನು ಎಚ್ಚರಿಸುತ್ತಲೇ ಇತ್ತು. ವಿದೇಶಾಂಗ ನೀತಿ, ಕೇಂದ್ರ-ರಾಜ್ಯ ಸಂಬಂಧಗಳ ವಲಯದಲ್ಲಿ ಮತ್ತು ಜಾತ್ಯಾತೀತತೆಯನ್ನು ಬಲಪಡಿಸುವಲ್ಲಿ ಮಹತ್ವದ ಮುನ್ನಡೆಯಾದರೂ, ದುರದೃಷ್ಟವಶಾತ್, ಆರ್ಥಿಕ ವಲಯದಲ್ಲಿನ ಹೆಚ್ಚಿನ ವಚನಗಳನ್ನು ಪಾಲಿಸಲಿಲ್ಲ. ಬಡತನದ ರೇಖೆಯ ಕೆಳಗಿರುವ ಜನಗಳಿಗೆ ಅರ್ಧ ಬೆಲೆಗಳಲ್ಲಿ ಆಹಾರಧಾನ್ಯಗಳನ್ನು ಒದಗಿಸುವ ನಿರ್ಣಯವನ್ನು ಕೈಗೊಂಡರೂ ದೇಶದ ಹಲವು ಭಾಗಗಳಲ್ಲಿ ಅದು ಬೆಳಕು ಕಾಣಲಿಲ್ಲ.ಆರ್ಥಿಕ ನೀತಿಗಳಿಂದಾಗಿ ಜನಗಳಲ್ಲಿ ಹೆಚ್ಚುತ್ತಿದ್ದ ಅಸಂತೃಪ್ತಿ ಸಂಯುಕ್ತ ರಂಗದ ಘಟಕಗಳ ಚುನಾವಣಾ ಅದೃಷ್ಟವನ್ನು ನಿರ್ಧರಿಸುವ ಒಂದು ಅಂಶವಾಯಿತು. ಎಡಪಕ್ಷಗಳು ಮತ್ತು ಸಮಾಜವಾದಿ ಪಕ್ಷಕ್ಕೆ ಮಾತ್ರವೇ ಜನಗಳಿಂದ ಸ್ವಲ್ಪಮಟ್ಟಿನ ಜನಬೆಂಬಲ ಪಡೆಯಲು ಸಾಧ್ಯವಾಯಿತು.

ಚುನಾವಣಾ ಸಮಯದಲ್ಲೂ ಸಂಯುಕ್ತ ರಂಗ ತಾನೊಂದು ವಿಭಿನ್ನ ಧೋರಣೆ ಮತ್ತು ಕಾರ್ಯಕ್ರಮ ಹೊಂದಿರುವ ಒಂದು ಪರ್ಯಾಯ ಎಂಬುದನ್ನು ಪರಿಣಾಮಕಾರಿಯಾಗಿ ಬಿಂಬಿಸುವಲ್ಲಿ ವಿಫಲಗೊಂಡಿತು. ಘಟಕ ಪಕ್ಷಗಳಲ್ಲಿ ಸರಿಯಾದ ಸೀಟು ಹಂಚಿಕೆಯ ಅಭಾವ -ನಿರ್ದಿಷ್ಟವಾಗಿ ಹಿಂದಿ-ಭಾಷಿಕ ರಾಜ್ಯಗಳಲ್ಲಿ -ಇದರಿಂದಾಗಿ ಮತಗಳು ವಿಭಜನೆಗೊಂಡು ಅದರ ನೇರ ಪ್ರಯೋಜನ ಕೋಮುವಾದಿಗಳಿಗೆ ದೊರೆಯಿತು.

ಇಂತಹ ಅಂಶಗಳು ಚುನಾವಣಾ ಫಲಿತಾಂಶವನ್ನು ನಿರ್ಧರಿಸಿ ಸಂಯುಕ್ತರಂಗದ ಸ್ಥಾನಗಳ ಸಂಖ್ಯೆ ಅರ್ಧಕ್ಕೆ 99ಕ್ಕೆ ಇಳಿಯಿತು.

ಇಂತಹ ಸನ್ನಿವೇಶಗಳಲ್ಲಿ ಎಡ, ಪ್ರಜಾಸತ್ತಾತ್ಮಕ ಹಾಗೂ ಧರ್ಮನಿರಪೇಕ್ಷ ಶಕ್ತಿಗಳ ಐಕ್ಯತೆಯನ್ನು ಬಲಪಡಿಸಬೇಕು ಎಂದು ಕೇಂದ್ರ ಸಮಿತಿ ನಿರ್ಧರಿಸಿತು. ಸಿಪಿಐ(ಎಂ) ಸಂಯುಕ್ತರಂಗದ ತನ್ನ ಮಿತ್ರಪಕ್ಷಗಳೊಂದಿಗೆ ಕೋಮುವಾದಿ ಶಕ್ತಿಗಳು ಹಾಗೂ ಕಾಂಗ್ರೆಸ್ಸಿಗೆ ಪರ್ಯಾಯವನ್ನು ಕಟ್ಟಿ ಬೆಳೆಸಲು ಸರ್ವ ಪ್ರಯತ್ನ ಮಾಡುತ್ತದೆ.

ಕೇಂದ್ರಸಮಿತಿ ಪ್ರಸಕ್ತ ಸರಕಾರ ಅನುಸರಿಸುತ್ತಿರುವ ಜನ-ವಿರೋಧಿ ಧೋರಣೆಗಳ ವಿರುದ್ಧ ಜನಗಳನ್ನು ಅಣಿನೆರೆಸುವ ಮೂಲಕ ಮತ್ತು ಪ್ರತಿಭಟನಾ ಕಾರ್ಯಾಚರಣೆಗಳ ಮೂಲಕ ಪಕ್ಷದ ಸ್ವತಂತ್ರ ಚಟುವಟಿಕೆಗಳನ್ನು ಬಲಪಡಿಸಲು ನಿರ್ಧರಿಸಿತು.

ಬಿಜೆಪಿ ಸರಕಾರ ಮಾಡುತ್ತಿರುವುದೇನು?

ತೆಲುಗು ದೇಶಂ ಪಾರ್ಟಿಯ ಬೆಂಬಲ ಗಿಟ್ಟಿಸಿ ಮತ್ತು ಟಿಡಿಪಿ ಅಭ್ಯರ್ಥಿಯನ್ನು ಲೋಕಸಭಾಧ್ಯಕ್ಷರನ್ನಾಗಿ ಮಾಡಿ ವಿಶ್ವಾಸ ಮತವನ್ನು ಅತ್ಯಂತ ಕಡಿಮೆ ಬಹುಮತದಿಂದ ಗೆದ್ದ ಬಿಜೆಪಿ ನೇತೃತ್ವದ ಸರಕಾರ ಮೊದಲ ಕೆಲವು ವಾರಗಳಲ್ಲೇ ಸ್ಪಷ್ಟವಾಗಿ ತನ್ನ ನಿಜಬಣ್ಣ ತೋರಿದೆ. ಬಿಜೆಪಿ ಜನಗಳನ್ನು ಮತ್ತು ದೇಶವನ್ನು 'ರಾಷ್ಟ್ರೀಯ ಅಜೆಂಡಾ'ದ ಮೂಲಕ ತಪ್ಪುದಾರಿಗೆಳೆಯುತ್ತಾ ತನ್ನ 'ಬಚ್ಚಿಟ್ಟ ಅಜೆಂಡಾ'ವನ್ನು ಅನುಸರಿಸುತ್ತಿದೆ.

ಆರ್ಥಿಕನೀತಿಗಳು : ಆರ್ಥಿಕ ರಂಗದಲ್ಲಿ ಬಿಜೆಪಿ ಸರಕಾರ ಕೆಲವು ಮಹತ್ವಪೂರ್ಣ ನಿರ್ಣಯಗಳನ್ನು ತೆಗೆದುಕೊಂಡಿದೆ. ಇವು ಅದರ 'ಸ್ವದೇಶಿ' ಘೋಷಣೆ ಕೇವಲ ಜನಗಳನ್ನು ಮರುಳು ಮಾಡಿ ಚುನಾವಣೆಗಳಲ್ಲಿ ಅವರ ಮತ ಗಿಟ್ಟಿಸಲು ಮಾತ್ರ ಎಂಬುದನ್ನು ಸ್ಪಷ್ಟವಾಗಿ ಹೊರಗೆಡಹಿವೆ.ಹೊಸ ಆಮದು-ರಫ್ತು ನೀತಿ ದೇಶೀ ಉದ್ದಿಮೆಗೆ ಬಹಳ ಹಾನಿಕಾರಕವಾಗಲಿದೆ. ಹಣಕಾಸು ಮಂತ್ರಿಗಳು ತನ್ನ ಮೊದಲ ಅಂತರ್ರಾಷ್ಟ್ರೀಯ ಯಾತ್ರೆಗೆ ಅಮೇರಿಕಾವನ್ನೇ ಆರಿಸಿಕೊಂಡು ಬಿಜೆಪಿ ಉದಾರೀಕರಣದ ಪ್ರಕ್ರಿಯೆಯನ್ನು ಇನ್ನಷ್ಟು ತ್ವರಿತಗೊಳಿಸುವುದಾಗಿ ನಿಸದಸಂಧಿಗ್ಧವಾಗಿ ಸಾರಿದ್ದಾರೆ. ಸರಕಾರ ವಿಶ್ವ ವ್ಯಾಪಾರ ಸಂಸ್ಥೆಯ ಬಯಕೆಯಂತೆ ಪೇಟೆಂಟ್ ಕಾನೂನನ್ನು ತಿದ್ದುಪಡಿ ಮಾಡುವ ಪ್ರಸ್ತಾಪವನ್ನೂ ಇಟ್ಟದೆ. ತಮಾಷೆಯ ಸಂಗತಿಯೆಂದರೆ,ಈ ಹಿಂದೆ ಕಾಂಗ್ರೆಸ್ ಸರಕಾರ ಇಂತಹ ತಿದ್ದುಪಡಿಗಳನ್ನು ತಂದಾಗ ರಾಜ್ಯಸಭೆಯಲ್ಲಿ ಅವುಗಳ ವಿರುದ್ಧ ಎಡಪಕ್ಷಗಳಿಗೆ ಇದೇ ಬಿಜೆಪಿ ಬೆಂಬಲ ನೀಡಿತ್ತು. ಇನ್ನಷ್ಟು ಸಾರ್ವಜನಿಕ ವಲಯದ ಘಟಕಗಳ ಖಾಸಗೀಕರಣ ಮತ್ತು ವಿಮಾವಲಯವನ್ನು ತೆರೆಯುವ ಪ್ರಸ್ತಾಪಗಳು ನಮ್ಮ ಸ್ವಾವಲಂಬನೆಯ ಮೇಲೊಂದು ಗಂಭೀರ ಧಾಳಿ.

ಈ ಕ್ರಮಗಳು ಮತ್ತು ಇಂತಹ ಇನ್ನೂ ಹಲವಾರು ಕ್ರಮಗಳ ವಿರುದ್ಧ ಸಾರ್ವಜನಿಕರನ್ನು ಅಣಿನೆರೆಸಿ ಅವನ್ನು ಸಕ್ರಿಯವಾಗಿ ವಿರೋಧಿಸಬೇಕೆಂದು ಸಿಪಿಐ(ಎಂ) ಕೇಂದ್ರ ಸಮಿತಿ ತನ್ನ ಎಲ್ಲಾ ಘಟಕಗಳಿಗೆ ಕರೆ ನೀಡಿದೆ.

ಭ್ರಷ್ಟಾಚಾರಕ್ಕೆ ರಕ್ಷಣೆ : ಅಧಿಕಾರ ವಹಿಸಿಕೊಳ್ಳಲು ಬಿಜೆಪಿ ಮಾಡಿಕೊಂಡ ಮೋಸದ ರಾಜಿಗಳು ಈಗ ಅದರ ಮಿತ್ರಪಕ್ಷಗಳಿಂದಲೇ ಬಯಲಿಗೆ ಬರುತ್ತಿವೆ.ರಾಜಕೀಯ ನೈತಿಕತೆಯ ಎಲ್ಲಾ ನೀತಿ ನಿಯಮಗಳನ್ನು ಕೈಬಿಟ್ಟ ಬಿಜೆಪಿ ತನ್ನ ಸಂಪುಟದಲ್ಲಿ ಭ್ರಷ್ಟಾಚಾರದ ಆಪಾದನಾ ಪಟ್ಟಿಗೊಳಗಾದ ವ್ಯಕ್ತಿಗಳನ್ನು ಸೇರಿಸಿ ಕೊಂಡಿತ್ತು. ಇದರಿಂದಾಗಿ ಎಐಎಡಿಎಂಕೆ ಮತ್ತು ಬಿಜೆಪಿ ನಡುವೆ ಉಂಟಾಗಿರುವ ಘರ್ಷಣೆ ಇಂತಹ ಒಂದು ಮೈತ್ರಿಕೂಟ ಎಷ್ಟು ಸುಸಂಬದ್ಧವಾಗಿರಲು ಸಾಧ್ಯ ಎಂಬುದರ ಬಗ್ಗೆ ಬಹಳಷ್ಟು ಹೇಳುತ್ತಿದೆ.

ಆಳುವ ಮೈತ್ರಿಕೂಟದ ವಿಭಿನ್ನ ಭಾಗೀದಾರರ ನಡುವೆ ಪ್ರತಿದಿನ ಇಂತಹ ಜಗಳಾಟ, ಕಿತ್ತಾಟ, ಆರೋಪ-ಪ್ರತ್ಯಾರೋಪಗಳು ವಾಜಪೇಯಿ ಸರಕಾರದ ವಿಶ್ವಾಸಾರ್ಹತೆಯನ್ನು ಹ್ರಾಸಗೊಳಿಸಿವೆ, ಅದನ್ನು ತಮಾಷೆಯ ವಸ್ತುವಾಗಿಸಿಬಿಟ್ಟಿವೆ. ಅತ್ಯಂತ ದುಷ್ಟ ಹಾಗೂ ಭ್ರಷ್ಟ ವ್ಯಕ್ತಿಗಳಿಗೆ ರಕ್ಷಣೆ,ಪೋಷಣೆ ನೀಡುತ್ತಿರುವ ವಿಧಾನ ತಾನು ಭ್ರಷ್ಟಾಚಾರದ ವಿರುದ್ಧ ಹೋರಾಡುತ್ತೇನೆಂದು ಬಿಜೆಪಿ ತನ್ನ ಚುನಾವಣಾ ಪ್ರಣಾಳಿಕೆಯಲ್ಲಿ ಮತ್ತು ರಾಷ್ಟ್ರೀಯ ಅಜೆಂಡಾದಲ್ಲಿ ಸಾರಿದ್ದ ಮಾತುಗಳನ್ನು ಸಂಪೂರ್ಣ ಅಪಹಾಸ್ಯದ ಮಟ್ಟಕ್ಕಿಳಿಸಿದೆ.

ಸರ್ವಾಧಿಕಾರದ ಎಳೆ: ಕೆಲವು ರಾಜ್ಯಪಾಲರು ಹಾಗೂ ಉಪರಾಜ್ಯಪಾಲರುಗಳ ಕಾರ್ಯಾವಧಿ ಮುಗಿಯುವ ಮೊದಲೇ ಅವರ ರಾಜೀನಾಮೆ ಪಡೆದ ರೀತಿ ಬಿಜೆಪಿಯಲ್ಲಿನ ಸರ್ವಾಧಕಾರದ ಎಳೆಯನ್ನು ಹೊರಗೆಡಹಿದೆ. ರಾಜ್ಯಪಾಲರ ಪ್ರಶ್ನೆಯಲ್ಲಿ ರಾಜ್ಯಸರಕಾರಗಳೊಂದಿಗೆ ಸಮಾಲೋಚಿಸಲಾಗುವುದು, ರಾಜ್ಯಪಾಲರ ಹುದ್ದೆಯ ರಾಜಕಿಯ ದುರುಪಯೋಗ ಮಾಡುವುದಿಲ್ಲ ಎಂದು ರಾಷ್ಟ್ರೀಯ ಅಜೆಂಡಾದಲ್ಲಿ ದೇಶಕ್ಕೆ ವಚನ ನೀಡಿ, ನಂತರ ಸಸತ್ತನ್ನು ಉದ್ದೇಶಿಸಿ ಮಾಡಿದ ರಾಷ್ಟ್ರಪತಿಗಳ ಭಾಷಣದಲ್ಲಿ ಅದನ್ನು ಪುನರುಚ್ಚರಿಸಿದ ಬಿಜೆಪಿ ಸ್ವಲ್ಪವೂ ತಡಮಾಡದೆ ತದ್ವಿರುದ್ಧವಾಗಿ ವರ್ತಿಸಿದೆ. ತಮಿಳುನಾಡಿಗರ ಕಾನೂನು-ವ್ಯವಸ್ಥೆಯ ಪರಿಶೀಲನೆಗೆಂದು ಒಂದು ಕೇಂದ್ರ ತಂಡವನ್ನು ಕಳಿಸಿದ ರೀತಿ ರಾಜ್ಯಗಳ ಹಕ್ಕುಗಳ ಮೇಲೆ,ಸಂವಿಧಾನದ ಒಕ್ಕೂಟ ಸ್ವರೂಪದ ಮೇಲೊಂದು ಗಂಭೀರ ಪ್ರಹಾರ. ಖಂಡಿತವಾಗಿಯೂ ಸಂಯುಕ್ತ ರಂಗ ಸರಕಾರದ ಅವಧಿಯಲ್ಲಿ ಕೇಂದ್ರ-ರಾಜ್ಯ ಸಂಬಂಧಗಳಲ್ಲಾದ ಸಾಧನೆಗಳನ್ನು ತರುಗು-ಮುರುಗುಗೊಳಿಸಲಾಗುವುದು.

ದುರಭಿಮಾನೀ ವರ್ತನೆಗಳಿಗೆ ಪ್ರೋತ್ಸಾಹ: ಒಂದು ಹೆಲಿಪ್ಯಾಡಿನ ಪ್ರಶ್ನೆಯಲ್ಲಿ ಪ್ರಧಾನಮಂತ್ರಿಗಳು ಮತ್ತು ರಕ್ಷಣಾ ಮಂತ್ರಿಗಳು ಪರಸ್ಪರ ವಿರುದ್ಧ ಹೇಳಿಕೆಗಳನ್ನು ನಿಡುತ್ತಿರುವುದು ನಿಜಕ್ಕೂ ವಿಸ್ಮಯಕಾರಿ. ಹಿಂದೆಂದೂ ಒಬ್ಬ ಪ್ರಧಾನಮಂತ್ರಿ ತನ್ನ ರಕ್ಷಣಾಮಂತ್ರಿ ತನ್ನ ಇಲಾಖೆಯ ಅಧಿಕೃತ ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದರ ವಿರುದ್ಧವಾಗಿ ಹೇಳಿಕೆ ನೀಡಿರುವುದನ್ನು ದೇಶಕಂಡಿರಲಿಲ್ಲ. ಆದರೆ ಬಿಜೆಪಿ ದುರಭಿಮಾನದ ಪ್ರದರ್ಶನಕ್ಕಿಳಿದಿರುವುದು ಎಂಭತ್ತರ ದಶಕದಲ್ಲಿ ಎರಡೂ ದೇಶಗಳ ರಾಜಕೀಯ ಮುಖಂಡರು ಉತ್ತಮ ನೆರೆ-ಕರೆ ಸಂಬಂಧಗಳ ಸ್ಥಾಪನೆಗಾಗಿ ಆರಂಭಿಸಿದ ಪ್ರಕ್ರಿಯೆಗೆ ಹಾನಿ ತರುತ್ತದೆ. ಇಂತಹ ದುರಭಿಮಾನ ಸ್ವತಃ ಭಾರತದ ಹಿತಾಸಕ್ತಿಗಳ ಮೇಲೆ ನಕಾರಾತ್ಮಕ ಪರಿಣಾಮ ಬೀರುವುದಲ್ಲದೆ ದಕ್ಷಿಣ ಏಶ್ಯಾದ ಶಾಂತಿ ಮತ್ತು ಅಭಿವೃದ್ಧಿಯ ಮೇಲೂ ಗಂಭಿರ ಪರಿಣಾಮ ಬೀರಬಲ್ಲದು.

ಕೋಮುವಾದೀ ಅಜೆಂಡಾ: ಇಂತಹ ಕ್ರಮಗಳ ಮೂಲಕ ಬಿಜೆಪಿ ನೇತೃತ್ವದ ಸರಕಾರ ಒಂದು 'ಬಚ್ಚಿಟ್ಟ ಅಜೆಂಡಾ'ವನ್ನು ಅನುಸರಿಸುತ್ತಿದೆ ಎಂಬುದನ್ನು ಸ್ಪಷ್ಟವಾಗಿ ಹೊರಗೆಡಹಿದೆ.ಇದಿ ನಮ್ಮ ದೇಶದ ಐಕ್ಯತೆ ಮತ್ತು ಸಮಗ್ರತೆಗೆ ಗಂಭೀರ ಸಮಸ್ಯೆಗಳನ್ನುಂಟುಮಾಡಬಹುದು. ಬಿಜೆಪಿ ಅಧಿಕಾರ ವಹಿಸಿಕೊಳ್ಳುವುದಕ್ಕಾಗಿ 'ರಾಷ್ಟ್ರೀಯ ಅಜೆಂಡಾ'ದಲ್ಲಿ ಸೇರಿಸದ ಕೋಮುವಾದಿ ಅಜೆಂಡಾವನ್ನು ಅನುಸರಿಸಲು ಆರ್. ಎಸ್. ಎಸ್. ಮತ್ತು ಆದರ ಕಾವಿಪಡೆಗಳು ಒಟ್ಟಿಗೇ ಕಾರ್ಯಪ್ರವೃತ್ತವಾಗಿವೆ. ಅಯೋಧ್ಯೆಯಲ್ಲಿ ದೇವಸ್ಥಾನ ಕಟ್ಟುವುದು, ಕಾಶಿ ಹಾಗೊ ಮಥುರಾದ ಬಗ್ಗೆ ಪ್ರಚಾರ, ಒಂದು ಖಾಸಗೀ ಸೇನೆ ರಚಿಸುವ ಭಜರಂಗದಳದ ಪ್ರಯತ್ನಗಳು ಇವೆಲ್ಲಾ ಭವಿಷ್ಯದಲ್ಲಿ ಕೋಮುಗಲಭೆಗಳು ವಿಸ್ತರಿಸುವ ಸೂಚನೆಗಳು. ಈ 'ಬಚ್ಚಿಟ್ಟ ಅಜೆಂಡಾ' ಅನಾವರಣಗೊಳ್ಳುತ್ತಿರುವಲ್ಲಿ ಜಾತ್ಯಾತೀತರೆನಿಸಿಕೊಳ್ಳುವ ಮಿತ್ರರು ತಮ್ಮ ಶಾಮೀಲಿನ ಬಗ್ಗೆ ಜನರಿಗೆ ಉತ್ತರ ನೀಡಬೇಕಾಗುತ್ತದೆ.

ರಾಷ್ಟ್ರವ್ಯಾಪಿ ಪ್ರತಿಭಟನೆ

ಈ ಸನ್ನಿವೇಶಗಳಲ್ಲಿ ಸಿಪಿಐ(ಎಂ)ನ ಕೇಂದ್ರ ಸಮಿತಿ ಮೂರು ತಿಂಗಳ ಜನಸಂಪರ್ಕ ಮತ್ತು ಚಳುವಳಿಯ ಕಾರ್ಯಕ್ರಮವನ್ನು ಆರಂಭಿಸಿ ಬಿಜೆಪಿಯ ಇಬ್ಬಂದಿತನವನ್ನು ಬಯಲಿಗೆಳೆಯಲು ನಿರ್ಧರಿಸಿದೆ. ಈ ಕಾರ್ಯಕ್ರಮದ ಕೊನೆಯಲ್ಲಿ ವಿನಾಶಕಾರಿ ಆರ್ಥಿಕ ನೀತಿಗಳ ವಿರುದ್ಧ ಅಗಸ್ಟಿನಲ್ಲಿ ದೇಶಾದ್ಯಂತ ಪ್ರತಿಭಟನಾ ಕಾರ್ಯಾಚರಣೆಗಳನ್ನು ನಡೆಸಲಾಗುವುದು.

ಈ ಪ್ರಚಾರಾಂದೋಲನದಲ್ಲಿ ಪಾಲ್ಗೊಂಡು ನಮ್ಮ ದೇಶದ ಐಕ್ಯತೆ, ಸಮಗ್ರತೆ ಮತ್ತು ಸಮೃದ್ಧಿಯನ್ನು ಕಾಪಾಡಿಕೊಳ್ಳಬೇಕೆಂದು ಸಿಪಿಐ(ಎಂ) ಕೇಂದ್ರ ಸಮಿತಿ ತನ್ನ ಎಲ್ಲಾ ಘಟಕಗಳಿಗೆ ಕರೆ ನೀಡುತ್ತದೆ ಹಾಗೂ ಜಾತ್ಯಾತೀತ ಪ್ರಜಾಪ್ರಭುತ್ವದ ಮತ್ತು ಸ್ವಾವಲಂಬನೆಯ ಮೌಲ್ಯಗಳನ್ನು ಬಯಸುವ ಭಾರತೀಯ ಜನತೆಯನ್ನು ವಿನಂತಿಸಿಕೊಳ್ಳುತ್ತದೆ.

ಸಿಪಿಐ(ಎಂ)ನ ಹದಿನಾರನೇ ಮಹಾಧಿವೇಶನ

ಚುನಾವಣೆಗಳಿಂದಾಗಿ ಮುಂದೂಡಿದ್ದ ಪಕ್ಷದ 16ನೆ ಮಹಾಧಿವೇಶನವನ್ನು ಅಕ್ಟೋಬರ್ 5ರಿಂದ 11ರವರೆಗೆ ಕಲ್ಕತ್ತೆಯಲ್ಲಿ ನಡೆಸಲು ಸಿಪಿಐ(ಎಂ) ಕೇಂದ್ರಸಮಿತಿ ನಿರ್ಧರಿಸಿದೆ. ಮಹಾಧಿವೇಶನದ ಕರಡು ರಾಜಕೀಯ ಠರಾವು ಮತ್ತು ಇತರ ಸಾಮಗ್ರಿಗಳನ್ನು ಅಂತಿಮಗೊಳಿಸಲು ಕೇಂದ್ರಸಮಿತಿ ಮತ್ತೆ ಜುಲೈ ತಿಂಗಳಲ್ಲಿ ಸಭೆ ಸೇರಲಿದೆ. ಸಿಪಿಐ(ಎಂ)ನ ಸಂವಿಧಾನದ ಪ್ರಕಾರ ಕರಡು ರಾಜಕೀಯ ಠರಾವಿನ ಮೇಲೆ ಪಕ್ಷದೊಳಗೆ ಒಂದು ಸಕ್ರಿಯ ಆಂತರಿಕ ಚರ್ಚೆನಡೆಯುವಂತಾಗಲು ಅದನ್ನು ಮಹಾಧಿವೇಶನಕ್ಕಿಂತ ಎರಡು ತಿಂಗಳು ಮೊದಲು ಎಲ್ಲಾ ಸದಸ್ಯರಿಗೆ ಒದಗಿಸಬೇಕು.

12ನೇ ಲೋಕಸಭಾ ಚುನಾವಣೆಗಳಲ್ಲಿ ಶೇಕಡಾವಾರು ಮತ ವಿವರ

ರಾಜ್ಯಗಳು	ಬಿಜೆಪಿ	ಬಿಜೆಪಿ ಮಿತ್ರ ಪಕ್ಷಗಳು	ಕಾಂಗ್ರೆಸ್	ಕಾಂಗ್ರೆಸ್ ಮಿತ್ರ ಪಕ್ಷಗಳು	ಸಂಯುಕ್ತ ರಂಗ	ಇತರ ಪಕ್ಷಗಳು ಪಕ್ಷೇತರರು
ಆಂಧ್ರ ಪ್ರದೇಶ	18.30	1.20	37.55	-	38.37	4.58
ಅರುಣಾಚಲ್ ಪ್ರದೇಶ	21.75	-	23.90	-	1.89	52.47
ಅಸ್ಸಾಮ್	24.47	-	38.97	-	18.16	18.40
ಬಿಹಾರ್	22.03	15.46	6.94	4.75	15.50	15.31
ಗೋವಾ	30.18	-	31.53	-	13.15	25.14
ಗುಜರಾತ್	47.72	-	37.95	-	3.47	10.87
ಹರಿಯಾಣ	18.89	11.60	26.02	-	1.07	42.42
ಹಿಮಾಚಲ ಪ್ರದೇಶ	48.60	-	43.57	-	2.02	5.81
ಜಮ್ಮು-ಕಾಶ್ಮೀರ	23.31	-	22.54	-	36.10	17.49
ಕರ್ನಾಟಕ	26.96	11.50	36.23	-	21.82	3.49
ಕೇರಳ	8.02	-	36.55	7.13	42.40	5.90
ಮಧ್ಯಪ್ರದೇಶ	45.86	-	38.46	-	2.65	13.04
ಮಹಾರಾಷ್ಟ್ರ	23.11	19.26	43.48	2.61	3.81	7.72
ಮಣಿಪುರ	12.61	-	18.60	-	20.47	48.32
ಮೇಘಾಲಯ	9.01	-	47.62	-	1.99	41.38
ಮಿಝೋರಾಂ	2.94.	-	34.86	-	-	62.20
ನ್ಯಾಗಾಲ್ಯಾಂಡ್	-	-	86.70	-	-	13.30
ಒರಿಸ್ಸಾ	21.43	27.80	40.27	-	6.45	4.04
ಪಂಜಾಬ್	14.90	32.87	25.87	9.44	8.64	8.28
ರಾಜಸ್ಥಾನ್	41.65	-	44.45	-	6.57	7.32
ಸಿಕ್ಕಿಂ	-	-	33.11	-	-	1.17
ತಮಿಳುನಾಡು	6.86	41.75	5.43	-	43.42	2.53
ತ್ರಿಪುರಾ	8.19	-	42.12	-	48.80	0.90
ಉತ್ತರ ಪ್ರದೇಶ	36.44	1.49	5.99	1.16	29.48	25.44
ಪಶ್ಚಿಮ ಬಂಗಾಳ	10.00	24.14	14.98	2.03	46.65	2.19
ಅಂಡಮಾನ್-ನಿಕೋಬಾರ್	35.53	-	35.91	-	5.67	22.89
ಚಂಡಿಗಢ್	42.39	-	38.72	-	1.61	17.28
ದಾದ್ರ ಮತ್ತು ನಗರ್ ಹವೇಲಿ	52.29	-	4.02	-	-	43.69
ಡಿಯು-ಡಾಮನ್	41.96	-	1.98	-	-	56.06
ದೆಹಲಿ	53.51	-	42.64	-	2.76	1.08
ಲಕ್ಷದ್ವೀಪ	-	-	51.55	-	48.45	-
ಪಾಂಡಿಚೆರಿ	-	25.09	32.13	-	41.11	0.67
ಭಾರತ	25.46	11.59	25.68	3.59	22.42	11.26

ರಶ್ಯದ ರಾಜಕೀಯ ಬಿಕ್ಕಟ್ಟು- ಕಿರಿಯೆಂಕೊಗೆ ಪಾರ್ಲಿಮೆಂಟು ಒಪ್ಪಿಗೆ

ಶರತ್ ಚಂದ್ರ

ಒಂದು ತಿಂಗಳಿಂದ ನಡೆಯುತ್ತಿರುವ ರಶ್ಯದ ತೀವ್ರ ರಾಜಕೀಯ ಬಿಕ್ಕಟ್ಟು ವಿಚಿತ್ರ ತಿರುವು ಪಡೆದು, ಹಠಾತ್ತಾಗಿ ಮೂರನೇ ಸುತ್ತಿನಲ್ಲಿ ಅಲ್ಲಿನ ಪಾರ್ಲಿಮೆಂಟು ಅಧ್ಯಕ್ಷ ಯೆಲ್ಸಿನ್‌ರ ಪ್ರಧಾನಿ ಪಟ್ಟದ ಆಯ್ಕೆ ಕಿರಿಯೆಂಕೊನಿಗೆ ಅನುಮತಿ ನೀಡಿದೆ. ಇದರಿಂದ ಅಧ್ಯಕ್ಷ ಹಾಗೂ ಪಾರ್ಲಿಮೆಂಟು ನಡುವಣ ಘರ್ಷಣೆ ಕೊನೆಗೊಂಡಿದ್ದರೂ ರಾಜಕೀಯ ಬಿಕ್ಕಟ್ಟು ಏನೂ ಪರಿಹಾರ ವಾಗಿಲ್ಲ. ಕಮ್ಯುನಿಸ್ಟ್ ನಾಯಕ ಝುಗನೋವ್, ಇನ್ನೊಂದು ಪ್ರಮುಖ ಪಕ್ಷದ ನಾಯಕ ಯಾಬ್ಲೊಕೊ ಕಿರಿಯೇಂಕೊ ರವರನ್ನು ವಿರೋಧಿಸುವುದು ಮುಂದು ವರೆಸುವುದಾಗಿ ಹೇಳಿದ್ದಾರೆ.

ಈ ಹಿಂದೆ ಎರಡು ಬಾರಿ ಯೆಲ್ಸಿನರ ಆಯ್ಕೆ ಕಿರಿಯೇಂಕೊರನ್ನು ಪಾರ್ಲಿಮೆಂಟು ತಿರಸ್ಕರಿಸಿತ್ತು ಎಂದು ಇಲ್ಲಿ ನೆನಸಿಕೊಳ್ಳ ಬಹುದು. ಈ ಬಾರಿ ಗುಪ್ತ ಮತದಾನ ವಾಗಿತ್ತು. ಪಕ್ಷದ ನಿರ್ದೇಶನ ಉಲ್ಲಂಘಿಸಿ ವೈಯಕ್ತಿಕ ಒತ್ತಡ ಪ್ರಚೋದನೆಗೆ ಕೆಲವು ಸದಸ್ಯರು ಒಳಗಾಗಿರುವ ಸಾಧ್ಯತೆ ಇದೆ. ಈ ಹಿಂದಿನ ಎರಡೂ ಬಾರಿ ಬಹಿರಂಗ ಮತದಾನ ನಡೆದಿತ್ತು .ಈ ಬಾರಿ ಕೆಲವು ಪಕ್ಷಗಳ ಅಪೇಕ್ಷೆಯ ಮೇರೆಗೆ ಗುಪ್ತ ಮತದಾನ ನಡೆದಿತ್ತು.

ಈ ಬಾರಿ ಕಿರಿಯೆಂಕೊ ಆಯ್ಕೆ ತಿರಸ್ಕರಿಸಿದರೆ, ಪಾರ್ಲಿಮೆಂಟನ್ನು ವಿಸರ್ಜಿಸುವುದಾಗಿ ಅಧ್ಯಕ್ಷ ಯೆಲ್ಸಿನ್ ಬೆದರಿಸಿದ್ದರು. ಇದೂ ಕೆಲವು ಸದಸ್ಯರ ಮೇಲೆ ಪರಿಣಾಮ ಬೀರಿರಬಹುದು. ಆದರೆ ಇದಕ್ಕೆ ಪ್ರತಿಯಾಗಿ ಕಮ್ಯುನಿಸ್ಟ್ ಪಕ್ಷ ಅಧ್ಯಕ್ಷ ಯೆಲ್ಸಿನ್ ವಿರುದ್ಧ ಅವಿಶ್ವಾಸ ನಿರ್ಣಯ ತರುವುದಾಗಿ ಘೋಷಿಸಿತ್ತು. ಪಾರ್ಲಿಮೆಂಟಿನ ಮೂರನೇ ಒಂದು ಭಾಗ ಸದಸ್ಯರು ಅವಿಶ್ವಾಸದ ನಿರ್ಣಯ ತಂದರೆ ಅಧ್ಯಕ್ಷರಿಗೆ ಸಂವಿಧಾನದ ಪ್ರಕಾರ ಪಾರ್ಲಿಮೆಂಟು ವಿಸರ್ಜಿಸುವ ಅಧಿಕಾರ ಇಲ್ಲ.

ಹೊಸ ಪ್ರಧಾನಿ ಕಿರಿಯೇಂಕೊ ತಮ್ಮ ಸಂಪುಟ ರಚಿಸಲಿದ್ದು, ಹೆಜ್ಜೆ ಹೆಜ್ಜೆಗೂ ಪಾರ್ಲಿಮೆಂಟಿನಿಂದ ಪ್ರತಿರೋಧ ಎದುರಿಸುವ ಸಾಧ್ಯತೆ ಇದೆ.

ಈ ನಡುವೆ ಯೆಲ್ಸಿನ್‌ರು ಇಡೀ ಸಂಪುಟವನ್ನು ವಜಾ ಮಾಡಿ ಹೊಸ ಪ್ರಧಾನಿ, ಮಂತ್ರಿಮಂಡಲ ನೇಮಿಸಿದ್ದು ಮಾಫಿಯಾದ ಒಂದು ವಿಭಾಗದ ಒತ್ತಡ ದಿಂದ ಎಂಬ ಸುದ್ದಿ ಮಾಸ್ಕೋದಲ್ಲಿ ದಟ್ಟವಾಗಿ ಹಬ್ಬಿದೆ.

ಪೊಲ್‌ಪೊಟ್ ನಿಧನ

70ರ ದಶಕದಲ್ಲಿ ಕಂಬೋಡಿಯಾವನ್ನು ಖೇಮರ್ ರೋಜ್ ಎಂಬ ಪಕ್ಷದ ನಾಯಕನಾಗಿ ಆಳಿದ ಪೊಲ್ ಪೊಟ್ ನಿಧನ ಹೊಂದಿದ ಎಂದು ತಿಳಿದು ಬಂದಿದೆ. ಈಗಿನ ಕಂಬೋಡಿಯಾ ಸರಕಾರದ ವಿರುದ್ಧ ಸಶಸ್ತ್ರ ಗೆರಿಲ್ಲಾ ಹೋರಾಟ ನಡೆಸುತ್ತಿರುವ 'ಖೇಮರ್‌ರೋಜ್' ನಾಯಕ ಪೊಟ್‌ಪೊಟ್ ಥ್ಯಾಲೆಂಡ್ ಗಡಿ ಪಕ್ಕದ ಉತ್ತರ ಕಂಬೋಡಿಯಾ ಅರಣ್ಯವೊಂದರಲ್ಲಿ ನಿಧನ ಹೊಂದಿದ ಎಂದು ವರದಿಗಳು ತಿಳಿಸಿವೆ. ಇತ್ತೀಚೆಗೆ ಪೊಲ್‌ಪೊಟ್ ನಾಯಕತ್ವ ವಹಿಸಿದ್ದ ಖೇಮರ್ ರೋಜ್ ಸಂಘಟನೆಯಲ್ಲಿ ನಾಯಕತ್ವ ಬದಲಾವಣೆಯ ಪ್ರಕಾರ ಆತನನ್ನು ನಾಯಕತ್ವದಿಂದ ತೆಗೆದು ಹಾಕಲಾಗಿದ್ದು ಗೃಹ ಬಂಧನದಲ್ಲಿ ಇರಿಸಲಾಗಿದೆ ಎನ್ನಲಾಗಿತ್ತು. ಪೊಲ್ ಪೊಟ್‌ಗೆ 73 ವರ್ಷ ವಯಸ್ಸು ಎನ್ನಲಾಗಿದೆ.

ಕಂಬೋಡಿಯಾದ ರೈತ ಕುಟುಂಬ ವೊಂದರಲ್ಲಿ ಜನಿಸಿದ ಪೊಲ್‌ಪೊಟ್ 1949 ರಲ್ಲಿ ಫ್ರಾನ್ಸಿಗೆ ಉನ್ನತ ಶಿಕ್ಷಣಕ್ಕೆ ಹೋಗಿದ್ದಾಗ ಎಡಪಂಥೀಯ ಚಳುವಳಿಗೆ ಆಕರ್ಷಿತರಾಗಿ ಕಂಬೋಡಿಯಾದಿಂದ ಬಂದ ವಿದ್ಯಾರ್ಥಿಗಳ ಸಂಘಟನೆ ಕಟ್ಟಿದರು. ಇದರ ಸದಸ್ಯರೇ ಮುಂದೆ ಅವರು ಕಟ್ಟಿದ ಖೇಮರ್‌ರೋಜ್ ಸಂಘಟನೆಯ ಪ್ರಮುಖ ಸದಸ್ಯರಾದರು. 1963 ರಲ್ಲಿ ಖೇಮರ್ ರೋಜ್‌ನ ಪ್ರಧಾನ ಕಾರ್ಯದರ್ಶಿಯಾದರು. ಖೇಮರ್ ರೋಜ್ ಕಂಬೋಡಿಯಾವನ್ನು ಸಾಮ್ರಾಜ್ಯ ಶಾಹಿಯಿಂದ ಬಿಡುಗಡೆ ಮಾಡಲು ಹೋರಾಡುವ ವಿಮೋಚನಾ ಸಂಘಟನೆಯಾಗಿ ರೂಪುಗೊಂಡಿತು. ಆಗಿನ ರಾಜ ನರೋದಂ ಸಿಹನೌಕ್‌ರ ದಮನ ತಾಳದೆ, ಖೇಮರ್ ರೋಜ್ ಅರಣ್ಯ ಪ್ರದೇಶಗಳಲ್ಲಿ ಭೂಗತ ವಾಗಿ ಗೆರಿಲ್ಲಾ ಸಶಸ್ತ್ರ ಹೋರಾಟ ಆರಂಭಿಸಿತು. ವಿಯೆಟ್ನಾಂ ಮೇಲೆ ಅಮೆರಿಕ ಯುದ್ಧ ಹೂಡಿದ ಸನ್ನಿವೇಶದಲ್ಲಿ 70 ರ ದಶಕದಲ್ಲಿ ಅಮೇರಿಕ ಉತ್ತರ ವಿಯೆಟ್ನಾಂ ಪಡೆಗಳಿಗೆ ಅಗತ್ಯ ಸೇವೆಯ ದಾರಿ ಬಂದ್ ಮಾಡಲು ಕಂಬೋಡಿಯಾದ ಮೇಲೆ ಧಾಳಿ ಮಾಡಿ ನರೋದಂ ಸರಕಾರ ಉರುಳಿಸಿ ಕೈಗೊಂಬೆ ಸರ್ಕಾರ ಸ್ಥಾಪಿಸಿದರು. ಅಮೇರಿಕ ಕೈಗೊಂಬೆ ಸರ್ಕಾರ ಉರುಳಿಸಲು ವಿಯೆಟ್ನಾಂ ಕಮ್ಯುನಿಸ್ಟ್ ಪಕ್ಷ ಖೇಮರ್‌ರೋಜ್ ಗೆ ಶಸ್ತ್ರಾಸ್ತ್ರ ತರಬೇತಿ ಬೆಂಬಲ ನೀಡಿತು. ಇದನ್ನು ಪಡೆದ ಖೇಮರ್ ರೋಜ್ ಸಶಸ್ತ್ರ ಗೆರಿಲ್ಲಾ ಹೋರಾಟ ನಡೆಸಿ 1975 ರಲ್ಲಿ ಸರ್ಕಾರ ರಚಿಸಿದರು.

ಅಧಿಕಾರ ಹಿಡಿದ ಖೇಮರ್ ರೋಜ್ ಮಾವೋವಾದಿ ಅತಿವಾದಿ ಆರ್ಥಿಕ-ಸಾಮಾಜಿಕ ಧೋರಣೆಗಳನ್ನು ಅನುಸರಿಸ ಲಾರಂಭಿಸಿತು. ಯುದ್ಧ ಸನ್ನಿವೇಶ ಕಂಬೋಡಿಯಾದ ಪ್ರಜಾಸತ್ತಾತ್ಮಕ ಚಳುವಳಿಯ ಮಧ್ಯ ಸಾಮಾಜಿಕ ಸನ್ನಿವೇಶವನ್ನು ಲೆಕ್ಕಕ್ಕೆ ತೆಗೆದುಕೊಳ್ಳದೆ ಖೇಮರ್ ರೋಜ್ ಆದರ್ಶವಾದಿ ಕನಸಿನ ನೀತಿಗಳನ್ನು ಅನುಸರಿಸಿತು. ದೇಶದ ಆರ್ಥಿಕದ ಬೆನ್ನೆಲುಬು ಕೃಷಿಯಾದ್ದರಿಂದ ಎಲ್ಲಾ ನಗರ ವಾಸಿಗಳು ಹಳ್ಳಿಗಳಿಗೆ ತೆರಳಿ, ಸಾಮೂಹಿಕ ಕೃಷಿ ಫಾರಂಗಳಲ್ಲಿ ಕೆಲಸ ಮಾಡಬೇಕೆಂಬ ನೀತಿ ಅನುಸರಿಸಿತು. ನಾಣ್ಯವನ್ನು ರದ್ದು ಮಾಡಲಾಯಿತು. ಇವೇ ಮುಂತಾದ ತಪ್ಪು ಆರ್ಥಿಕ, ಸಾಮಾಜಿಕ ನೀತಿಗಳನ್ನು ಜನ ವಿರೋಧಿಸಿದಾಗ, ತೀವ್ರ ದಮನವನ್ನು 'ಖೇಮರ್' ಬಳಸಿತು. ನೀತಿಗಳನ್ನು ಬದಲು ಮಾಡುವ ಬದಲು ಜನರ ಮೇಲೆ ದಮನ ಹರಿಯಬಿಟ್ಟಿತು. ಈ ದಮನ ಚಕ್ರದಲ್ಲಿ ದೊಡ್ಡ ಪ್ರಮಾಣದಲ್ಲಿ ಜನ ಸತ್ತರು. ಇಲ್ಲವೆ ತೀವ್ರ ನಷ್ಟಕ್ಕೊಳ ಗಾದರು. 1979ರಲ್ಲಿ 'ಖೇಮರ್ ರೋಜ್' ಸಂಘಟನೆಯ ಒಂದು ವಿಭಾಗ ಈ ನೀತಿಗಳನ್ನು ವಿರೋಧಿಸಿ, ವಿಯೆಟ್ನಾಂ ಬೆಂಬಲದಿಂದ ಅವರನ್ನು ಅಧಿಕಾರದಿಂದ ಉರುಳಿಸಿತು. ಆಗಿನಿಂದ ಖೇಮರ್ ರೋಜ್ ನಾಯಕತ್ವ, ಪೊಲ್ ಪೊಟ್ ಅರಣ್ಯ ಸೇರಿ ಗೆರಿಲ್ಲಾ ಹೋರಾಟ ನಡೆಸಿದರು. ಇತ್ತೀಚಿನವರೆಗೆ ಹಲವು ವರ್ಷಗಳ ಕಾಲ ಪೊಲ್‌ಪೊಟ್‌ಗೆ ಅಮೇರಿಕಾ, ಥಾಯ್ಲೆಂಡ್, ಚೀನ, ಬೆಂಬಲ ನೀಡಿದವು. ಆದರೆ ಇತ್ತೀಚೆಗೆ ಅಂತರ್ರಾಷ್ಟ್ರೀಯ ಕಮಿಶನ್ ಎದುರು, ಪೊಲ್‌ಪೊಟ್ ಸರ್ಕಾರದ ಕುಕೃತ್ಯಗಳ ಬಗ್ಗೆ ವಿಚಾರಣೆ ನಡೆಸಬೇಕು ಎಂಬ ವಿಚಾರ ಅಮೇರಿಕ ಮುಂದಿಟ್ಟಿತ್ತು. ಪೊಲ್‌ಪೊಟ್‌ರ ಸಾವು ಇದಕ್ಕೆ ಪರದೆ ಎಳೆದಿದೆ. ಈ ವಿಷಯವನ್ನು ಬಳಸಿ ಅಮೇರಿಕ ಈಗಿನ ಕಂಬೋಡಿಯಾ ಆಂತರಿಕ ರಾಜಕೀಯ ಬೆಳವಣಿಗೆಗಳಲ್ಲಿ ಪರಿಣಾಮ ಬೀರಲು ಪ್ರಯತ್ನಿಸುತ್ತಿದೆ.

○

ಮಾಜಿ ಅಧ್ಯಕ್ಷರ ವಿರುದ್ಧ ಕಾನೂನು ಕ್ರಮ ದಕ್ಷಿಣ ಆಫ್ರಿಕಾದಲ್ಲಿ ಒತ್ತಾಯ

ದಕ್ಷಿಣ ಆಫ್ರಿಕಾದಲ್ಲಿ ಸತ್ಯ ಮತ್ತು ಸಮಜಾಯಿಷಿ ಕಮೀಶನ್ (Truth and Reconciliation Commission - TRC) ದೇಶದ ವರ್ಣದ್ವೇಷ ಆಡಳಿತದ ಅವಧಿಯಲ್ಲಿ ಮಾನವ ಹಕ್ಕುಗಳ ಮೇಲೆ ನಡೆದ ದೌರ್ಜನ್ಯಗಳು, ಅದಕ್ಕೆ ಕಾರಣ ರಾದವರ ತಪ್ಪಿತಸ್ಥತೆ ಬಗ್ಗೆ ತನಿಖೆ ನಡೆಸುತ್ತಿದೆ. ಹಲವಾರು ಕೇಸುಗಳಲ್ಲಿ ಮಾಜಿ ಅಧ್ಯಕ್ಷ ಬೋಥಾರ ಹೇಳಿಕೆ ಇಲ್ಲದೆ ಆ ಬಗ್ಗೆ ತನಿಖೆ ಪೂರ್ಣವಾಗುವುದಿಲ್ಲ. ಅಲ್ಲದೆ ಹಲವಾರು ಕೇಸುಗಳಲ್ಲಿ ಅಪರಿಚಿತರು, ಹಲವಾರು ದೌರ್ಜನ್ಯಗಳನ್ನು ಬೋಥಾರವರ ವೈಯಕ್ತಿಕ ಆಜ್ಞೆ ಮೇಲೇ ಮಾಡಿದ್ದಾಗಿ ಹೇಳಿದ್ದಾರೆ. ಇವೆಲ್ಲ ಆಪಾದನೆ ಬಗ್ಗೆ ಉತ್ತರಿಸಲು, ಸಾಕ್ಷ ಹೇಳಲು ಬೋಥಾ (TRC) ಕಮಿಶನ್ ಎದುರು ಹಾಜರಾಗ ಬೇಕೆಂಬ ಆಜ್ಞೆಯನ್ನು ಬೋಥಾ ಈ ವರೆಗೆ ಉಲ್ಲಂಘಿಸಿದ್ದಾರೆ. (TRC) ಕಮಿಶನ್ ವಿರುದ್ಧ ತಿರಸ್ಕಾರ ತೋರಿದಕ್ಕಾಗಿ ಅವರ ಮೇಲೆ ಸರ್ಕಾರ ಕೇಸು ಹಾಕಿದೆ. ಆದರೆ ಕಾನೂನಿನ ಎಲ್ಲಾ ಕ್ರಮಗಳನ್ನು ಬೋಥಾ ವಿರುದ್ಧ ಅನ್ವಯಿಸಲಾಗುತ್ತಿಲ್ಲ. ಅವರ ಮೇಲೆ ಎಲ್ಲಾ ಸಾಧ್ಯ ಕಾನೂನು ಕ್ರಮ ಕೈಗೊಳ್ಳಬೇಕು. ವಿಚಾರಣೆಗೆ ಒಳಪಡಿಸಬೇಕು ಎಂದು ಹಲವಾರು ಕರಿಯ ನಾಯಕರು, ಬುದ್ಧಿಜೀವಿಗಳು, ರಾಜಕೀಯ ನಾಯಕರು ಸುದ್ದಿ ಮಾಧ್ಯಮಗಳು ತೀವ್ರವಾಗಿ ಒತ್ತಾಯಿಸುತ್ತಿವೆ.

TRC ತನಿಖೆ ಬಹಿರಂಗ ಪಡಿಸುತ್ತಿರುವ ಹಲವಾರು ವರ್ಣ ದ್ವೇಷಿ ದೌರ್ಜನ್ಯಗಳು ಇಡೀ ದೇಶವನ್ನು ದಂಗು ಬಡಿಸುತ್ತಿದ್ದು, ಅದರ ಮುಖ್ಯಸ್ಥನಾಗಿದ್ದ ಬೋಥಾರ ವಿಚಾರಣೆ ಬಗ್ಗೆ ಒತ್ತಾಯ ಬಲವಾಗುತ್ತಿದೆ. ಇತ್ತೀಚೆಗೆ ಕೇಸ್‌ನ ತನಿಖೆಯೊಂದರಲ್ಲಿ ಕರಿಯರ ಪಟ್ಟಣ ಸೊವೆಟೊದ ಕುಡಿಯುವ ನೀರು ವಿಷಪೂರಿತಗೊಳಿಸುವ ಪಿತೂರಿ ಬಗ್ಗೆ ಬಯಲಾದ ಆಫ್ರಿಕಾನೆರ್ ರೆಸಿಸ್ಟೆನ್ಸ್ ಮೂವ್‌ಮೆಂಟ್ (AWB) ಎಂಬ ಸರ್ಕಾರಿ ಘೋಷಿತ ಸಂಘಟನೆಯ ಸದಸ್ಯನೊಬ್ಬ ಈ ವಿಚಾರವನ್ನು ವಿಚಾರಣೆ ಯಲ್ಲಿ ಹೇಳಿದ. ಅದೇ ರೀತಿ ಚುನಾವಣೆಯ ಸಮಯದಲ್ಲಿ ಕರಿಯರು ಓಟು ಮಾಡಲು ಹೋಗದಂತೆ ಮಾಡಲು ರೋಡ್ ಬ್ಲಾಕ್ ಗಳನ್ನು ಸೃಷ್ಟಿಸಲು ತಮ್ಮ ಸಂಘಟನೆ ಪ್ರಯತ್ನಿಸಿತ್ತು. ಹಲವಾರು ಕಡೆ ಯಶಸ್ವಿಯಾಗಿಯೂ ಇತ್ತು ಎಂದು ಆತ ಹೇಳಿದ. ಇಂತಹ ರೋಡ್ ಬ್ಲಾಕ್‌ಗಳಲ್ಲಿ ಹಲವಾರು ಕರಿಯರು ಸತ್ತಿದ್ದರು.

ರಶ್ಯಾ-ಜಪಾನ್ ಶೃಂಗಸಭೆ

ರಶ್ಯಾದ ಅಧ್ಯಕ್ಷ ಯೆಲ್ಸಿನ್ ಹಾಗೂ ಜಪಾನಿ ಪ್ರಧಾನಿ ಹಶಿಮೊಟೊ ನಡುವೆ ಜಪಾನಿ ಮೀನುಗಾರಿಕಾ ಗ್ರಾಮ ಕವಾನಾ ದಲ್ಲಿ ಒಂದು ಮಿನಿ ಶೃಂಗಸಭೆ ನಡೆಯಿತು. ಈ ಶೃಂಗಸಭೆ ನಾಟಕೀಯ ಪರಿಣಾಮ ಏನೂ ಬೀರದಿದ್ದರೂ, ರಶ್ಯಾ ಹಲವು ದೇಶಗಳ ಜೊತೆ ದೂರಗಾಮಿ ಸಂಬಂಧ ಗಳನ್ನು ಬೆಳೆಸಿ, ಬಹುಧ್ರುವೀಯ ಜಗತ್ತು ಬೆಳೆಸುವುದರತ್ತ ಇನ್ನೊಂದು ಹೆಜ್ಜೆ ಇಟ್ಟಿರುವುದು ಗಮನಾರ್ಹ.

ಎರಡನೇ ಮಹಾಯುದ್ದದ ವೈರತ್ವದ ನಂತರ ಸಂಬಂಧ ಸಾಮಾನ್ಯಗೊಳಿಸುವ ಹಾದಿಯಲ್ಲಿ 1993ರ ಟೋಕ್ಯೋ ಹೇಳಿಕೆಯ ನಂತರ ಎರಡೂ ದೇಶಗಳ ನಡುವೆ ಸಂಬಂಧ ಹೆಚ್ಚುತ್ತಿದೆ. ಎರಡೂ ದೇಶಗಳ ನಡುವೆ ನಾಲ್ಕು ದ್ವೀಪಗಳ ಬಗ್ಗೆ ಗಡಿವಿವಾದ ಇದ್ದರೂ, ಆ ಬಗೆಗೂ ಬಿಚ್ಚು ಮನಸ್ಸಿನ ಮಾತುಕತೆಗಳು ನಡೆದಿವೆ. ರಶ್ಯಾದ 20 ಯೋಜನೆಗಳಲ್ಲಿ ಜಪಾನ್ ತಾಂತ್ರಿಕ ಸಹಕಾರ ಕೊಡಲು ಹಾಗೂ 15 ಲಕ್ಷ ಡಾಲರುಗಳಷ್ಟು ಸಾಲ ಒದಗಿಸಲು ಒಪ್ಪಿಕೊಂಡಿದೆ.

ದೂರಗಾಮಿ ಸಂಬಂಧ ಗಟ್ಟಿಗೊಳಿಸುವುದಲ್ಲದೆ, ಇಬ್ಬರೂ ನಾಯಕರಿಗೆ ಆಂತರಿಕ ಬೆಳವಣಿಗೆಗಳಿಂದ ವಿರಾಮ ದೊರಕಿತ್ತು. ಯೆಲ್ಸಿನ್ ತೀವ್ರ ರಾಜಕೀಯ ಬಿಕ್ಕಟ್ಟು ಎದುರಿಸುತ್ತಿದ್ದರೆ, ಹಶಿಮೊಟೊ ಜಪಾನ್‌ನಲ್ಲಿ ತೀವ್ರ ಆರ್ಥಿಕ ಹಿಂಜರಿತ ಬಿಕ್ಕಟ್ಟು ಎದುರಿಸುತ್ತಿದ್ದಾರೆ.

ನೊಬಲ್ ಪ್ರಶಸ್ತಿ ವಿಜೇತ ಒಕ್ಟೇವಿಯೊ ಪಾಜ್ ನಿಧನ

ಮೆಕ್ಸಿಕನ್ ಕವಿ ಹಾಗೂ ಲೇಖಕ ಒಕ್ಟೇವಿಯೊ ಪಾಜ್ ತನ್ನ 84ನೇ ವಯಸ್ಸಿನಲ್ಲಿ ನಿಧನರಾದರು. 60ರ ದಶಕದಲ್ಲಿ ಸಾಹಿತ್ಯಕ್ಕೆ ನೋಬಲ್ ಪ್ರಶಸ್ತಿ ಪಡೆದಿದ್ದ ಪಾಜ್‌ಗೆ 84 ವರ್ಷವಾಗಿತ್ತು. ವಿದ್ಯಾರ್ಥಿಯಾಗಿದ್ದಾಗ ಮಾರ್ಕ್ಸ್‌ವಾದಿ ಚಳುವಳಿಯಿಂದ ಆಕರ್ಷಿತರಾಗಿದ್ದ ಪಾಜ್, ಆಮೇಲೆ ಸ್ಪೇನ್‌ನಲ್ಲಿ ಫ್ಯಾಸಿಸ್ಟ್-ವಿರೋಧಿ ಲೇಖಕರ ಜಾಗತಿಕ ಕಾಂಗ್ರೆಸ್ ಸಂಘಟನೆಯಲ್ಲಿ ಸಕ್ರಿಯ ರಾಗಿದ್ದರು. ಆಮೇಲೆ ಎಡ ಚಳುವಳಿ ಜೊತೆ ನಿಕಟ ಸಂಬಂಧ ಕಳೆದುಕೊಂಡ ಪಾಜ್ ಮೆಕ್ಸಿಕನ್ ರಾಜತಾಂತ್ರಿಕ ಸಿಬ್ಬಂದಿಯಲ್ಲಿ ಕೆಲಸ ಮಾಡಲಾರಂಭಿಸಿದರು. ಸ್ವಲ್ಪಕಾಲ ಅಮೇರಿಕಾದಲ್ಲಿ ಕೆಲಸ ಮಾಡುತ್ತಿದ್ದರು. ಭಾರತದಲ್ಲಿ ಮೆಕ್ಸಿಕನ್ ರಾಯಭಾರ ಸಿಬ್ಬಂದಿಯಾಗಿ, ರಾಯಭಾರಿಯಾಗಿ ಪಾಜ್ ವಾಸಿಸಿದ್ದರು. ಅವರು ಭಾರತದ ಮೇಲೆ ಬರೆದ ಮತ್ತು ಇತರ ಕಾವ್ಯ ಭಾರತೀಯ ಭಾಷೆಗಳಿಗೆ ಅನುವಾದಿತ ವಾಗಿದೆ. ಮೆಕ್ಸಿಕನ್ ಸಾಹಿತ್ಯ ಅದರಲ್ಲೂ ಕಾವ್ಯದಲ್ಲಿ ಪ್ರಮುಖ ಪ್ರಭಾವ ಬೀರಿದ ಒಕ್ಟೇವಿಯೊ ಪಾಜ್ ಕೊನೆ ಕಾಲದಲ್ಲಿ 1976ರಲ್ಲಿ ಅವರು ಸ್ಥಾಪಿಸಿದ ಸಾಹಿತ್ಯಿಕ ಮ್ಯಾಗಝಿನ್ ವಯೇಲ್ಟಗೆ ಕೆಲಸ ಮಾಡುತ್ತಿದ್ದರು.

ಎರಡನೇ ನರಸಿಂಹಮ್ ಅವತಾರ

ಪುಟ 2 ರಿಂದ

ಸಾಮರ್ಥ್ಯ ಪಡೆಯುತ್ತವೆ. ದೊಡ್ಡ ಬಂಡವಾಳಿಗರು ಮತ್ತು ಬ.ಕ.ಗಳು (ಬಹುರಾಷ್ಟ್ರೀಯ ಕಂಪನಿಗಳು) ಅದನ್ನೇ ಬಯಸುವುದು.

ಸಂಕುಚಿತ ಬ್ಯಾಂಕಿಂಗ್ ಎಂದು ಸಣ್ಣ ಬ್ಯಾಂಕುಗಳ ಭೌಗೋಳಿಕ ವ್ಯಾಪ್ತಿಯನ್ನೇ ಮಿತಿಗೊಳಿಸುವುದರಿಂದ ಅವುಗಳು ಬೆಳೆಯಲಾಗದೆ ಮುಚ್ಚಿ ಹೋಗುವ ಸಾಧ್ಯತೆ ಹೆಚ್ಚುತ್ತದೆ. ಕಂಪ್ಯೂಟರೀಕರಣ ಮಾಡುವುದರಿಂದ ಬ್ಯಾಂಕುಗಳಲ್ಲಿ ಉದ್ಯೋಗಗಳ ಕಡಿತ ತೀವ್ರವಾಗಿ ಆಗುತ್ತವೆ. ಮತ್ತು ಬ.ಕ.ಗಳ ಅಜೆಂಡವನ್ನು ಈ ವರದಿ ಪೂರೈಸುವ ಪ್ರಯತ್ನವನ್ನು ಮಾಡಿದೆ.

ಹಿಂದೆ ನರಸಿಂಹಮ್ ಸಮಿತಿಯ ಮೊದಲ ವರದಿ ಬಂದಾಗ ಬ್ಯಾಂಕಿಂಗ್ ವಲಯದ ಉದ್ಯೋಗಿಗಳಿಗೆ ಈ ವರದಿಯ ಪರಿಣಾಮದ ಸ್ಪಷ್ಟ ಚಿತ್ರಣವಿರಲಿಲ್ಲ. ಈಗ ಮೊದಲ ವರದಿ ಉಂಟು ಮಾಡಿದ ಅಲ್ಲೋಲ ಕಲ್ಲೋಲದ ಸ್ಪಷ್ಟ ಚಿತ್ರಣ ಅವರಲ್ಲಿದೆ. ಆದ್ದರಿಂದಲೇ ಬ್ಯಾಂಕಿಂಗ್ ವಲಯದ ಟ್ರೇಡ್ ಯೂನಿಯನ್‌ಗಳು ಒಗ್ಗಟ್ಟಾಗಿ ಈ ವರದಿಯ ಶಿಫಾರಸ್ಸುಗಳ ವಿರುದ್ಧ ಹೋರಾಡುವ ದೃಢ ಸಂಕಲ್ಪವನ್ನು ಮಾಡಿವೆ.

ಎರಡನೇ ವರದಿಯ ಜ್ಯಾರಿಯಲ್ಲಿ ಸರ್ಕಾರ ಸಾಕಷ್ಟು ಪ್ರತಿರೋಧವನ್ನು ಎದುರಿಸಲಿದೆ. ಸ್ವದೇಶಿ ಹುಯಿಲಿನೊಂದಿಗೆ ಅಧಿಕಾರಕ್ಕೆ ಬಂದ ಬಿಜೆಪಿ ಸರ್ಕಾರ ಬ್ಯಾಂಕಿಂಗ್ ವಲಯವನ್ನು ವಿದೇಶಿಯರಿಗಾಗಿ ಪೂರ್ತಿ ತೆರೆದಿಡಲು ಸಿದ್ಧವೆಂಬುದು ಸ್ಪಷ್ಟ. ಆದ್ದರಿಂದಲೇ ಬ್ಯಾಂಕಿಂಗ್ ವಲಯದ ಕೆಲಸಗಾರರು ಒಗಟ್ಟಿನಿಂದ ಹೋರಾಡಿದರೆ ಮಾತ್ರ ಉದಾರೀಕರಣದ ಆಕ್ರಮಣವನ್ನು ತಡೆಯಲು ಸಾಧ್ಯ.

ಖಾನ್ ಸಮಿತಿಯದೂ ಅದೇ ರಾಗ:


ಬ್ಯಾಂಕುಗಳು ಮತ್ತು ಅಭಿವೃದ್ಧ ಹಣಕಾಸು ಸಂಸ್ಥೆಗಳ ಕಾರ್ಯವ್ಯಾಪ್ತಿಯ ಕುರಿತಾಗಿ ನೇಮಿಸಿದ ಎನ್. ಎಚ್. ಖಾನ್ (ಭಾರತೀಯ ಔದ್ಯಮಿಕ ಅಭಿವೃದ್ಧಿ ಬ್ಯಾಂಕಿನ ಅಧ್ಯಕ್ಷರು) ಅವರ ಸಮಿತಿಯೂ ನರಸಿಂಹಂ ಸಮಿತಿಯ ವರದಿಯಂತೆಯೇ ವರದಿ ಸಲ್ಲಿಸಿದೆ. ಈ ಎರಡೂ ವರದಿಗಳಲ್ಲಿ ಹಲವು ಸಾಮ್ಯ ವಿದೆಯಂತೆ.

ಈ ವರದಿಯೂ ಪ್ರಬಲ ಬ್ಯಾಂಕು ಅಭಿವೃದ್ಧಿ ಹಣಕಾಸು ಸಂಸ್ಥೆ ವಿಲೀನ ವಿಶ್ವವ್ಯಾಪಿ ಬ್ಯಾಂಕಿಂಗ್ ಇತ್ಯಾದಿಗಳ ಬಗ್ಗೆ ಶಿಫಾರಸ್ಸು ಮಾಡಿದೆ. ಹೀಗೆ ಯಾವ ಸಮಿತಿ ನೇಮಿಸಿದರೂ ಅದು ದೊಡ್ಡ ಬಂಡವಾಳಿಗರನ್ನು ಮತ್ತು ಸಾಮ್ರಾಜ್ಯಶಾಹಿಗಳ ಆಸಕ್ತಿಗಳನ್ನೇ ಕಾಯುತ್ತವೆ. ಜಗತ್ತಿನ ದುಡಿವ ಜನರೆಲ್ಲ ಒಂದಾಗಲು ಇದು ಆಹ್ವಾನವಲ್ಲವೆ?

ವಿಮೋಚನಾ ಸಮರ

ಪುಟ 2 ದಿಂದ

ಇದು ಒಪ್ಪಿಗೆಯಿರಲಿಲ್ಲ. ಆದರೆ ದೇಶದ ವಿಭಜನೆ ಅನಿವಾರ್ಯ ವಾದ್ದರಿಂದ ಪಂಜಾಬ್ ಹಾಗೂ ಬಂಗಾಳದ ಹಿಂದೂ ಬಹುಸಂಖ್ಯಾತ ಪ್ರದೇಶಗಳನ್ನು ಪಾಕಿಸ್ತಾನದಲ್ಲಿ ಸೇರಿಸಬಾರದು ಎಂದು ಸೂಚಿಸಿದರು. ಜಿನ್ನಾ ಈ ಎರಡೂ ಪ್ರಾಂತ್ಯಗಳನ್ನೂ ವಿಭಜಿಸದೆ ಪಾಕಿಸ್ತಾನಕ್ಕೆ ಸೇರಿಸಬೇಕು ಎಂದರು. ಅಸ್ಸಾಂನ್ನು ವಿಭಜಿಸಿ ಎಂದರು. ಅಕಾಲಿಗಳು ಎರಡೂ ಪಂಜಾಬ್ ಗಳಿರುವ ಪ್ರತ್ಯೇಕ ಸಿಖ್ ರಾಜ್ಯ ಕೇಳಿದರು. ಕೊನೆಗೂ ಕಾಂಗ್ರೆಸ್ ಭಾರತ ವಿಭಜನೆಗೆ ಒಪ್ಪಿದರೆ ಮುಸ್ಲಿಂ ಲೀಗ್ ಬಂಗಾಳ, ಪಂಜಾಬ್ ಪ್ರಾಂತ್ಯಗಳ ವಿಭಜನೆಗೆ ಒಪ್ಪಿತು. ಈ 'ಶಸ್ತ್ರಕ್ರಿಯೆ'ಯಿಂದ ಕೋಮುದಂಗೆಗಳ ಪರಿಸ್ಥಿತಿ ಮುಗಿದುಹೋಗುತ್ತದೆ ಎಂದು ನಿರೀಕ್ಷಿಸಲಾಯಿತು. ಆದರೆ ಈ ಘೋಷಣೆಯೊಂದಿಗೆ ಅದು ತೀವ್ರ ಗೊಂಡಿತು. ಸಾವಿರಾರು ಜನ ತಂತಮ್ಮ ಮನೆ-ಮಠ ಬಿಟ್ಟು ಏನು ಒಯ್ಯಲು ಸಾಧ್ಯವೋ ಅವನ್ನಷ್ಟೇ ಹಿಡಿದುಕೊಂಡು ಪಾಕಿಸ್ತಾನವಾಗಲಿದ್ದ ಭಾಗಗಳಿಂದ ಭಾರತಕ್ಕೆ, ಭಾರತದಿಂದ ಪಾಕಿಸ್ತಾನವಾಗಲಿದ್ದ ಭಾಗಗಳಿಗೆ



ಯಾವ ಬಸ್, ರೈಲು, ವಾಹನ ಸಿಕ್ಕಿತೋ ಅವನ್ನು ಹತ್ತಿ ತಂಡ-ತಂಡವಾಗಿ ಹೋಗಲಾರಂಭಿಸಿದರು. ಕೆಲವರು ದಾರಿಯಲ್ಲೇ ಎಲ್ಲಾ ರೀತಿಯ ಧರ್ಮಾಂಧರ ಶಸ್ತ್ರಗಳಿಗೆ ಬಲಿಯಾದರು. ಮಹಿಳೆಯರು ಅತ್ಯಾಚಾರಕ್ಕೊಳಗಾದರು. ಕೆಲವರು ತಮ್ಮ ಅಳಿದುಳಿದ ವಸ್ತುಗಳನ್ನೂ ಕಳಕೊಂಡು ನಿರ್ಗತಿಕ ರಾದರು.

ಮಾತೃ ಭೂಮಿಯ ಮೇಲೆ ನಡೆದ ಈ ರಕ್ತರಂಜಿತ 'ಶಸ್ತ್ರಕ್ರಿಯೆ'ಯ ಹಿನ್ನೆಲೆಯಲ್ಲಿ ಆಗಸ್ಟ್ 14-15 ರ ಮಧ್ಯರಾತ್ರಿ 'ಇಡೀ ಜಗತ್ತು ಮಲಗಿರುವಾಗ ಭಾರತ ಸ್ವಾತಂತ್ರ್ಯದ ಬೆಳಕಿನತ್ತ ಜಾಗೃತವಾಗಿದೆ' ಎಂದು ಜವಾಹರ ಲಾಲ್ ನೆಹರೂ ಸಂವಿಧಾನ ಸಭೆಯಲ್ಲಿ ಸಾರಿದರು. ದೀರ್ಘಕಾಲದ ಕನಸು ನನಸಾಯಿತು. ಭಾರತ ಸ್ವತಂತ್ರವಾಯಿತು. ದೇಶ ವಿಭಜನೆಗೊಂಡರೂ, ಪರಿಣಾಮವಾಗಿ ಕೋಮು ದಂಗೆಗಳಿಗೆ ಆಹುತಿಯಾದ, ನಿರ್ಗತಿಕರಾದ ಸಾವಿರ-ಸಾವಿರ ಜನರ ನೋವು ಮನಸ್ಸನ್ನು ವಿಷಣ್ಣಗೊಳಿಸಿದರೂ ಕೊನೆಗೂ ದೇಶ ಸ್ವತಂತ್ರ ವಾಯಿತೆಂಬ ಆನಂದೋತ್ಸಾಹ ದೇಶದಲ್ಲೆಲ್ಲಾ ಸಂಚರಿಸಿತು. ಸುಮಾರು ಎರಡು ಶತಮಾನಗಳ ಕಾಲ ಸಾವಿರಾರು ಹುತಾತ್ಮರ ರಕ್ತದಿಂದ ತೊಯ್ದ ಮಣ್ಣಲ್ಲಿ ಸ್ವಾತಂತ್ರ್ಯದ ಹೂವು ಅರಳಿದ್ದನ್ನು ಕಂಡ ಅಪೂರ್ವ ಆನಂದ ಅದು.



ತಪ್ಪು ನೀತಿಗಳ ವಿರುದ್ಧ ಜೂನ್ ತಿಂಗಳಲ್ಲಿ ಪ್ರಚಾರಾಂದೋಲನ

ಎ.ಐ.ಕೆ.ಎಸ್. ನಿರ್ಧಾರ

ಕೇಂದ್ರ ಸರ್ಕಾರದ ತಪ್ಪು ಕೃಷಿ ನೀತಿಗಳ ಬಗ್ಗೆ ರೈತರ ನಡುವೆ ಜಾಗೃತಿ ಮೂಡಿಸಲು ಅಖಿಲ ಭಾರತ ಕಿಸಾನ್ ಸಭಾ ಜೂನ್ ತಿಂಗಳಲ್ಲಿ ದೇಶಾದ್ಯಂತ ರ್‍ಯಾಲಿಗಳನ್ನು, ಮತಪ್ರದರ್ಶನಗಳನ್ನು, ಧರಣಿಗಳನ್ನು ನಡೆಸಲು ನಿರ್ಧರಿಸಿದೆ. ಏಪ್ರಿಲ್ 20-21 ರಂದು ದಿಲ್ಲಿಯಲ್ಲಿ ಸಭೆ ಸೇರಿದ ಎಐಕೆಎಸ್‌ನ ಕೇಂದ್ರ ಕಿಸಾನ್ ಮಂಡಳಿ ಈ ನಿರ್ಧಾರ ಕೈಗೊಂಡಿದೆ.

ಈ ಕೃಷಿ ನೀತಿಗಳ ದುಷ್ಪರಿಣಾಮಗಳು ಈಗ ಎದ್ದು ಕಾಣುತ್ತಿವೆ - ರೈತರ ಆತ್ಮಹತ್ಯೆ ಪ್ರಕರಣಗಳಲ್ಲಿ ಹೆಚ್ಚಳ, ಗ್ರಾಮೀಣ ಪ್ರದೇಶಗಳಲ್ಲಿ ಹೆಚ್ಚುತ್ತಿರುವ ನಿರುದ್ಯೋಗ, ಬಡತನ, ನೈಸರ್ಗಿಕ ಪ್ರಕೋಪಗಳ ದುಷ್ಪರಿಣಾಮಗಳು ಹೆಚ್ಚೆಚ್ಚು ತೀವ್ರಗೊಳ್ಳುತ್ತಿರುವುದು, ಕೃಷಿಯಲ್ಲಿ ಹೂಡಿಕೆಯಲ್ಲಿ ಇಳಿತ, ಕೃಷಿ ಉತ್ಪಾದನೆಯಲ್ಲಿ ಇಳಿತ ಇತ್ಯಾದಿ. ಆದ್ದರಿಂದ ಈ ನೀತಿಗಳನ್ನು ಆಮೂಲಾಗ್ರವಾಗಿ ಬದಲಿಸಬೇಕು, ಬಡ ವಿಭಾಗಗಳಿಗೆ ಭೂಮಿ ಹಂಚಬೇಕು, ನೈಜ ಭೂ ಸುಧಾರಣಾ ಕ್ರಮಗಳ ಸಂಪೂರ್ಣ ಜಾರಿ, ಸಾರ್ವಜನಿಕ ನೀರಾವರಿ, ವಿದ್ಯುತ್ ಸೌಕರ್ಯಗಳ ವಿಸ್ತರಣೆ, ವಿಜ್ಞಾನ-ತಂತ್ರಜ್ಞಾನಗಳಿಗೆ ಹೆಚ್ಚಿನ ಹಣ ಹೂಡಿಕೆ, ಸಾಲ ಸೌಲಭ್ಯಗಳ ವಿಸ್ತರಣೆ, ಬಡ ವಿಭಾಗಗಳಿಗೆ ಸಬ್ಸಿಡಿಗಳು, ಒಂದು ಸಮಗ್ರ ಬೆಳೆ ವಿಮಾ ಯೋಜನೆ, ಬೆಲೆಗಳಲ್ಲಿ ತೀವ್ರ ಏರಿಳಿತದಿಂದ ರಕ್ಷಣೆ ನೀಡಲು ಬೆಂಬಲ ಬೆಲೆ, ಫಲಕಾರಿ ಬೆಲೆಗಳ ವ್ಯವಸ್ಥೆ, ಕೃಷಿ ಬೆಳೆಗಳ ಬೇಕಾಬಿಟ್ಟಿ ಆಮದಿಗೆ ತಡೆ, ಸಾರ್ವಜನಿಕ ಆರೋಗ್ಯ, ಶಿಕ್ಷಣ ಸೌಲಭ್ಯಗಳ ವಿಸ್ತರಣೆ ಈ ಎಲ್ಲಾ ಬೇಡಿಕೆಗಳನ್ನು ಇಟ್ಟಿದೆ.

ಹಲವು ಆಹಾರೇತರ ಬೆಲೆಗಳಾದ ರಬ್ಬರ್, ಹತ್ತಿ, ಮೆಣಸು, ತಂಬಾಕು, ಚಹಾ, ಕಾಫಿ, ಏಲಕ್ಕಿ, ಸೆಣಬು ಇತ್ಯಾದಿಗಳ ಬೆಲೆಗಳಲ್ಲಿ ತೀವ್ರ ಇಳಿಕೆ ಕಂಡು ಬಂದಿದೆ. ಸಂಪನ್ಮೂಲಗಳಿಲ್ಲದ ಬಡ ರೈತ ವಿಭಾಗಗಳನ್ನು ಇದು ತೀವ್ರವಾಗಿ ತಟ್ಟಿದೆ. ರೈತರ ಹಿತಾಸಕ್ತಿಗಳನ್ನು ರಕ್ಷಿಸಲು ಕೇಂದ್ರದಲ್ಲಿನ ಸರಕಾರ ಏನೂ ಕ್ರಮ ಕೈಗೊಳ್ಳುತ್ತಿಲ್ಲ ಎಂದು ಕೇಂದ್ರ ಕಿಸಾನ್ ಮಂಡಳಿ ದೂರಿದೆ.

ಕಳಪೆ ರಸಗೊಬ್ಬರ, ಕ್ರಿಮಿನಾಶಕಗಳು, ಕಳಪೆ ಗುಣಮಟ್ಟದ ಹೆಚ್ಚು ಇಳುವರಿ ಬೀಜಗಳಿಂದಾಗಿ ದೇಶದ ಹಲವು ಭಾಗಗಳಲ್ಲಿ ಬೆಳೆ ವಿಫಲವಾಗುತ್ತಿದೆ. ಇವೆಲ್ಲ ಕೃಷಿ ಲಾಗುವಾಡುಗಳ ನೈಜತೆಯನ್ನು ಪರೀಕ್ಷಿಸುವ ಒಂದು ಪ್ರಾಧಿಕಾರ ರಚಿಸಬೇಕೆಂದು ರೈತ ಸಂಘಟನೆಗಳು ಮತ್ತೆ - ಮತ್ತೆ ಆಗ್ರಹ ಪಡಿಸಿದರೂ, ತಪ್ಪಿತಸ್ಥರ ಮೇಲೆ ಕ್ರಮ ಕೈಗೊಳ್ಳಬೇಕೆಂದು ಹೇಳಿದರೂ, ಸರಕಾರ ಏನೂ ಮಾಡುತ್ತಿಲ್ಲ ಎಂದು ಎಐಕೆಎಸ್ ಹೇಳಿದೆ.

ಅಕಾಲ ಮಳೆ, ಸುಂಟರಗಾಳಿ, ನೆರೆ, ಬರ ಇತ್ಯಾದಿ ನೈಸರ್ಗಿಕ ಪ್ರಕೋಪಗಳು ಹೆಚ್ಚೆಚ್ಚು ತೀವ್ರಗೊಳ್ಳುತ್ತಿದ್ದು ಇದಕ್ಕೆ ನೀಡುವ ಪರಿಹಾರ ಏನೇನೂ ಸಾಲುತ್ತಿಲ್ಲ. ಆದ್ದರಿಂದ ಈ ಪ್ರಕೋಪಗಳಿಂದ ಪರಿಹಾರ ನೀಡಲು ಒಂದು ಹೊಸ ವ್ಯವಸ್ಥೆ ಏರ್ಪಡಿಸಬೇಕು, ಎಲ್ಲಾ ಬೆಳೆಗಳನ್ನು ಒಳಗೊಂಡ ಸಮಗ್ರ ಬೆಳೆ ವಿಮಾ ಯೋಜನೆ ಬೇಕು ಎಂದು ಎಐಕೆಎಸ್ ಆಗ್ರಹ ಪಡಿಸಿದೆ.

ವಾಣಿಜ್ಯ ಮಂತ್ರಿಗಳು 1997-2002 ರ ಅವಧಿಗೆ ಪ್ರಕಟಿಸಿದ ಆಮದು-ರಫ್ತು ನೀತಿಯಲ್ಲಿ ಹತೋಟಿ ತೆಗೆದ 340 ಐಟಂಗಳಲ್ಲಿ ಹಲವು ಕೃಷಿ ಉತ್ಪನ್ನಗಳಿವೆ. ಇಂತಹ ಕೃಷಿ ಬೆಳೆಗಳ ಆಮದು ಇಲ್ಲಿ ಈ ಬೆಳೆಗಳ ಬೆಲೆಗಳಲ್ಲಿ ತೀವ್ರ ಕುಸಿತ ತರುತ್ತದಾದ್ದರಿಂದ ಇಂತಹ ಆಮದುಗಳನ್ನು ನಿಲ್ಲಿಸಬೇಕೆಂದು ಎಐಕೆಎಸ್ ಒತ್ತಾಯಿಸಿದೆ.

ಈಗಿರುವ ಮಾರುಕಟ್ಟೆ ವ್ಯವಸ್ಥೆ ಬಹುಪಾಲು ರೈತರ ಹಿತಾಸಕ್ತಿಗಳನ್ನು ರಕ್ಷಿಸುತ್ತಿಲ್ಲ, ಇದರಲ್ಲಿ ಆಮೂಲಾಗ್ರ ಬದಲಾವಣೆ ಬೇಕು, ಕೃಷಿ ಬೆಳೆಗಳ ದಾಸ್ತಾನಿಗೆ ಮಳಿಗೆಗಳು, ಕೋಲ್ಡ್ ಸ್ಟೋರೇಜ್‌ಗಳ ವ್ಯವಸ್ಥೆಯಾಗಬೇಕೆಂದೂ ಎಐಕೆಎಸ್ ಆಗ್ರಹ ಪಡಿಸಿದೆ.

ಗ್ಯಾಟ್ ಒಪ್ಪಂದ, ವಿಶ್ವಬ್ಯಾಂಕ್, ವಿಶ್ವ ವ್ಯಾಪಾರ ಸಂಸ್ಥೆಯ ನಿರ್ದೇಶನಗಳ ದುಷ್ಪರಿಣಾಮಗಳು ರೈತರ ಅನುಭವಕ್ಕೆ ಬರಲಾರಂಭಿಸಿದೆ. ಸಾಗರ ಉತ್ಪನ್ನಗಳು, ಬಾಸ್ಮತಿ ಅಕ್ಕಿ ಮತ್ತು ಇತರ ಕೃಷಿ ಬೆಳೆಗಳು ಬಹುರಾಷ್ಟ್ರೀಯ ಕಂಪನಿಗಳು ಹಾಕುವ ಮಿತಿಗಳಿಂದಾಗಿ ಕಷ್ಟ - ನಷ್ಟಗಳನ್ನು ಅನುಭವಿಸುತ್ತಿವೆ. ರೈತರ ಹಿತಾಸಕ್ತಿಗಳನ್ನು ರಕ್ಷಿಸಲು ಭಾರತ ಸರಕಾರ ಈ ಪ್ರಶ್ನೆಗಳನ್ನು ಗಂಭೀರವಾಗಿ ಎತ್ತಿಕೊಳ್ಳುತ್ತಿಲ್ಲ ಎಂದಿರುವ ಎಐಕೆಎಸ್ ಈ ಹಿನ್ನೆಲೆಯಲ್ಲಿ ಅಖಿಲ ಭಾರತ ಪ್ರಚಾರಾಂದೋಲನ ನಡೆಸಲು ನಿರ್ಧರಿಸಿದೆ.

ಕೃಷಿ ನೀತಿಗಳ ಪ್ರಭಾವವನ್ನು ಅಧ್ಯಯನ ಮಾಡಲು ಒಂದು ಅಖಿಲ ಭಾರತ ವಿಚಾರ ಸಂಕಿರಣವನ್ನು ಜುಲೈ ಅಂತ್ಯ ಅಥವಾ ಆಗಸ್ಟ್ ಆರಂಭದಲ್ಲಿ ದಿಲ್ಲಿಯಲ್ಲಿ ನಡೆಸಲು ನಿರ್ಧರಿಸಲಾಯಿತು. ರೈತ-ವಿರೋಧಿ ನೀತಿಗಳ ವಿರುದ್ಧ ಅಖಿಲ ಭಾರತ ಪ್ರಚಾರಾಂದೋಲನ ಮತ್ತು ಹೋರಾಟಗಳನ್ನು ಸಂಘಟಿಸಲು ಎಡ ಮತ್ತು ಪ್ರಜಾಸತ್ತಾತ್ಮಕ ರೈತ ಸಂಘಟನೆಗಳ ಜಂಟಿ ಸಮಾವೇಶ ನಡೆಸಲು ಕೂಡಾ ನಿರ್ಧರಿಸಲಾಯಿತು.

ಅಣಕ

ಶರತ್ ಚಂದ್ರ

ಪ್ರಾತಃ ಸ್ಮರಣೀಯ..... ವೀರಪ್ಪನ್ ....!

ಬೆಳಗ್ಗೆ ವಾಕಿಂಗ್‌ಗೆ ಹೊರಟಿದ್ದೆ. ಯಾವಾಗಲೂ ವಾಕಿಂಗ್‌ಗೆ ಹೋಗುವಾಗ ಪಾರ್ಕಿನಲ್ಲಿ ಧ್ವಜ ಇಟ್ಟು ಕಬ್ಬಡ್ಡಿ ಆಡುವ ಹುಡುಗರು ಆಗಲೇ ಮನೆಗೆ ಹೊರಟಿದ್ದರು. ನಾನು ಹೊರಟಿದ್ದು ತಡವಾಗಿತ್ತು ಅಂತ ಕಾಣುತ್ತದೆ. ನನ್ನ ಮುಂದೆ ಹುಡುಗರು ಮಾತನಾಡುತ್ತಾ ಹೋಗುತ್ತಿದ್ದರು.

"ಏನು ಗುರು! ಇವತ್ತು ನಿಮ್ಮ ಗುರೂಜಿಗೆ ಏನೋ ಆಗಿದೆ. ಏನೇನೋ ಅಂತಿದ್ರು?

"ಯಾಕೆ ಸರಿಯಾಗೇ ಇದ್ರಲ್ಲ"

"ಇಲ್ಲಪ್ಪ! ಸಂಘದ ಸರ್ಕಾರ ಬಂದಾಗಿಂದ ಖುಷಿಯಾಗಿದ್ದವರು ಯಾಕೋ ಡಲ್ಲಾಗಿದ್ರಲ್ವ ಇವತ್ತು. ಅಲ್ಲದೆ ಬೆಳಗ್ಗೆ ಕ್ಲಾಸಲ್ಲಿ ಏನೇನೋ ಹೇಳ್ಬಿಟ್ರಲ್ಲಾ"

"ಸರಿಯಾಗಿ ಹೇಳಿದ್ರಲ್ಲಾ"

"ಏನೋ ಕ್ಲಾಸಲ್ಲಿ ನಿದ್ದೆ ಮಾಡ್ತಿದ್ದೀಯಾ. ಪ್ರಾತಃ ಸ್ಮರಣೀಯರು ಅಂತ ಯಾವಾಗಲೂ ಹೇಳ್ತಾರಲ್ಲ - ಹೆಗ್ಡೆವಾರ್, ಗೋಲ್ವಲ್ಕರ್, ವೀರ ಸಾವರ್ಕರ್, ಗೋಡ್ಸೆ ಜೊತೆ ಇನ್ನಾವುದೋ ಹೆಸರುಗಳನ್ನು ಹೇಳಿದ್ರು"

"ಓಹೋ ನಾನು ಸರಿಯಾಗಿ ಕೇಳ್ಲಿಲ್ಲ"

"ಜಯಲಲಿತಾ, ಸುಖರಾಮ್, ಜಾರ್ಜ್ ಫರ್ನಾಂಡೀಸ್, ಮಮತಾ, ರಾಮಕೃಷ್ಣ ಹೆಗಡೆ ಅಂತ ಎಲ್ಲಾ ಪ್ರಾತಃ ಸ್ಮರಣೀಯರು ಅಂತ ಹೇಳ್ಲಿಲ್ವಾ"

"ಹೌದು! ಹೌದು! ನಾನು ಕೇಳ್ದೆ. ಅಷ್ಟು ಮಾತ್ರವಲ್ಲ, ಫರೂಕ್ ಅಬ್ದುಲ್ಲಾ, ನಾಯ್ಡೂನೂ ಲಿಸ್ಟಲ್ಲಿ ಇದ್ರು"

"ಅದರಲ್ಲಿ ವಿಶೇಷವೇನಿದೆ? ಸಂಘ ಸರಕಾರಕ್ಕೆ ಬೆಂಬಲ ಕೊಡುವವರೆಲ್ಲರನ್ನೂ ಪ್ರಾತಃ ಸ್ಮರಣೀಯರ ಸಾಲಿಗೆ ಸೇರಿಸಿದ್ದಾರೆ. ಅಷ್ಟೆ!"

"ಅದಲ್ಲ ಕಾರಣ! ನಾನು ಹೇಳ್ಲಾ? ಗುರೂಜಿಗೆ ಸಂಘದವರಿಗೆಲ್ಲಾ ಇವರೆಲ್ಲಾ ರಾತ್ರಿಯೆಲ್ಲಾ ನಿದ್ದೆ ಕೆಡ್ಸಾತ್ತ ಇದ್ದಾರೆ - ಅದು ಮಾಡಿ, ಇದು ಮಾಡಿ, ಈ ಸರಕಾರ ಬೀಳಿಸಿ, ಆ ಸರಕಾರ ಬೀಳಿಸಿ ಅಂತ. ಕನಸಲ್ಲೂ ಬಂದು ಗಲಾಟೆ ಮಾಡ್ತಾರೆ. ಅದಕ್ಕೆ ಬೆಳಗ್ಗೆ ನಿದ್ದೆ ಕಣ್ಣಲ್ಲಿ ತಪ್ಪು ಹೇಳಿರಬೇಕು - ಪ್ರಾತಃ ಸ್ಮರಣೀಯರ ಲಿಸ್ಟಲ್ಲಿ ಅಷ್ಟೆ!"

"ಏ ಸುಮ್ಮನಿರೋ! ನಿಂದು ಯಾವಾಗಲೂ ತರಲೆ. ಗುರೂಜಿ ಹಾಗೆಲ್ಲ ತಪ್ಪು ಹೇಳಲ್ಲ"

"ಗುರೂ! ಇನ್ನೂ ಒಂದು ಹೆಸರು ಹೇಳಿದ್ರು ಕೊನೆಗೆ. ನೀವ್ಯಾರೂ ಕೇಳಿಸಿಕೊಳ್ಳಲಿಲ್ಲ ಅಂತ ಕಾಣುತ್ತೆ. ವೀರಪ್ಪನ್ ಹೇಗೆ ಪ್ರಾತಃ ಸ್ಮರಣೀಯ ಆದ ಅಂತ ಗೊತ್ತಾಗ್ಲೆ ಇಲ್ಲ ನಂಗೆ. ಏನೋ ತರ್ಲೆ! ನಿಂಗೆ ಗೊತ್ತಾ ಯಾಕೆ ಅಂತ?"

"ನೀವೆಲ್ಲಾ ನನ್ನನ್ನ ತರಲೆ ಅಂತೀರಾ! ಆದ್ರೆ ಕೇಳಿ. ವೀರಪ್ಪನ್ ಯಾಕೆ ಪ್ರಾತಃ ಸ್ಮರಣೀಯ ಅಂತ. ಜಯಲಲಿತಾ, ರಾಮಕೃಷ್ಣ ಹೆಗಡೆ ಇಬ್ಬರೂ ಸಂಘ ಸರ್ಕಾರವನ್ನು ಪೀಡಿಸ್ತಾ ಇಲ್ವಾ - ತಮಿಳುನಾಡು, ಕರ್ನಾಟಕ ರಾಜ್ಯ ಸರ್ಕಾರ ವಜಾ ಮಾಡಿ ಅಂತ. ಆ ಬಗ್ಗೆ ಯೋಚನೆ ಮಾಡ್ತಾ ಗುರೂಜಿ ಮಲಗಿರಬೇಕು. ಅದಕ್ಕೆ ವೀರಪ್ಪನ್ ಹೆಸರು ನಿದ್ದೆ ಕಣ್ಣಲ್ಲಿ ಹೇಳಿದ್ದಾರೆ"

"ಅದಕ್ಕೂ ವೀರಪ್ಪಂಗೂ ಏನೋ ಸಂಬಂಧ ! ಏ ತರಲೆ!"

"ವೀರಪ್ಪನ್‌ನ್ನ ಎರಡೂ ಸರ್ಕಾರಗಳು ಸೇರಿ ಹಿಡಿಯಾಕೆ ಆಗಿಲ್ಲ. ಸರಂಡರ್ ಆಗ್ತೀನಿ, ಇಲ್ಲ ಅಂತ ವೀರಪ್ಪನ್ ತಾರಮ್ಮಯ್ಯ ಮಾಡ್ತಾ ಇಲ್ವ. ವೀರಪ್ಪನ್ ಹಿಡಿಯಾಕೆ ಆಗ್ತಿಲ್ಲ ಈ ಎರಡೂ ಸರ್ಕಾರಗಳಿಗೆ. ಲಾ ಅಂಡ್ ಆರ್ಡರ್ ಸರಿಯಿಲ್ಲ ಅಂತ ಕರುಣಾನಿಧಿ, ಪಟೇಲ್ ಸರ್ಕಾರ ಡಿಸ್‌ಮಿಸ್ ಮಾಡಿಬಿಡಬಹುದಲ್ಲ ಅಂತ ಗುರೂಜಿಗೆ ಐಡಿಯಾ ಹೊಳೆದಿರಬೇಕು ನಿನ್ನೆ ಕನಸಲ್ಲಿ. ಅದ್ಕೆ ನಿದ್ದೆ ಕಣ್ಣಲ್ಲಿ ವೀರಪ್ಪನ್ ಹೆಸರು ಪ್ರಾತಃ ಸ್ಮರಣೀಯರ ಲಿಸ್ಟಲ್ಲಿ ಬಂದು ಬಿಡ್ತು"

"ಏ ತರ್ಲೆ ! ನೀನು ಭಲೆ ತಲೆ ಓಡಿಸ್ತೀಯಾ. ಇರ್‍ಲೂ ಬೌದು"

"ನಾಳೆನೂ ಪ್ರಾತಃ ಸ್ಮರಣೀಯ ಲಿಸ್ಟು ಹೇಳ್ತಾರಲ್ಲ. ನಾಳೆನೂ ಇವರದ್ದೆಲ್ಲಾ ಹೆಸರು ಹೇಳಿದ್ರೆ ನಿಜವಾಗಿ ಅವರು ಲಿಸ್ಟ್ ಸೇರಿದ್ದಾರೆ ಅಂತ. ಇಲ್ಲಾಂದ್ರೆ ತರ್ಲೆ ಹೇಳಿದ್ದೆ ಕರೆಕ್ಟು. ನಿದ್ದೆ ಕಣ್ಣಲ್ಲಿ ಹೇಳಿದ್ದು ಅಂತ. ಅಷ್ಟಕ್ಕೂ ನಮಗೇನಂತೆ. ಪ್ರಾತಃ ಸ್ಮರಣೀಯ ಅಂದ್ರೆ ನಾವು ಒಪ್ಪಿಕೊಳ್ಳಬೇಕಲ್ಲ."

ಹುಡುಗರ ಮಾತು ಕೇಳಿ ದಂಗಾದೆ. 'ಇವತ್ತಿನ ಚಿಕ್ಕ ಚಡ್ಡಿಗಳೇ, ನಾಳಿನ ದೊಡ್ಡ ಚಡ್ಡಿಗಳು' ಅಲ್ಲವೇ?

ಒಂದು ತಿಂಗಳ ....

ಪುಟ 1 ರಿಂದ

ಆಡಳಿತೆಗೆ ಗಂಡಾಂತರಕಾರಿಯಾಗಿರುವ ಹಲವು ಕ್ರಮಗಳನ್ನು ಬಿಜೆಪಿ ನೇತೃತ್ವದ ಸರಕಾರ ಕೈಗೊಳ್ಳುತ್ತಾ ಬಂದಿದೆ.

ಇವುಗಳಲ್ಲಿ ಇನ್ನೂ ಎರಡು ಮುಖ್ಯ ಕ್ರಮಗಳನ್ನು ಉಲ್ಲೇಖಿಸಿ ಬಿಜೆಪಿಯ ಒಂದು ತಿಂಗಳ ನಿರುಪಯುಕ್ತ, ಆದರೆ ಅಪಾಯಕಾರಿ ಆಡಳಿತೆಯ ಈ ಲೇಖನವನ್ನು ಕೊನೆಗೊಳಿಸಬಯಸುತ್ತೇವೆ.

ಒಂದು, ತರಾತುರಿಯಿಂದ ಹಲವು ರಾಜ್ಯಗಳ ರಾಜ್ಯಪಾಲರನ್ನು ಬದಲಿಸಿ, ಕೆಲವು ಆರ್.ಎಸ್.ಎಸ್. ರಾಜ್ಯಪಾಲರನ್ನು ನೇಮಕಗೊಳಿಸಿದ್ದು, - ಅದೂ ವಿರೋಧ ಪಕ್ಷದ ಆಡಳಿತೆ ಇರುವಲ್ಲಿ.

ಎರಡು, ಸಂವಿಧಾನವನ್ನೇ 'ಪ್ರಜಾಪ್ರಭುತ್ವ' ನೆಲೆಯಿಂದ ಅಧ್ಯಕ್ಷೀಯ (ಏಕವ್ಯಕ್ತಿಯ ಸರ್ವಾಧಿಕಾರದತ್ತ) ನೆಲೆಗೆ ಬದಲಾಯಿಸುವ ಒಳ ಇಂಗಿತವುಳ್ಳ (ಈಗ ಅದನ್ನು ಅಡ್ವಾಣಿಸಾಹೇಬರು ಬಹಿರಂಗ ಪಡಿಸಿದ್ದಾರೆ) ಉದ್ದೇಶದಿಂದ ಸಂವಿಧಾನಕ್ಕೆ ಮೂಲಭೂತ ತಿದ್ದುಪಡಿಗಳನ್ನು ಸೂಚಿಸುವ ಸಲುವಾಗಿ ಒಂದು ಪೆನೆಲ್ ರಚನೆ ಮಾಡಿರುವುದು.

ಬಿಜೆಪಿ ಮತ್ತು ಮಿತ್ರ ಪಕ್ಷಗಳ ಸರಕಾರವು ಬಿಜೆಪಿ ನೇತೃತ್ವ ಸರಕಾರವೆಂದರೂ, ಬಿಜೆಪಿ ಆರ್.ಎಸ್.ಎಸ್. ನಿಂದ ನಿಯಂತ್ರಿಸಲ್ಪಡುತ್ತಿರುವುದರಿಂದ ಅದು ಆರ್.ಎಸ್.ಎಸ್. ಸರಕಾರವೆಂದು ಸಿಪಿಐ(ಎಂ) ಕೇಂದ್ರ ಸಮಿತಿಯು ಸ್ಪಷ್ಟ ಪಡಿಸುದಕ್ಕೆ ಬೇರೆ ಸಾಕ್ಷಿ ಬೇಕೆ?

ಗೋಲ್ವಾಲ್ಕರ್‌ರಿಗೆ 'ರಾಷ್ಟ್ರಪ್ರಶಸ್ತಿ' ಯನ್ನು ಮರಣಾನಂತರ ಕೊಡುವ ಕುರಿತು ಈಗಾಗಲೇ ಸೂಚನೆ ಇದೆಯಂತೆ.. ದೇಶದ ವಿದ್ಯಾಭ್ಯಾಸ ಕ್ಷೇತ್ರವನ್ನೇ ಮೂಲಭೂತವಾಗಿ ಬದಲು ಮಾಡುವ ಶಿಕ್ಷಣಧೋರಣೆ ತಯಾರಾಗುತ್ತಿದೆಯಂತೆ. 2000 ನೇ ಇಸವಿಯಲ್ಲಿ ನಡೆಯುವ ಜನಗಣತಿಯಲ್ಲಿ ಪ್ರತಿಯೊಬ್ಬನ ಜಾತಿ-ಉಪ ಜಾತಿಯನ್ನು ಪುನಃ ಕೇಳಿ ಪಡೆದುಕೊಳ್ಳಲಾಗುವುದಂತೆ. ರಾಷ್ಟ್ರದಪ್ರತಿಯೊಬ್ಬ ಪ್ರಜೆಗೂ ಒಂದು ಗುರುತು ಕಾರ್ಡು ಕೊಡಲಾಗುವುದೆಂದೂ, ಅದರಲ್ಲಿ ಅವರ ಜಾತಿ-ಉಪಜಾತಿ ಉಲ್ಲೇಖವಿರುವುದೆಂದೂ ಕೇಳಿಬರುತ್ತಿದೆ. ....ನೋಡೋಣ!

ವಾರದ ವ್ಯಂಗ್ಯ ಚಿತ್ರ

ಟೈಂಸ್ ಆಫ್ ಇಂಡಿಯಾದಲ್ಲಿ ಆರ್.ಕೆ.ಲಕ್ಷ್ಮಣ್



ನವಕರ್ನಾಟಕ ಜ್ಞಾನ-ವಿಜ್ಞಾನ ಕೋಶದ ಬಿಡುಗಡೆ

"ಕನ್ನಡದಲ್ಲಿ ಧಾರ್ಮಿಕ ಸಾಹಿತ್ಯ ಬೆಳೆದಂತೆ, ವೈಜ್ಞಾನಿಕ ಸಾಹಿತ್ಯ ಬೆಳೆದಿಲ್ಲ. ಧಾರ್ಮಿಕ ಪ್ರವೃತ್ತಿಯನ್ನು ತೊರೆದು ವೈಜ್ಞಾನಿಕ ಮನೋಭಾವ ತಳೆದಾಗ ಮಾತ್ರ ಸುಧಾರಣೆ ಆಗುತ್ತದೆ" ಎಂದು ಡಾ|| ಹಾ.ಮಾ. ನಾಯಕ ಹೇಳಿದರು. ನವಕರ್ನಾಟಕ ಜ್ಞಾನವಿಜ್ಞಾನ ಕೋಶದ ಬಿಡುಗಡೆ ಸಮಾರಂಭದಲ್ಲಿ ಅಧ್ಯಕ್ಷತೆ ವಹಿಸಿ ಮಾತಾಡುತ್ತಿದ್ದ ಅವರು, ಮುಂದುವರಿದು ವಿಶ್ವವಿದ್ಯಾಲಯಗಳು ಮಾಡಬೇಕಾಗಿದ್ದ ಕೆಲಸವನ್ನು ನವ ಕರ್ನಾಟಕದಂಥ ಖಾಸಗಿ ಸಂಸ್ಥೆ ಕೈಗೆತ್ತಿಕೊಂಡಿರುವುದು ಶ್ಲಾಘನೀಯ ಎಂದು ಹೇಳಿದರು.

ಏಪ್ರಿಲ್ 26ರಂದು ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ನಡೆದ ಕಿಕ್ಕಿರಿದ ಸಮಾರಂಭದಲ್ಲಿ, ರಾಷ್ಟ್ರೀಯ ಉನ್ನತ ಅಧ್ಯಯನ ಸಂಸ್ಥೆಯ ನಿರ್ದೇಶಕರಾದ ಪ್ರೊ|| ಆರ್. ನರಸಿಂಹ ಅವರು ಸಂಪುಟಗಳನ್ನು ಬಿಡುಗಡೆ ಮಾಡಿದರು. ಪಾಶ್ಚಾತ್ಯ ದೇಶಗಳು ವಿಜ್ಞಾನಕ್ಕಾಗಿ ನೂರು ರೂಪಾಯಿ ಖರ್ಚು ಮಾಡಿದರೆ, ನಾವು ಕೇವಲ ಐವತ್ತು ಪೈಸೆಯನ್ನು ಮಾತ್ರ ಖರ್ಚು ಮಾಡುತ್ತೇವೆ ಎಂದು ಅವರು ನುಡಿದರು.

ಜವಾಹರಲಾಲ್ ನೆಹರೂ ತಾರಾಲಯದ ನಿರ್ದೇಶಕರಾದ ಪ್ರೊ|| ಸಿ.ವಿ. ವಿಶ್ವೇಶ್ವರ ಅವರು ಕೃತಿ ಪರಿಚಯ ಮಾಡಿದರು.

ಸಂಪುಟಗಳ ಪ್ರಧಾನ ಸಂಪಾದಕರಾದ ಪ್ರೊ|| ಎಂ. ಎ. ಸೇತುರಾವ್ ಮುಖ್ಯ ಅತಿಥಿಗಳ ಪರಿಚಯ ಮಾಡಿಕೊಟ್ಟರು. ಮತ್ತೊಬ್ಬ ಪ್ರಧಾನ ಸಂಪಾದಕರಾದ ಕೆ.ಎಲ್. ಗೋಪಾಲಕೃಷ್ಣರಾವ್ ಸಂಪುಟಗಳ ಸಂಪಾದನೆಯ ಅನುಭವಗಳನ್ನು ಸಭಿಕರೊಂದಿಗೆ ಹಂಚಿಕೊಂಡರು. ಸಮಾರಂಭದಲ್ಲಿ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಪ್ರೊ|| ಚಂದ್ರಶೇಖರ ಪಾಟೀಲರು ವೇದಿಕೆಯ ಮೇಲೆ ಉಪಸ್ಥಿತರಿದ್ದರು.

ನವಕರ್ನಾಟಕ ಪ್ರಕಾಶನ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕರಾದ ಆರ್.ಎಸ್. ರಾಜಾರಾಮ್, ಇಂಥ ಬೃಹತ್ ಯೋಜನೆಯನ್ನು ಕೈಗೆತ್ತಿಕೊಳ್ಳಲು ಪ್ರೇರಕವಾದ ಪರಿಸ್ಥಿತಿಯನ್ನು, ಸುಮಾರು 36 ಮಂದಿ ವಿಜ್ಞಾನ ಲೇಖಕರು ಬಹಳ ಉತ್ಸಾಹದಿಂದ ಈ ಸಂಪುಟಗಳ ರಚನೆಯಲ್ಲಿ ಭಾಗಿಯಾದುದನ್ನು ವಿವರಿಸಿದರು. ಅಲ್ಲದೆ ಜ್ಞಾನ-ವಿಜ್ಞಾನ ಕೋಶದ ಬಗ್ಗೆ ನಾಡಿನ ಹಲವು ಕಡೆಯಿಂದ ಓದುಗರು ತೋರಿದ ಪ್ರತಿಕ್ರಿಯೆಯನ್ನು ಸ್ಮರಿಸುತ್ತ, ಕನ್ನಡ ಪುಸ್ತಕಗಳನ್ನು ಓದುವ ಜನರು ಕಡಿಮೆಯಾಗುತ್ತಿದ್ದಾರೆ ಎಂಬ ಅಭಿಪ್ರಾಯವನ್ನು ಅಲ್ಲಗಳೆದರು. ಖ್ಯಾತ ವಿಜ್ಞಾನ ಲೇಖಕರಾದ ಜಿ.ಟಿ. ನಾರಾಯಣರಾವ್ ಅವರ ಪ್ರಧಾನ ಸಂಪಾದಕತ್ವದಲ್ಲಿ 'ಕನ್ನಡ ವಿಜ್ಞಾನ ಪದವಿವರಣ ಕೋಶ' ಎಂಬ ಮತ್ತೊಂದು ಬೃಹತ್ ಕೋಶದ ಕೆಲಸ ಕಳೆದ ಐದು ವರ್ಷಗಳಿಂದ ನಡೆಯುತ್ತಿದ್ದು, ಈ ವರ್ಷವೇ ಅದು ಪ್ರಕಟವಾಗುವುದಾಗಿ ಹೇಳಿದರು. ಹಾಗೆಯೇ ನವಕರ್ನಾಟಕ ಪ್ರಕಟಿಸಲಿರುವ ರಂಗಭೂಮಿ ಕೈಪಿಡಿ, ಎರವಲು ಪದಕೋಶ ಇತ್ಯಾದಿ ಪ್ರಕಟಣೆಗಳ ಕುರಿತು ವಿವರಿಸಿದರು.

ಸಂಪುಟಗಳಲ್ಲಿ ಲೇಖನಗಳನ್ನು ಬರೆದಿರುವ ಲೇಖಕರು ಗೌರವ ಪ್ರತಿಗಳನ್ನು ಸ್ವೀಕರಿಸಿದರು. ಪ್ರಧಾನ ಸಂಪಾದಕರನ್ನು, ಹಾಗೂ ಮುಖ್ಯ ಅತಿಥಿಗಳನ್ನು ಗೌರವಿಸಲಾಯಿತು. ಈ ಬೃಹತ್ ಕಾರ್ಯಕ್ಕೆ ನೆರವಾದ ಇತರ ಹಲವರಿಗೂ ಗೌರವ ಪ್ರತಿಗಳನ್ನು ನೀಡಿ ಸನ್ಮಾನಿಸಲಾಯಿತು.

ನವಕರ್ನಾಟಕ ಜ್ಞಾನ-ವಿಜ್ಞಾನಕೋಶ ಪ್ರಕಟಣಾಪೂರ್ವ ರಿಯಾಯಿತಿಯ ಅವಕಾಶ ಪಡೆದುಕೊಂಡ ಹಲವು ಓದುಗರು ಸಮಾರಂಭದ ಸ್ಥಳದಲ್ಲಿಯೇ ಸಂಪುಟಗಳಿಗಾಗಿ ನೊಂದಾಯಿಸಿದರು, ಹಾಗೂ ಸಂಪುಟಗಳನ್ನು ಖರೀದಿಸಿದರು.

ಕೆ.ವಿ. ವೆಂಕಟರಾಮು ಅವರು ಕಾರ್ಯಕ್ರಮ ನಿರ್ವಹಣೆ ಮಾಡಿದರು.

ನವಕರ್ನಾಟಕದ ಹಿರಿಯ ಸಂಪಾದಕರಾದ ಸಿ.ಆರ್. ಕೃಷ್ಣರಾವ್ ವಂದನಾರ್ಪಣೆ ಮಾಡಿದರು.

KRNM/BGS-405 MAG(2) PRBDECR 319-79/79

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಪಿ.ರಾಮಚಂದ್ರರಾವ್
ಸಂಪಾದಕರು: ಪಿ.ರಾಮಚಂದ್ರರಾವ್, ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462,
ವ್ಯವಸ್ಥಾಪಕ ಕಛೇರಿ: ನಂ.24, 5ನೇ ಮುಖ್ಯರಸ್ತೆ, ಗಾಂಧಿನಗರ, ಬೆಂಗಳೂರು-9 ಮುದ್ರಣ: ಕಂಠೀರವ ಆಫ್‌ಸೆಟ್, ನಂ.6, 7ನೇ ಮುಖ್ಯರಸ್ತೆ, ಎಸ್.ಆರ್.ನಗರ, ಬೆಂ.27